(ಶ್ರೀ ಎಸ್. ಬಂಗಾರಪ್ಪ)

discussion of the Governor's Address ಔಪಚಾರಿಕವಾದ ಬಿಸಿನೆಸ್ ಮಾತ್ರ ಮಾಡಬಹುದು. ಈಗ ಮೋಷನ್ ಆಫ್ ಥ್ಯಾಂಕ್ಸ್ ಮೂವ್ ಮಾಡಿಲ್ಲ; ಮತ್ತು ಒಂದೆರಡು ದಿವಸ ಕೂಡ ಅಲಾಟ್ ಮಾಡಿಲ್ಲ. ಅಷ್ಟೇ ಅಲ್ಲದೆ. Even under Rule 21, the financial matters cannot be taken up.

Sri D. DEVARAJ URS.—Madam Speaker, I have heard the arguments in support of the point of order raised by the hon. Member Sri Bangarappa and Sri Krishnan has supported his point of view. I think, we must not go back after making the speech. I am sure the Hon. Member Sri Bangarappa will not putforth the same arguments in favour of that point of order unless he is asked to speak once again. The point is very simple. Under Chapter V, Rule 18 (2) : The Speaker shall in consultation with the Leader of the House allot time for the discussion of the matter referred to under Art. 176 of the Constitution. It only means, it enjoins on the Speaker to fix a date and allot time for discussion on the Governor's Address. But still I believe ; and according to this rule also, it is in the hands of the Hon. Speaker to fix up that day or days on which the Governor's Address should be discussed. Now in the absence of those days being fixed, to take shelter under Rule 21(2), is not correct...

Sri M. S. KRISHNAN.—In the first notice that was circulated to us, the dates have been fixed for the discussion of the Governor's address. It is fixed on the 29th and 30th March 1972.

Sri D. DEVARAJ URS.—Even supposing it is 29th and 30th, if we want to transact some other business relating to the Government business or Government Bills, then I understand, as Sri Bangarappa and yourself pointed out, that you will have to move a motion on the floor of the House stating to adjourn this debate on the Governor's Address to give precedence to Government Bill which requires to be discussed or Government business to be transacted. Now in the absence of this, the Governor's address even if it is fixed on the 29th and 30th, there will be no difficulty to take up any other business before the House. So, I do not think there is any point of order in this.

MADAM SPEAKER.—There is no point of order.

(i) BUDGET ESTIMATES FOR 1971-72—SUPPLEMENTARY AND ADDITIONAL DEMANDS FOR GRANTS

General Discussion

Demand No. 3

Sri M. Y. GHORPADE.—Sir, On the recommendation of the Governor I beg to move.

"That further sums not exceeding Rs. 19,00,000 be granted out of the consolidated fund of the State to defray charges

which will come in course of payment during the year ending the 31st March 1972'' in respect of State Excise Duties—Administration."

MADAM SPEAKER.—Motion moved:

" That further sums not exceeding Rs. 19,00,000 be granted out of the consolidated fund of the State to dafray charges which will come in course of payment during the year ending 31st March 1972 in respect of State Excise Duties—Administration.''

This Demad and all the other Demands are demand to have been moved and the debates will begin.

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, 1971-72 ನೇ ಇಸವಿಗೆ ಸಂಬಂಧಪಟ್ಟ ಮೊದಲನೆಯ ಕಂತಿನ ಹೆಚ್ಚುವರಿ ಬೇಡಿಕೆಗಳನ್ನು ಇಂದು ನಮ್ಮ ಮುಂದೆ ನಮ್ಮ ನೂತನ ಸರ್ಕಾರದ ಆರ್ಥಿಕ ಮಂತ್ರಿಯವರು ಒಪ್ಪಿಗೆ ಕೊಡಬೇಕೆಂದು ಇಟ್ಟಿದ್ದಾರೆ. ಸರ್ವೆ ಸಾಮಾನ್ಯವಾಗಿ ವರ್ಷದ ಆರಂಭದಲ್ಲಿ ಕೆಲವು ಖರ್ಚುಗಳ ಬಗ್ಗೆ ನಿರೀಕ್ಷಣೆ ಮಾಡುವ ಹಾಗೆ ಇಲ್ಲ. ನಾನು ಈ ಹೆಚ್ಚುವರಿ ಬೇಡಿಕೆಗಳನ್ನು ವಿರೋಧ ಮಾಡುವ ಕಾಲದಲ್ಲಿ ಅದಕ್ಕೆ ಕೆಲವು ಕಾರಣಗಳನ್ನು ಇಲ್ಲಿ ಕೊಡಬಯಸುತ್ತೇನೆ. ಏಕೆಂದರೆ, ಈ ಕಡೆ ಕುಳಿತುಕೊಂಡಿದ್ದಂತಹ ಮಹನೀಯರು ಇಂದು ಆ ಕಡೆ ಕುಳಿತುಕೊಂಡಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ನಾವು ಇವತ್ತು ಚುನಾಯಿತರಾಗಿ ವಿಧಾನಮಂಡಲದಲ್ಲಿ ಕುಳಿತುಕೊಂಡು ನಮ್ಮ ಕೆಲಸಕಾರ್ಯಗಳನು ಪ್ರಾರಂಭ ಮಾಡುತ್ತಿದ್ದೇವೆ. ಇಲ್ಲ ಹೆಚ್ಚುವರಿ ಬೇಡಿಕೆಯಲ್ಲಿ ಚುನಾವಣೆಗೆ ಸಂಬಂಧಪಟ್ಟ ಹಾಗೆ ಖರ್ಚು ಮಾಡುವುದಕ್ಕೆ ಹಣವನ್ನು ಕೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ, ಈ ಚುನಾವಣೆಯು ಯಾವ ರೀತಿಯಲ್ಲಿ ಪ್ರಾಮಾಣಿಕವಾಗಿ ನಡೆದಿದೆ ಎಂಬುದನ್ನು ನಾವು ನೋಡಬೇಕಾಗಿದೆ. ನಾನು ಹಾಗೆ ಹೇಳುವಾಗ ಯಾರಾದರು ನೀವು ಹೇಗೆ ಗೆದ್ದು ಬಂದಿದ್ದೀರಿ, ಎಂದು ಕೇಳಬಹುದು. ಆದರೆ ನಾನು ಗೆದ್ದಿರತಕ್ಕಂತದ್ದು ನಮ್ಮ ಜನತೆಯ ಮತಗಳಿಂದ ಗೆದ್ದು ಇಲ್ಲಿಗೆ ಬಂದಿದ್ದೇನೆ. ಆದರೆ ನನಗೆ ಕಂಡುಬಂದ ಕೆಲವು ಸಂಶಯಗಳನ್ನು ಇಲ್ಲಿ ಹೇಳಬಯಸುತ್ತೇನೆ. ನಾನು ಮತ ಎಣಿಕೆಗಳ ಸಮಯದಲ್ಲಿ ಕಣ್ಣಾರೆ ಕಂಡು ಈ ವಿಚಾರಗಳನ್ನು ರಿಟರ್ನಿಂಗ್ ಆಫೀಸರ್‌ವರ ಗಮನಕ್ಕೆ ಕೂಡ ತಂದಿದ್ದೇನೆ. ಅಲ್ಲಿ ಮತಪತ್ರಿಕೆಗಳು ಎರಡು ಮೂರು ತರದ ಬಣ್ಣಗಳಿದ ಕೂಡಿದ್ದವು. ಅದು ಯಾವ ಕಾರಣದಿಂದ ಹಾಗೆ ಆಯ್ತು ಎಂಬುದು ಪರಿಶೀಲನೆ ಮಾಡಬೇಕಾದ ವಿಚಾರ. ಪ್ರಿಂಟ್ ಮಾಡತಕ್ಕ ಕಾಲದಲ್ಲಿ ಪೇಪರ್ ಅಭಾವದಿಂದ ಅಥವಾ ಇನ್ನಿತರ ಕಾರಣಗಳಿಂದ ಈ ರೀತಿಯಾಗಿದೆಯೇ ಹೇಗೆ ಎಂಬುದರ ಬಗ್ಗೆ ಸೂಕ್ತವಾದ ವಿವರಣೆ ಕೊಟ್ಟರೆ ಬಹಳ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನನಗೆ ಇರತಕ್ಕ ಒಂದು ಸಂಶಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಕಣ್ಣಾರೆ ಕಂಡ ವಿಷಯವನ್ನು ಇಲ್ಲಿ ಹೇಳಬೇಕಾಗಿದೆ. ಎಷ್ಟು ನಿಷ್ಪಕ್ಷಪಾತವಾಗಿ ಈ ಚುನಾವಣೆ ನಡೆದಿದೆ ಎಂಬ ಬಗ್ಗೆ ಕೆಲವಾರು ಸಂಶಯಗಳನ್ನು ನಾನು ವ್ಯಕ್ತಪಡಿಸುವುದಕ್ಕೆ ಇದು ಒಂದು ನಿರ್ದಿಷ್ಟವಾದ ಆಧಾರವೆಂದು ತಮ್ಮ ಮುಖೇನ ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಚುನಾವಣೆ ನಡೆಯತಕ್ಕ ಕಾಲದಲ್ಲಿ ಚುನಾವಣೆಯ ಕಮಿಷನರ್ ಅವರು ಕೆಲವು ಆದೇಶಗಳನ್ನು ಕೊಟ್ಟಿದ್ದರು. ಅದರ ಪ್ರಕಾರ ಪ್ರಚಾರ ಯಾವ್ಯಾವ ರೀತಿಯಲ್ಲಿ ಮಾಡಬೇಕೆಂಬ ಬಗ್ಗೆ ರಾಜ್ಯಮಟ್ಟದ ಚುನಾವಣೆಯ ಅಧಿಕಾರಿಗಳಿಗೆ ಅದಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಹಸ್ತಪತ್ರಿಕೆಗಳನ್ನು ಕಳುಹಿಸಿಕೊಟ್ಟಿದ್ದರು. ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಚುನಾವಣೆಯಲ್ಲಿ ಆ ಆದೇಶಗಳ ಪ್ರಕಾರ ನಿಜವಾಗಿ ನಡೆದುಕೊಂಡಿದ್ದಾರೆಯೇ ಎನ್ನುವ ವಿಷಯವನ್ನು ನಾನು ಈಗ ಪ್ರಸ್ತಾಪ ಮಾಡಬೇಕಾಗಿದೆ. ಆ ವಿಷಯವನ್ನು ಪ್ರಶ್ನೆ ಮಾಡಬೇಕಾಗಿದೆ. ಎಷ್ಟು ಪ್ರಾಮಾಣಿಕ ರೀತಿಯಲ್ಲಿ ಚುನಾವಣೆಯ ಕೆಲಸಕಾರ್ಯಗಳು ನಡೆದಿವೆ ಎಂಬುದನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸಬೇಕಾಗಿದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವನ್ನು ಸ್ವಲ್ಪಮಟ್ಟಿಗೆ ಹೇಳಬೇಕಾಗಿದೆ. ಮಾನ್ಯ ಶ್ರೀ ಸಿದ್ಧವೀರಪ್ಪನವರನ್ನು ನಾನು ಸುಮಾರು 20 ವರ್ಷಗಳಿಂದ ಬಲ್ಲೆ. ಅವರಿಗೆ ನಾನು ಮಾನ್ಯ ಶ್ರೀ ಎ. ಜಿ. ರಾಮಚಂದ್ರರಾಯರ ಶಿಷ್ಯ ಎಂಬುದು ಚೆನ್ನಾಗಿ ಗೊತ್ತು. ನಾನು ಮಾತನಾಡುವ ಕಾಲದಲ್ಲಿ ಕೇವಲ ಅಕ್ಷೇಪಣೆ

(ಶ್ರೀ ಹೆಚ್. ಡಿ. ದೇವೇಗೌಡ)

ಮಾಡಬೇಕೆಂಬ ದೃಷ್ಟಿಯಿಂದ ಮಾತನಾಡುವುದೇ ಇಲ್ಲ. ನನ್ನ ಮೇಲೆ ಅವರ ಪಕ್ಷದ ಒಬ್ಬ ಅಭ್ಯರ್ಥಿ ಒಂದು ಅಪಾದನೆಯ ಪಟ್ಟಿಯನ್ನು ಕೊಟ್ಟಿದ್ದಾರೆ,

ಶ್ರೀ ಎಚ್. ಸಿದ್ಧವೀರಪ್ಪ.—ಈ ಸಪ್ಲಿಮೆಂಟರಿ ಡಿಮ್ಯಾಂಡ್ ಬಹುಶಃ ನಿಮ್ಮ ಪಕ್ಷದವರು ಅಧಿಕಾರದಲ್ಲಿದ್ದಾಗ ಆಗಿರತಕ್ಕ ಖರ್ಚು.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯಪಾಲರ ಆಡಳಿತವಿದ್ದಾಗ ಆಡಳಿತ ವೆಚ್ಚವೇನಾಗಿದೆ ಅದನ್ನು ಈಗ ತೂಗಿಸುತ್ತಿದ್ದೀರಿ. ಅಷ್ಟುಮಟ್ಟಿಗೆ ನನಗೆ ಗೊತ್ತಿಲ್ಲವೆಂದು ಹೇಳಬೇಕಾಗಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ನೀವು ಅದರಲ್ಲಿ ಹಿಸ್ಸೇದಾರರು ಆಗಿದ್ದಿರಿ.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರ ಸ್ಥಾನವನ್ನು ಹೇಗಾದರೂ ಮಾಡಿ ಕಬಳಿಸಬೇಕು ಎನ್ನುವ ಒಂದು ಪೈಪೋಟಿಯಲ್ಲಿ ಎಂತಹ ಕೀಳುಮಟ್ಟದ ಕೆಲಸವನ್ನಾದರೂ ಮಾಡಬಹುದು ಎಂಬುದು ಬಹಳ ಪಾಪದ ಕೆಲಸ. ನಾನು ಸುಮಾರು 30—31 ವರ್ಷಗಳಿಂದಲೂ ಸಾರ್ವಜನಿಕ ಜೀವನರಂಗದಲ್ಲಿದ್ದುಕೊಂಡು ಅನೇಕ ವಿಷಯಗಳನ್ನು ಮನಗಂಡಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್ :—I rise to a point of order. ವಿರೋಧಪಕ್ಷದ ನಾಯಕರು ಚುನಾವಣೆಯ ಸಂದರ್ಭದಲ್ಲಿ ಪ್ರಕಟಮಾಡಿರತಕ್ಕ ಹಸ್ತಪತ್ರಿಕೆಯ ವಿಷಯವಾಗಿ ಮಾತನಾಡುತ್ತಿದ್ದಾರೆ. ಅದನ್ನು ಯಾವ ಕಾನೂನು ಪ್ರಕಾರ ಇಲ್ಲಿ ಓದಲಿಕ್ಕೆ ಅವಕಾಶವಿದೆ ? ಅದು ಬಹಳ ಮುಖ್ಯವಾದಂಥ ಪ್ರಶ್ನೆ. ಅದರ ಬಗ್ಗೆ ಏನಾದರೂ ಅಪಾದನೆ ಇದ್ದರೆ, ಅದನ್ನು ತೀರ್ಮಾನಮಾಡುವ ಫೋರಂ ಬೇರೆ. ಅಲ್ಲಿ ಅವರು ಅದನ್ನು ಪ್ರಶ್ನೆಮಾಡಬಹುದು. ಸರ್ಕಾರ ಏನಾದರೂ ತಪ್ಪುಮಾಡಿದರೆ ಅದನ್ನು ಇಲ್ಲಿ ಹೇಳತಕ್ಕ ಒಂದು ರೆಲೆವೆನ್ಸಿ ಬರುತ್ತದೆ. ಆದ್ದರಿಂದ ಚುನಾವಣೆಯ ಹಸ್ತಪತ್ರಿಕೆಯ ಬಗ್ಗೆ ಈ ಸಭೆಯಲ್ಲಿ ಮಾತನಾಡುತ್ತಿರುವುದು ನಿಜವಾಗಿಯೂ ಸರಿಯಾದುದಲ್ಲ. ಈ ಸಭೆಯ ನಡೆವಳಿಕೆಗಳಲ್ಲಿ ಆ ವಿಚಾರಗಳು ಹೋಗತಕ್ಕದ್ದು ಕೂಡ ಖಂಡಿತ ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ. ಇದೇ ನನ್ನ ಕ್ರಿಯಾಲೋಪ.

ಅಧ್ಯಕ್ಷರು.—ತಾವು ದಯವಿಟ್ಟು ಇವತ್ತಿನ ಚರ್ಚೆಗೆ ಸಂಬಂಧಪಟ್ಟ ಹಾಗೆ ಮಾತ್ರ ಮಾತನಾಡಿ. ಈ ಚರ್ಚೆಗೆ ಕೇವಲ ಒಂದೂವರೆ ಘಂಟೆ ಕಾಲ ಮಾತ್ರ ನಿಗದಿಯಾಗಿದೆ. ಆದ್ದರಿಂದ ತಾವು ಸೂಕ್ಷ್ಮವಾಗಿ ಮಾತನಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ತಾವು ರೆಲೆವೆನ್ಸಿ ಪ್ರಶ್ನೆ ಎತ್ತಿದ್ದೀರಿ. ಆದ್ದರಿಂದ ನಾನು ಚುನಾವಣೆ ಹಸ್ತಪತ್ರಿಕೆಯ ಬಗ್ಗೆ ಮಾಡತಕ್ಕ ಅಪಾದನೆಗಳನ್ನುಳ್ಳಂಥ ಪಟ್ಟಿಯನ್ನು ಪೂರ್ಣವಾಗಿ ಈ ಸಭೆಯ ಮುಂದೆ ಓದುವುದಕ್ಕೆ ಪ್ರಯತ್ನ ಮಾಡುವುದಿಲ್ಲವೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಎಷ್ಟು ನ್ಯಾಯಸಮ್ಮತವಾಗಿ ಚುನಾವಣೆ ನಡೆದಿದೆ ಎನ್ನುವ ಬಗ್ಗೆ ಹೇಳುವುದರ ಜೊತೆಗೆ ಚುನಾವಣೆಯ ಸಂಬಂಧದಲ್ಲಿ ಹೆಚ್ಚುವರಿ ಬೇಡಿಕೆ ಏನು ಈ ಸಭೆಯಮುಂದೆ ಇಟ್ಟಿದ್ದಾರೋ ಆ ವಿಷಯದಲ್ಲಿ ಈಗ ನಾನು ಪ್ರಸ್ತಾಪಮಾಡುತ್ತೇನೆ.

Sri K. H. PATIL.—(Minister for Agriculturc and Forest). The point to be considered is whether the paper the Hon'ble Member is holding is a genuine one and if he wants to refer to it he will have to place it on the Table of the House. The issue involved is different. The proper form is the Court if the legitimate publication has not been made.

Sri H. N. NANJEGOWDA.—According to rule 285 Sub-Rule (1) a member shall not read any book, newspaper or letter except in connection with the business of the Assembly. The Hon. Member proposes to read some paper which is not at all relevant. He cannot do that.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಶ್ರೀ ನಂಜೇಗೌಡರು ನನಗೆ ರೆಲವನ್ಸಿ ಪ್ರಶ್ನೆ ವಿಷಯವಾಗಿ ಏನೂ ಹೇಳಬೇಕಾಗಿಲ್ಲ. ಏಕೆಂದರೆ, ಅವರು ಈ ಕಡೆ ಇದ್ದಾಗ್ಗೆ ಕ್ರಿಯಾಲೋಪಗಳನ್ನು ಯಾವ್ಯಾವ ರೀತಿಯಲ್ಲಿ ಎತ್ತುತ್ತಿದ್ದರು ಎಂಬುದು ಗೊತ್ತು. ಅದರಲ್ಲಿ ಅವರು ಹೆಚ್ಚು ಅನುಭವಿ

ಗಳಾಗಿದ್ದಾರೆ. ಈಗ ನಾನು ಹೇಳುವುದಿಷ್ಟೆ. ಎಷ್ಟರಮಟ್ಟಿಗೆ ಚುನಾವಣಾ ಕಮಿಷನರ್ ಅವರು ಕೊಟ್ಟಿರತಕ್ಕ ಆದೇಶವನ್ನು ಅಭ್ಯರ್ಥಿಗಳು ಪಾಲನೆ ಮಾಡಿದ್ದಾರೆನ್ನುವುದು ಮತ್ತು ಚುನಾವಣೆಗಳು ಸರಿಯಾಗಿ, ನ್ಯಾಯವಾಗಿ ನಡೆದಿಲ್ಲ ಎನ್ನುವ ಬಗ್ಗೆ ವಿಚಾರಮಾಡುವುದು ಈ ವಿಚಾರಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ನಾನು ಹೇಳುವುದು ಚುನಾವಣೆಗೆ ಸಂಬಂಧಪಟ್ಟದ್ದು. ಆದ್ದರಿಂದ ಕೆಲವನ್ನು ಬಗ್ಗೆ ನಾನು ಚೆನ್ನಾಗಿ ತಿಳಿದುಕೊಂಡು ಮಾತನಾಡುತ್ತೇನೆ. ಅದರ ಬಗ್ಗೆ ನಾನೇನಾದರೂ ಓದಿದರೆ ಅದರ ಬಗ್ಗೆ ಯಾರೂ ಹೆಚ್ಚು ಮನಸ್ಸು ಕೆಡಿಸಿಕೊಳ್ಳಬೇಕಾಗಿಲ್ಲ. ಆದ್ದರಿಂದ ಈ ಪತ್ರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ, ಅದರ ಬಗ್ಗೆ ವಿಚಾರಣೆ ಯಾಗಲಿ. ಈ ಸಂದರ್ಭದಲ್ಲಿ ಒಂದು ಮಾತು. ಸಾರ್ವಜನಿಕ ರಂಗದಲ್ಲಿ ಮಾನ, ಮರ್ಯಾದೆಯಿಂದ ಬಾಳುವುದು ಬಹಳ ಕಷ್ಟವಾಗಿದೆ. ಇದು ನಿಮ್ಮ ಕಡೆಯೂ ನಮ್ಮ ಕಡೆಯೂ ಇದೆ. ಈ ಸಭೆಯಲ್ಲಿ ಈಗ ಬಹುತೇಕವಾಗಿ 145 ಜನರು ಹೊಸ ಸದಸ್ಯರು ಬಂದಿದ್ದಾರೆ. ಉಳಿಕೆಯವರು ಬಹಳ ಕಾಲದಿಂದ ಹಳೆಯ ಸದಸ್ಯರಾಗಿ ಈ ಸಭೆಯಲ್ಲಿರತಕ್ಕವರೆಂದು ನಾನು ಹೇಳುತ್ತೇನೆ. ಈ ಒಂದು ಸಂದರ್ಭದಲ್ಲಿ ತಮ್ಮಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ನಾವೆಲ್ಲ ನಿಜವಾಗಿ ಜನತೆಯ ಆರೋಪಣೆಗಳಿಗೆ ದೂರವಿರತಕ್ಕ ಒಂದು ಅವಕಾಶವನ್ನು ಕಲ್ಪಿಸಿಕೊಳ್ಳಬೇಕಾದರೆ ಮೊಟ್ಟ ಮೊದಲನೆಯದಾಗಿ ನಮ್ಮ ಅಸೆಟ್ಸ್ ಮತ್ತು ಲಯಬಿಲಿಟೀಸ್ ಏನಿದೆಯೋ ಅದನ್ನು ಈ ಸಭೆಯ ಮುಂದೆ ಇಡೋಣ. ಅದನ್ನು ಜನತೆಯ ಪರಿಶೀಲನೆಗೆ ಇಡುವುದಕ್ಕೆ ಯಾರೂ ಹಿಂದೆಗೆಯುವುದು ಬೇಡ. ಎಲ್ಲಾ ಮಂತ್ರಿಗಳೂ ಎರಡು ಕಡೆಯ ಸದಸ್ಯರುಗಳೂ ಎಲ್ಲರೂ ಅಸೆಟ್ಸ್ ಅಂಡ್ ಲಯಬಿಲಿಟೀಸ್‌ಗಳನ್ನು ಈಗ ಈ ಸಭೆಯ ಮುಂದೆ ಜಾಗ್ರತೆಯಾಗಿ ಇಡುವುದು ಒಳ್ಳೆಯದು. ಏಕೆಂದರೆ ಅದರಿಂದ ಬಹುಶಃ ಮುಖಕ್ಕೆ ಟಾರ್ ಅಥವಾ ಬಣ್ಣ ಹಚ್ಚತಕ್ಕ ಕೆಲಸವೇನಿದೆಯೋ ಅದನ್ನು ಈ ರಾಜಕೀಯ ರಂಗದಲ್ಲಿ ತಡೆಗಟ್ಟುವುದಕ್ಕೆ ಸಾಧ್ಯವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತಿನ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಹಲವಾರು ಬೇಡಿಕೆಗಳನ್ನು ತಂದಿದ್ದಾರೆ. ನಾನು ಡಿಮ್ಯಾಂಡ್ ನಂಬರ್ 10ರ ವಿಷಯವಾಗಿ ಮಾತನಾಡುತ್ತೇನೆ. ಇವತ್ತು ಅಡಿಷನಲ್ ಸ್ಟಾಫ್ ಬೇಕು, ಅದು ಲ್ಯಾಂಡ್ ಗ್ರ್ಯಾಂಟ್‌ಗೆ ಸಂಬಂಧಪಟ್ಟದ್ದು, ಅದಕ್ಕಾಗಿ ಹೆಚ್ಚು ಹಣಬೇಕೆಂದು ಕೇಳಿ ದ್ದಾರೆ. ನಾನಾದರೋ ಪ್ರಶ್ನೆಮಾಡುತ್ತೇನೆ. ಈ ಒಂದು ವರ್ಷದ ಅವಧಿಯಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಇತ್ತು. ಇದಕ್ಕೆ ಸಂಬಂಧಪಟ್ಟಹಾಗೆ ಪಾರ್ಲಿಮೆಂಟ್ ಏನೇನು ಆದೇಶಗಳನ್ನು ಕೇಂದ್ರದ ಮೂಲಕ ಕಳುಹಿಸುತ್ತಿದ್ದರೋ ಆ ಪ್ರಕಾರ ಕೆಲಸಗಳನ್ನು ನಿರ್ವಹಿಸುವುದಕ್ಕೋಸ್ಕರ ರಾಜ್ಯಪಾಲರು ಹೆಚ್ಚಿನ ಖರ್ಚುಗಳನ್ನು ಮಾಡಿ ಆ ಕಾರ್ಯಗಳನ್ನು ನಿರ್ವಹಿಸಿದ್ದಾರೆಂದು ನನಗೆ ಕಾಣುತ್ತಿದೆ. ಲ್ಯಾಂಡ್‌ಗ್ರಾಂಟ್ ಕಮಿಟಿಯನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸ್ಥಾಪಿಸಿ ಅವು ತ್ವರಿತಗತಿ ಯಿಂದ ಕೆಲಸಮಾಡಬೇಕು, ಅದಕ್ಕಾಗಿ ಸೇಕಡ 50ರಷ್ಟು ವರಮಾನವನ್ನು ಆಯಾ ತಾಲ್ಲೂಕಿಗೇ ಹಂಚಬೇಕೆಂದು ತೀರ್ಮಾನವಾಗಿತ್ತು. ಆ ರೀತಿಯಾಗಿ ನಡೆದುಕೊಂಡು ಬರುತ್ತಿತ್ತು. ಅದನ್ನು ರಾಜ್ಯಪಾಲರು ತಮ್ಮ ಆಡಳಿತದಲ್ಲಿ ರದ್ದುಮಾಡಿದರು. ರಾಜ್ಯಪಾಲರು ತಮ್ಮ ಸ್ವಪ್ರೇರಣೆಯಿಂದ ಈ ರೀತಿಯಾಗಿ ಮಾಡಿದರೋ ಅಥವಾ ಪಕ್ಷದ ಅಥವಾ ಕೇಂದ್ರದ ಆದೇಶಕ್ಕೆ ಮಣಿದು ಈ ರೀತಿ ಯಾಗಿ ಮಾಡಿದರೋ ಅದರ ಬಗ್ಗೆ ಈ ಸಭೆಯಲ್ಲಿ ನಾನು ಸಂಶಯವನ್ನು ವ್ಯಕ್ತಪಡಿಸಬೇಕಾಗಿದೆ. ಅದಕ್ಕೋಸ್ಕರವೇ ಈಗ ಲ್ಯಾಂಡ್ ಗ್ರ್ಯಾಂಟಿಗೆ ಸಂಬಂಧಪಟ್ಟಹಾಗೆ ಅಡಿಷನಲ್ ಸ್ಟಾಫ್‌ಗೋಸ್ಕರ ಹೆಚ್ಚು ಹಣ ಖರ್ಚಾಗಿದೆಯೆಂದು ಹೇಳುತ್ತಿದ್ದಾರೆ. ಅಲ್ಲದೆ ಈಗ ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಗಳನ್ನು ಸ್ಥಾಪನೆ ಮಾಡುವ ಒಂದು ಉದ್ದೇಶವನ್ನು ಮೊಟಕು ಮಾಡುವ ದುರುದ್ದೇಶವನ್ನು ಇತ್ತೀಚೆಗೆ ಇವರು ಇಟ್ಟುಕೊಂಡಿದ್ದಾರೆಂದು ನನಗೆ ಕಾಣುತ್ತದೆ. ಕಾರಣವಿಷ್ಟೇ. ಈ ಕಮಿಟಿ ಗಳಲ್ಲಿ ಕೆಲಸ ಮಾಡುತ್ತಾ ಇರತಕ್ಕವರು ಅವರ ಪಕ್ಷದವರಲ್ಲ, ಒಂದುವೇಳೆ ಬೇರೆಯವರು ಆ ಕಮಿಟಿ ಗಳಲ್ಲಿ ಇದ್ದರೆ ನ್ಯಾಯವಾಗಿ ತೀರ್ಮಾನ ದೊರೆಯುವುದಕ್ಕೆ ಸಾಧ್ಯವಿಲ್ಲವೆಂದು ಆ ಕಮಿಟಿಗಳನ್ನು ರದ್ದುಗೊಳಿಸಿದ್ದಾರೆ. ಇದರಿಂದ ತಾಲ್ಲೂಕುಗಳಲ್ಲಿ ಹೆಚ್ಚಿಗೆ ಹಾಹಾಕಾರ ಎದ್ದಿದೆ. ಆ ಕಮಿಟಿ ಗಳಿಂದ ಆಗುತ್ತಿದ್ದ ಕಾರ್ಯಗಳನ್ನು ತಡೆಯುವುದಕ್ಕೆ ರಾಜ್ಯಪಾಲರು ಕೈಹಾಕಿದ್ದು ಬಹಳ ಅನ್ಯಾಯವೆಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

2-00 P.M.

ಇನ್ನು ಡಿಮ್ಯಾಂಡ್ ನಂಬರ್ 33ರಲ್ಲಿ ಕ್ಷಾಮನಿವಾರಣೆಯ ಬಗ್ಗೆ ಹೆಚ್ಚಿನ ಹಣವನ್ನು ಕೇಳಿದ್ದಾರೆ ಇದರ ಬಗ್ಗೆಯೂ ಕೂಡ ಆ ಹಿಂದಿನ ಧಾಟಿಯಲ್ಲೇ ಅವರು ಹೋಗಿದ್ದಾರೆ. ಮುಖ್ಯಮಂತ್ರಿಗಳ ಸಲಹೆಯಂತೆ ಅವರು ಕಾರ್ಯ ನಡೆಸಬೇಕು ಆದ್ದರಿಂದ ಅವರು ಒಂದು ಉತ್ತಮ ಸಲಹೆಯನ್ನು ಕೊಟ್ಟು, ಈ ಕೆಲಸಗಳನ್ನು ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆದುಕೊಂಡು

(ಶ್ರೀ ಎಚ್. ಡಿ. ದೇವೇಗೌಡ)

ಹೋಗುವುದಕ್ಕೆ ಅವಕಾಶ ಮಾಡಬೇಕಾಗಿತ್ತು, ಆದರೆ ಹಾಗೆ ಮಾಡಲಿಲ್ಲ. ಇದರ ಹಾಗೆಯೇ ಇನ್ನೂ ಎಲ್ಲೆಲ್ಲಿ ಖಾಸಗಿ ಸದಸ್ಯರಿದ್ದುಕೊಂಡು ಕೆಲಸ ಕಾರ್ಯಗಳನ್ನು ನಡೆಸಲಾಗುತ್ತಿತ್ತೋ ಅಲ್ಲೆಲ್ಲಾ ಆ ಖಾಸಗೀ ಸದಸ್ಯರ ಕಾರ್ಯವ್ಯಾಪ್ತಿಯನ್ನು ಹಾಗೂ ಅವರ ಅಧಿಕಾರವನ್ನು ಮೊಟಕು ಮಾಡುವುದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಇದಕ್ಕೆಲ್ಲಾ ಕಾರಣ ತಮ್ಮ ಪಕ್ಷದವರ ಒತ್ತಾಯ. ಆ ಒತ್ತಾಯಕ್ಕೆ ಅವರು ಮಣಿದು ಹಾಗೆ ಮಾಡಿದ್ದಾರೆ.

ಇನ್ನು ಡಿಮ್ಯಾಂಡ್ ನಂಬರ್ 44ರ ಬಗ್ಗೆ ಹೇಳಬೇಕೆಂದರೆ ಹಿಂದೆ ಶ್ರೀಮಾನ್ ಕೆ. ಎಚ್. ಪಾಟೀಲರವರು ಇತ್ತ ಕಡೆ ಕುಳಿತಿದ್ದಾಗ ಈ ವಿಚಾರದಲ್ಲಿ ಬಹಳ ಗಡುಸಾಗಿ ವಾದ ಮಾಡುತ್ತಿದ್ದರು. ಆದರೆ ಈ ದಿವಸ ಅವರು ಇನ್ನೂ ತಾವು ಅಧಿಕಾರಕ್ಕೆ ಬರುವ ಮೊದಲೇ ಎರಡು ಸೊಸೈಟಿಗಳಿಗೆ ಹೆಚ್ಚು ಹಣವನ್ನು ಪಡೆಯುವುದಕ್ಕೆ ಅಗಲೇ ಪ್ರಯತ್ನ ಮಾಡಿದ್ದಾರೆ. ಅವರ ಕೈಗೆ ಅಧಿಕಾರವಿನ್ನೂ ಬಾರದೇ ಇರುವಾಗಲೇ ಅವರಿದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ವಿಚಾರದಲ್ಲಿ ಅವರು ಹೆಚ್ಚಿನ ಪ್ರಭಾವವನ್ನು ಬೀರಿದ್ದಾರೆಂದು ವ್ಯಕ್ತವಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ನಾನು ಆ ಸೊಸೈಟಿಗಳಲ್ಲಿ ಡೈರಕ್ಟರಾಗಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇರಬಹುದು. ಆದರೂ ತಾವು ಇದಕ್ಕೆ ಪ್ರಭಾವ ಬೀರಿದ್ದೀರಿ. ಇನ್ನು ಡಿಮ್ಯಾಂಡ್ 54ರಲ್ಲಿ ಅಡ್ವಾನ್ಸ್ ಮತ್ತು ಲೋನುಗಳ ವಿಚಾರ ಹೇಳಿದೆ. ಆದರೆ ನಾನು ಈ ಸಂದರ್ಭದಲ್ಲಿ ತಕಾವಿ ಲೋನ್ ಅಥವಾ ಲ್ಯಾಂಡ್ ಇಂಪ್ರೂಮೆಂಟ್ ಲೋನುಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷಣಿಯರೇ ತಮಗೂ ದೇಶದಲ್ಲಿರತಕ್ಕ ಬಡವರ ಬಗ್ಗೆ ಬಹಳ ಕನಿಕರವಿದೆ. ಅವರ ಬಗ್ಗೆ ತಾವೂ ಒಂದು ಹೆಚ್ಚಿನ ಅಭಿಮಾನವುಳ್ಳವರಾಗಿದ್ದೀರಿ. ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತಿರುವಂತೆ ಕಳೆದ ಹತ್ತು ವರ್ಷಗಳಿಂದ ರಾಜ್ಯದಲ್ಲಿ ಸರಿಯಾಗಿ ಮಳೆ ಬೆಳೆಗಳಾಗದೆ ರೈತರು ಕ್ಷಾಮಕ್ಕೆ ತುತ್ತಾಗಿ ಬಹಳ ಕಷ್ಟದಲ್ಲಿದ್ದಾರೆ. ಆ ಕಾರಣದಿಂದ ಅವರ ಮೇಲೆ ವಿಧಿಸಲಾಗಿದ್ದ ಹೆಚ್ಚುವರಿ ಲ್ಯಾಂಡ್ ರೆವಿನ್ಯೂ ಮತ್ತು ತಕಾವಿಸಾಲಗಳನ್ನು ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನುಗಳನ್ನು ಒತ್ತಾಯವಾಗಿ ಅವರಿಂದ ವಸೂಲ್ಮಾಡುವುದಕ್ಕೆ ಬದಲಾಗಿ ಅವನ್ನು ಒಂದೆರಡು ವರ್ಷಗಳ ಕಾಲ ತಡೆಹಿಡಿಯಲಾಗಿತ್ತು. ಹಾಗೆ ತಡೆಹಿಡಿದು ನಿಲ್ಲಿಸಲಾಗಿದ್ದ ಕಂದಾಯದ ಬಾಕಿ, ಜಮೀನು ಅಬಾದು ಸಾಲದ ಬಾಕಿ ಇತ್ಯಾದಿ ಎಲ್ಲ ಬಾಕಿಗಳನ್ನೂ ಏಕ ಕಾಲಕ್ಕೆ ಕೊಡಬೇಕೆಂದು ಅಧಿಕಾರಿಗಳು ರೈತರನ್ನು ಪೀಡಿಸುತ್ತಿದ್ದಾರೆ. ಆ ಎಲ್ಲ ಬಾಕಿಗಳನ್ನೂ ಒಂದೇ ಸಾರ್ತಿ ಕೊಡುವುದೆಂದರೆ ಅವರಿಗೆ ಬಹಳ ಕಷ್ಟವಿದೆ. ದಾಕ್ಷಿಣ್ಯವಿಡದೆ ರೈತರ ಮನೆಯಲ್ಲಿರತಕ್ಕ ಹಂಡೆ ತಪ್ಪಲೆಗಳನ್ನು ಹೊರಗೆಳೆದು ಜುಲುಮಿನಿಂದ ಹಣವನ್ನು ವಸೂಲ್ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ಅಧಿಕಾರಿಗಳಿಗೆ ಮಾನ್ಯ ಸಚಿವರು ನಿಧಾನಿಸಿ ತೆಗೆದುಕೊಳ್ಳುವುದಕ್ಕೆ ಅವಕಾಶ ವಾಗುವಂತೆ ನಿಯಮಗಳನ್ನು ಸ್ವಲ್ಪ ಸಡಿಲಗೊಳಿಸಬೇಕೆಂದು ಒತ್ತಾಯ ಮಾಡುತ್ತೇನೆ. /ಹೀಗೆ ಕಿರುಕುಳಕೊಟ್ಟು ರೈತರಿಂದ ಹಣವನ್ನು ವಸೂಲ್ಮಾಡುವುದಕ್ಕೆ ರಾಜ್ಯಪಾಲರ ಆಜ್ಞೆ ಮಾಡಬಾರ ದಾಗಿತ್ತು. ಹಾಗೆ ಮಾಡಿದ್ದು ದುರದೃಷ್ಟ. ರೈತರ ಕಷ್ಟಗಳೇನೆಂಬುದು ತಮಗೆಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಆ ಸಾಲಗಳನ್ನು ಸರ್ಕಾರ ಹಂತ ಹಂತವಾಗಿ ವಸೂಲ್ಮಾಡು ವುದಕ್ಕೆ ಕ್ರಮ ಕೈಗೊಳ್ಳಬೇಕು. ನನಗೆ ಈ ಹೆಚ್ಚುವರಿ ಬೇಡಿಕೆಗಳ ಬಗ್ಗೆ ಇಷ್ಟು ಮಾತನಾಡು ವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷಣಿಯರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷಣಿಯರೇ. ವಿದ್ಯುಚ್ಛಕ್ತಿ ಕಟ್ಟಾಯಿತು.

ಅಧ್ಯಕ್ಷರು.—ನನ್ನ ಹತ್ತಿರ ಮಾನ್ಯ ಸದಸ್ಯರುಗಳು ಯಾರು ಯಾರು ಯಾವ ಕ್ರಮದಲ್ಲಿ ಮಾತ ನಾಡಬೇಕು ಎನ್ನತಕ್ಕ ಬಗ್ಗೆ ಒಂದು ಪಟ್ಟಿಯಿದೆ. ಅದರಲ್ಲಿ ಇರತಕ್ಕ ಹೆಸರುಗಳನ್ನು ಕರೆಯುತ್ತೇನೆ. ಅವರು ದಯವಿಟ್ಟು ಮಾತನಾಡಬೇಕು.

ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷಣಿಯರೇ ಮತ್ತು ಮಾನ್ಯ ಸದಸ್ಯರುಗಳೇ 1972-73ನೇ ವರ್ಷಕ್ಕೆ ಸಂಬಂಧಪಟ್ಟ ತಾತ್ಕಾಲಿಕ ಆಯವ್ಯಯಪಟ್ಟಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿರತಕ್ಕ ಈ ಸಂದರ್ಭದಲ್ಲಿ ನಾನು ಈ ತಾತ್ಕಾಲಿಕ ಪಟ್ಟಿಯನ್ನು ಅನುಮೋದಿಸುತ್ತ ಮಾನ್ಯ ಅರ್ಥಿಕ ಸಚಿವರು ಸೂಕ್ಷ್ಮವಾಗಿ ನಮ್ಮ ಮುಂದಿಟ್ಟಿರತಕ್ಕ ತಾತ್ಕಾಲಿಕ

ಆಯವ್ಯಯ ಪಟ್ಟಿಯ ಬಗ್ಗೆ ಅಧ್ಯಕ್ಷರ ಅನುಮತಿಯನ್ನು ಪಡೆದು ನನ್ನ ಕೆಲವು ಅಭಿಪ್ರಾಯಗಳನ್ನು ನಾನೀಗ ಮಂಡಿಸುತ್ತೇನೆ.

ಇಲ್ಲಿ ಈ ದಿವಸ ಆಡಳಿತವನ್ನು ನಿರ್ವಹಿಸುತ್ತಿರುವ ಸರ್ಕಾರವೇನಿದೆ ಅದು ಬಹುತೇಕ ರಾಜ್ಯದಲ್ಲಿರತಕ್ಕ ಬಹು ಬಡವರಿಂದಲೇ ಅಂದರೆ ಬಹುಸಂಖ್ಯಾತರಾಗಿರತಕ್ಕ ಬಡಜನರಿಂದ ಆರಿಸಿ ಬಂದಿರತಕ್ಕ ಸರ್ಕಾರ. ಈ ಸರ್ಕಾರ ಆ ಬಡಜನರ ಉದ್ಧಾರಕ್ಕಾಗಿ ಹೆಚ್ಚಿನ ಹಣವನ್ನು ಮೀಸಲಾಗಿಡತಕ್ಕದ್ದು ಅತ್ಯಗತ್ಯ ಮತ್ತು ಆ ಬಡವರ ಉದ್ಧಾರಕ್ಕೆ ಅನುಕೂಲವಾಗತಕ್ಕ ಕೆಲಸಗಳನ್ನು ಹೆಚ್ಚಿನ ಮಟ್ಟದಲ್ಲಿ ನಡೆಸಬೇಕು.

ಮೊಟ್ಟಮೊದಲನೆಯದಾಗಿ ಭೂಸುಧಾರಣೆಯ ವಿಚಾರ, ಇದು ಅತ್ಯಂತ ತ್ವರಿತದಿಂದ ಆಗಬೇಕು. ಕಳೆದ 15 ವರ್ಷಗಳಿಂದಲೂ ಇದು ಕೇವಲ ಕಾಗದದ ಮೇಲೆ ಮಾತ್ರ ಸುಧಾರಣೆಯಾಗಿದೆಯೇ ವಿನಾ ಕಾರ್ಯತಃ ಏನೂ ನಡೆದಿಲ್ಲ. ಶ್ರೀ ಸಾಮಾನ್ಯರಿಗೇನೂ ಇದರಿಂದ ಅನುಕೂಲವಾಗಿಲ್ಲ. ಆದ್ದರಿಂದ ಅವರಿಗೆ ಅನುಕೂಲವಾಗುವಂತೆ ಇದನ್ನು ಈಗಿನ ಸರ್ಕಾರ ಕೂಡಲೆ ಜಾರಿಗೆ ತರಬೇಕು.

ಇನ್ನು ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ ಬಡವ ಬಲ್ಲಿದ ಎನ್ನತಕ್ಕ ಭೇದವಿಲ್ಲದೆ ಎಲ್ಲರಿಗೂ ವಿದ್ಯಾಸೌಕರ್ಯವನ್ನು ಒದಗಿಸಬೇಕು. ಇಂಥ ಅಭಿವೃದ್ಧಿ ಕೆಲಸಗಳೆಲ್ಲಾ ನಿರಾಂತಕವಾಗಿ ನಡೆಯಬೇಕಾಗಿದ್ದರೆ ಸರ್ಕಾರ ಈ ಬಾಬುಗಳಿಗೆಲ್ಲ ಹೆಚ್ಚಿನ ಹಣವನ್ನು ಒದಗಿಸಬೇಕು. ಹಾಗೆ ಅಭಿವೃದ್ಧಿ ಕಾರ್ಯಗಳಿಗೆ ಅಧಿಕ ಪ್ರಮಾಣದಲ್ಲಿ ಬೇಕಾಗತಕ್ಕ ಹಣವನ್ನು ಸರ್ಕಾರ ರಾಜ್ಯದಲ್ಲಿರತಕ್ಕ ಜನರಿಂದ ಅಂದರೆ ಹೆಚ್ಚಿನ ತೆರಿಗೆಯನ್ನು ಹೊರಲು ಶಕ್ತಿಯುಳ್ಳಂಥ ಶ್ರೀಮಂತರಿಂದ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಸಾಧ್ಯವಾದಮಟ್ಟಿಗೂ ಶ್ರೀಮಂತರಮೇಲೆ ಡೈರೆಕ್ಟ್ ತೆರಿಗೆಗಳನ್ನು ವಿಧಿಸುವುದು ಉತ್ತಮ. ಹೀಗೆ ಮಾಡಿದರೇನೇ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ರೀತಿಯಲ್ಲಿ ಹಣ ಸಹಾಯವಾಗುತ್ತದೆ. ಅಂತೂ ರಾಜ್ಯದಲ್ಲಿ ಯಾರು ಹೆಚ್ಚು ಶ್ರೀಮಂತರಾಗಿದ್ದಾರೋ ಅಂಥವರಿಂದ ಹಣವನ್ನು ಪಡೆದು ರಾಜ್ಯದಲ್ಲಿರತಕ್ಕ ಹೆಚ್ಚು ಜನರ ಅಂದರೆ ಬಡಜನರ ಉದ್ಧಾರವನ್ನು ಮಾಡಬೇಕು. ರಾಜ್ಯದಲ್ಲಿ ಯಾರು ಬಹಳ ಕೆಳಮಟ್ಟದಲ್ಲಿ ಜೀವನ ಮಾಡುತ್ತಿದ್ದಾರೋ ಅಂಥವರಿಗೆ ಹೆಚ್ಚಿನ ಅನುಕೂಲವಾಗಬೇಕು. ಹಾಗೆ ನಮ್ಮ ಸರ್ಕಾರ ಕೆಲಸ ಮಾಡಬೇಕು.

ಇನ್ನು ನಮ್ಮ ರಾಜ್ಯದಲ್ಲಿ ಸಣ್ಣ ಹಾಗೂ ದೊಡ್ಡ ನೀರಾವರಿ ಕಾಂಗಾರಿಗಳ ಕೆಲಸ ಬಹಳ ತ್ವರಿತವಾಗಿ ಸಾಗಬೇಕಾಗಿದೆ. ಬಹಳ ಕಾಲದಿಂದಲೂ ನಾವು ನಮ್ಮ ದೇಶ ಈ ಕಾರ್ಯದಲ್ಲಿ ಬಹಳ ಹಿಂದೆ ಉಳಿದಿದ್ದೇವೆ. ಇದರ ಬಗ್ಗೆ ಇದೇ ಮಾನ್ಯ ಸಭೆಯಲ್ಲಿ ಅನೇಕ ವೇಳೆ ದೊಡ್ಡ ಪ್ರಮಾಣದಲ್ಲಿ ಚರ್ಚೆಗಳಾಗಿವೆ. ನಾವು ಇಂದಲ್ಲಾ ನಾಳೆ ಈ ಕಾಮಗಾರಿಗಳನ್ನು ಮಾಡದಿದ್ದರೆ ಬೇರೆ ಮಾರ್ಗವೇ ಇರುವುದಿಲ್ಲ. ಆದ್ದರಿಂದ ರಾಜ್ಯದಲ್ಲಿ ಬಹಳ ಸಂಖ್ಯಾತರಾಗಿರತಕ್ಕ ಕೃಷಿವರ್ಗದವರ ಕಲ್ಯಾಣ ಕಾರ್ಯಕ್ಕಾಗಿ ಅವರಿಗೆ 1974ರೊಳಗೇ ನಿರ್ದಿಷ್ಟವಾದ ಅವಧಿಯಲ್ಲಿ ಕೆಲಸಗಳು ಮುಗಿಯತಕ್ಕ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ರಾಜ್ಯದ ಕೃಷಿಕ ವರ್ಗದ ರೂಪರೇಷಗಳನ್ನು ಬದಲಾಯಿಸತಕ್ಕ ರೀತಿಯಲ್ಲಿ ಕಾರ್ಯಗಳನ್ನು ನಾವು ನಡೆಸಬೇಕಾಗಿದೆ. ಇದಕ್ಕೆ ಒಂದು ನಿರ್ದಿಷ್ಟ ರೀತಿಯಲ್ಲಿ ನಮ್ಮ ಆರ್ಥಿಕ ರೂಪರೇಷೆಗಳನ್ನು ಹಾಕಿಕೊಂಡು ಶ್ರದ್ಧೆಯಿಂದ ನಾವು ಕೆಲಸ ಮಾಡಬೇಕು.

ಇದೆಲ್ಲಾ ಮಾಡಬೇಕಾದರೂ ಕೂಡ ಸರ್ಕಾರ ಧೈರ್ಯವಾಗಿ ದಿಟ್ಟತನದಿಂದ ಆರ್ಥಿಕ ರೂಪರೇಷೆಗಳನ್ನು ನಿರ್ವಹಿಸಿಕೊಂಡು ಸಮತಾವಾದ ಸಮಾಜಕ್ಕೆ ಸಂಬಂಧಪಟ್ಟಂತೆ ಆರ್ಥಿಕ ನೀತಿಯೊಂದನ್ನು ಕುದಿರಿಸಿಕೊಳ್ಳಬೇಕಾಗಿದೆ ಎಂದು ಮಾನ್ಯ ಆರ್ಥಿಕ ಮಂತ್ರಿಗಳು ಹೇಳಿದ್ದಾರೆ. ಮುಂದಿನ ಸಭೆಯಲ್ಲಾದರೂ ಕೂಡ ಸ್ಪಷ್ಟವಾದ ಒಂದು ಆರ್ಥಿಕ ನೀತಿ ಬೇಕಾಗಿದೆ. ಸಮಾಜ ಫ್ಯೂಡಲಸಮ್ ನಿಂದ ಸಮಾಜವಾದಕ್ಕೆ ಬದಲಾವಣೆಯಾಗಬೇಕಾಗಿದೆ. ಅದಕ್ಕೆ ತಕ್ಕಂತೆ ಆರ್ಥಿಕ ನೀತಿಯನ್ನೂ ಕೂಡ ತೆಗೆದುಕೊಂಡು ಹೋಗಬೇಕಾಗಿದೆ. ಬಡವನು ಸಮಸ್ಯೆಯನ್ನು ಶೀಘ್ರದಲ್ಲೇ ಎದುರಿಸಬೇಕಾದರೆ ಅವರ ಆರ್ಥಿಕ ನೀತಿಯ ಮೇಲೆ ಹೋಗುತ್ತದೆ. ಅವನ ಆರ್ಥಿಕ ನೀತಿಯನ್ನು ಬಗೆಹರಿಸದರೆ ಮಾತ್ರ ನಾವು ಏನು ವಚನ ಕೊಟ್ಟಿದ್ದೇವೋ ಆ ಕೆಲಸ ಮಾಡಿದಂತಾಗುತ್ತದೆ. ಅದರಿಂದ ಒಳ್ಳೆಯ ಹೆಸರೂ ಕೂಡ ಬಂದಾಂತಾಗುತ್ತದೆ. ನಾವು ಯಾವರೀತಿ ಆರ್ಥಿಕ ಬದಲವಾಣೆ ಮಾಡಿಕೊಂಡು ಹೋಗುತ್ತೇವೋ ಅದರಂತೆ ನಮ್ಮ ಅಭಿವೃದ್ಧಿ ಕೆಲಸಕಾರ್ಯಗಳೂ ಕೂಡ ಅದರ ಮೇಲೆ ನಿಂತುಕೊಳ್ಳುತ್ತದೆ. ಯಾವ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕಾದರೂ ಕೂಡ ಹಣ ಇಲ್ಲದೇ ಮಾಡಬಾರದು. ಅದರಲ್ಲೂ ಕೂಡ ಮಿತವ್ಯಯದಿಂದ ಕೂಡಿದ್ದಾಗಿರಬೇಕು. ಹೆಚ್ಚು ಉತ್ಪನ್ನ ಬಂದದ್ದನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿದರೆ ಅದರಿಂದ ಸಾಮಾನ್ಯ ಜನರ

(ಶ್ರೀ ಕೆ. ಬಿ. ಶಿವಯ್ಯ)

ಆರ್ಥಿಕ ಬದಲಾವಣೆಗೆ ಸಹಾಯವಾಗುತ್ತೆ. ತನ್ಮೂಲಕ ನಿರುದ್ಯೋಗ ಸಮಸ್ಯೆಯು ಒಂದು ಹೆಚ್ಚಿನ ರೀತಿಯಲ್ಲಿ ಪರಿಹಾರವಾಗುತ್ತದೆ. ಆರ್ಥಿಕ ಮಂತ್ರಿಗಳಿಗೆ ಈ ಒಂದು ಶಕ್ತಿ ಬರಬೇಕು ಎಂದು ಹೇಳುತ್ತೇನೆ. ಆರ್ಥಿಕ ಮಂತ್ರಿಗಳು ಹೆಚ್ಚಿನ ಬುದ್ಧಿವಂತರು. ಅವರು ಈ ಒಂದು ಆರ್ಥಿಕ ರೂಪರೇಷೆಗಳನ್ನು ಕೊಡುವುದರ ಮೂಲಕ ರಾಜ್ಯದ ಅಭಿವೃದ್ಧಿ ಕಾರ್ಯಗಳು ಅವರ ಮೇಲೆ ನಿಂತಿದೆ. ಅವರು ಯಾವರೀತಿಯಾಗಿ ಈ ಒಂದು ದಿಶೆಯಲ್ಲಿ ಮಾರ್ಗದರ್ಶನ ಮಾಡುತ್ತಾರೆ ಎಂದು ಈ ಸಭೆ ಕಾದು ನೋಡುತ್ತಾ ಇದೆ, ಜನತೆ ಎದುರು ನೋಡುತ್ತಾ ಇದೆ ಎಂದು ತಿಳಿಸಲಿಚ್ಛಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಹೆಚ್ಚುವರಿ ಬೇಡಿಕೆಗಳ ಬಗ್ಗೆ ಸುಮಾರು 16 ಕೋಟಿ ರೂಪಾಯಿಗಳ ಮೊತ್ತದ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈಗ ಈ ಎಕ್ಸೈಜ್ ಬಾಬಿಗಾಗಿ 19 ಲಕ್ಷ ರೂಪಾಯಿಗಳ ಹೆಚ್ಚುವರಿ ಬೇಡಿಕೆ ಕೇಳಿದ್ದಾರೆ. ಈ ಬೇಡಿಕೆಗೆ ಇಷ್ಟೊಂದು ಏತಕ್ಕೆ ಬೇಕಾಗಿತ್ತು ಎನ್ನುವುದರ ಬಗ್ಗೆ ಕೆಲವು ವಿವರಗಳು ಕೊಟ್ಟಿದ್ದರೆ ಚೆನ್ನಾಗಿತ್ತು. ಆದರೆ ನನ್ನ ಸಲಹೆಯಾದರೂ ಇಷ್ಟೆ, ಈ ಪಾನನಿರೋಧ ತೆಗೆದಮೇಲೆ ಕ್ರಮಬದ್ಧವಾಗಿ ಲೈಸೆನ್ಸ್ ತೆಗೆದುಕೊಂಡು ನಡೆಸುತ್ತಾ ಇದ್ದಾರೆಯೇ? ಕಳ್ಳತನದಿಂದ ಮಾದಕ ವಸ್ತುಗಳ ವ್ಯವಹಾರ ನಡೆಯುತ್ತಾ ಇದೆ. ಆದರಿಂದ ನಮಗೆ ಬರತಕ್ಕಂಥ ವರಮಾನ ಅರ್ಧಕ್ಕೆ ಅರ್ಧ ಕಡಿಮೆಯಾಗಿದೆ. ಅದನ್ನು ತಪ್ಪಿಸುವುದಕ್ಕೇನಾದರೂ ಈ ಹೆಚ್ಚುವರಿ ಬೇಡಿಕೆ ಕೇಳಿದ್ದರೆ ಒಪ್ಪಬಹುದಾಗಿತ್ತು. ಕಳಭಟ್ಟಿಯನ್ನು ತಪ್ಪಿಸದೇ ನಮಗೆ ಬರತಕ್ಕಂಥಾ ವರಮಾನ ಹೆಚ್ಚಾಗಿ ಪೋಲಾಗುವುದರ ಜೊತೆಗೆ ಆರ್ಥಿಕ ದೃಷ್ಟಿಯಿಂದಲೂ ತೊಂದರೆ ಯಾಗುತ್ತಿದೆ. ಇದರ ಬಗ್ಗೆ ಹೆಚ್ಚಿನ ಒಂದು ಆಸಕ್ತಿ ವಹಿಸದೇ ಹೋದರೆ ಜನಗಳಿಗೆ ಒಳ್ಳೆಯದು ಮಾಡಿದಂತಾಗುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಎರಡನೆಯದಾಗಿ ಡಿಮ್ಯಾಂಡ್ ನಂಬರ್ 7 ರಲ್ಲಿ ಸ್ಟ್ಯಾಂಪ್‌ಗಾಗಿ 4 ಲಕ್ಷ 45 ಸಾವಿರ ರೂಪಾಯಿ ಕೇಳಿದ್ದಾರೆ. ಆದರೆ ಅನೇಕ ಸಾರಿ ನಮಗೆ ಬೇಕಾದ ಡಿನಾಮಿನೇಷನ್ ಸ್ಟ್ಯಾಂಪ್ಸ್ ಸಿಕ್ಕುವುದಿಲ್ಲ. 4 ಆಣೆ ಸ್ಟ್ಯಾಂಪ್ ಕೇಳಿದರೆ 8 ಆಣೆ ಸ್ಟಾಂಪ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇದರ ಬಗ್ಗೆ ವಿವರಗಳು ಕೊಟ್ಟಿದ್ದರೆ ನಮಗೆ ಮಾತನಾಡುವುದಕ್ಕೆ ಅನುಕೂಲವಾಗುತ್ತಿತ್ತು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 9 ರಲ್ಲಿ ಸ್ಟೇಟ್ ಲೆಜಿಸ್ಲೇಚರ್ ಅಂಡ್ ಎಲೆಕ್ಷನ್‌ಗೆ 17ಲಕ್ಷ 25 ಸಾವಿರ ರೂಪಾಯಿ ಹೆಚ್ಚುವರಿ ಬೇಡಿಕೆ ಕೇಳಿದ್ದಾರೆ. ಎಲೆಕ್ಷನ್‌ಗೆ ಇಷ್ಟು ದುಡ್ಡು ಖರ್ಚು ಮಾಡುವಂಥಾದ್ದು ಸರಿಯೇ ಎಂದು ನೋಡಬೇಕು.

ಮೊದಲನೆಯದಾಗಿ ವೋಟರ್ ಲಿಸ್ಟ್ ಪ್ರಿಂಟ್ ಆಗಿರುವುದರಲ್ಲಿ ಅರ್ಧಕ್ಕೆ ಅರ್ಧ ಜನರ ಹೆಸರು ಬಿಟ್ಟುಹೋಗಿದೆ. ಕೆಲವು ಬೀದಿ, ಬೀದಿಗಳೇ ಬಿಟ್ಟುಹೋಗಿದೆ. ಇಷ್ಟು ಬೇಹುಷಾರಿನಿಂದ ಮಾಡಿರತಕ್ಕಂಥ ಕೆಲಸದಿಂದ ಎಲೆಕ್ಷನ್ ಆದರೆ ಅದು ಸರಿಯಾದಂಥ ಎಲೆಕ್ಷನ್ನೇ. ಕಾರ್ಪೊರೇಷನ್ ಎಲೆಕ್ಷನ ನಲ್ಲೂ ಕೂಡ ನೂರಾರು ಜನರ ಹೆಸರು ಬಿಟ್ಟು ಹೋಗಿದೆ. ಮುಖ್ಯವಾಗಿ ಎಲೆಕ್ಷನ್ ಕಮೀಷನ್‌ನಲ್ಲಿ ಇದ್ದಂಥ ಡೆಪ್ಯುಟೀ ಎಲೆಕ್ಟೊರೋಲ್ ಆಫೀಸರ್ ಅವರ ಹೆಸರೇ ಬಿಟ್ಟು ಹೋಗಿದೆ. ಇಂತಹ ಅಲಕ್ಷ್ಯ ಮತ್ತು ಬೇಹುಷಾರಿನಿಂದ ಮಾಡುವಂಥ ಕೆಲಸಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದು ಸರಿಯೇ ಎಂದು ಯೋಚನೆ ಮಾಡಬೇಕಾಗಿದೆ.

ಇನ್ನು ಎಲೆಕ್ಷನ್ ಬಗ್ಗೆ ಹೇಳುವುದಾದರೆ ಒಬ್ಬೊಬ್ಬ 4–5 ಬೋಗಸ್ ವೋಟುಗಳನ್ನು ಹಾಕಿದ್ದಾನೆ. ಮತ್ತು ದೂರು ಕೂಡ ಬಂದಿದೆ. ಅವನ ಕೈಗೆ ಹಾಕಿರತಕ್ಕಂಥ ಗುರುತು ಏನು ಇದೆಯೋ ಅದನ್ನು ಒಂದು ನಿಮಿಷಕ್ಕೆ ಹೋಗಿಸಿಬಿಟ್ಟು ಬೇರೆ ಬೂತ್‌ಗೆ ಹೋಗಿ, 3–4 ಬೂತುಗಳಿಗೆ ಹೋಗಿ ವೋಟು ಮಾಡಿದ್ದಾನೆ. ಇಂತಹ ವೋಟಿನಿಂದ ಎಲೆಕ್ಷನ್‌ನಿಂದ ಗೆದ್ದು ಬರುವುದು ಸರಿಯೇ ಎಂದು ಯೋಚನೆ ಮಾಡಬೇಕು. ಎಲೆಕ್ಷನ್‌ನಲ್ಲಿ ಸರಿಯಾದ ಒಂದು ಕ್ರಮ ಇಲ್ಲದೇ ಹೋದರೆ ಏನು ಪ್ರಯೋಜನ? ಅದರಲ್ಲಿ ಆರಿಸಿ ಬರುವವರು ಯಾರು ಎಂದರೆ ಹಣ ಇರುವವರು, ಪುಂಡರು ಬರುತ್ತಾರೆಯೇ ವಿನಃ ಸಜ್ಜನರಾಗಿರುವವರು ಬರುವುದಕ್ಕೆ ಕಷ್ಟವಾಗುತ್ತದೆ. ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 20 ರಲ್ಲಿ ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಅಂಡ್ ಫಿಷರೀಸ್ ಈ ಬಾಬುಗಳಿಗೆ ಅನೇಕ ಲಕ್ಷಾಂತರ ರೂಪಾಯಿಗಳನ್ನು ಕೇಳಿದ್ದೀರಿ. ಅಗ್ರಿಕಲ್ಚರ್‌ಗೆ ಬೇಕಾದಷ್ಟು

ಕೊಡಬೇಕು ಎನ್ನುವುದು ನ್ಯಾಯವಾಗಿದೆ. ಒಂದು ಕಡೆ ಆಹಾರದ ಉತ್ಪನ್ನ ಜಾಸ್ತಿಯಾಗುತ್ತಾ ಇದೆ ಎಂದು ಹೇಳುತ್ತಾ ಇದ್ದೀರಿ, ಆದರೂ ಕೂಡ ರೈತರಿಗೆ ಇದರಿಂದ ಸಾಕಾದಷ್ಟು ವರಮಾನ ಬರುತ್ತಾ ಇಲ್ಲ ಎಂದು ಕೂಗು ಹಬ್ಬಿದೆ. ಇನ್ನೊಂದು ಕಡೆ ನೌಕರರ ಸಂಬಳಸಾರಿಗೆ ಹೆಚ್ಚಾಗುತ್ತಾ ಇದೆ ಎನ್ನುವ ಕೂಗು ಇದೆ. ಇದರಿಂದ ಸಾಮಾನುಗಳ ಬೆಲೆ ಜಾಸ್ತಿಯಾಗಿ ಜನಸಾಮಾನ್ಯರಿಗೆ ನಿತ್ಯ ಜೀವನದಲ್ಲಿ ಯಾವರೀತಿಯಲ್ಲೂ ಸುಖ ಸಿಗುತ್ತಾ ಇಲ್ಲ. ಇದನ್ನು ಯಾವರೀತಿಯಾಗಿ ಬಗೆಹರಿಸಬೇಕು ಎಂದು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಈಗ ನಮ್ಮ ಮುಂದಿರುವ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ಕೇಳಿದ್ದಾರೆ. ಆದರೆ ಅದರಿಂದ ಜನತೆಗೆಷ್ಟು ಅನುಕೂಲವಾಗುತ್ತದೆ ಎಂಬುದನ್ನು ಯೋಚನೆಮಾಡಬೇಕಾಗಿದೆ. ಜನರ ಕ್ಷೇಮವನ್ನು ಸಾಧಿಸದಿರುವ ಕಾರ್ಯಗಳಿಗೆ ಖರ್ಚು ಮಾಡುವುದು ನ್ಯಾಯವಲ್ಲ. ಇದನ್ನು ತೀವ್ರವಾಗಿ ಯೋಚನೆಮಾಡಿ ಎಲ್ಲರಿಗೂ ಅನುಕೂಲವಾಗವಂಥ ಕಾರ್ಯಗಳನ್ನು ಕೈ ಕೊಳ್ಳಬೇಕು. ಒಂದು ಕಡೆ ಸಂಬಳಸಾರಿಗೆಗಳನ್ನು ಹೆಚ್ಚಿಸುತ್ತಿದ್ದಾರೆ, ಇನ್ನೊಂದು ಕಡೆ ಸ್ವರ್ಗವನ್ನು ಭೂಲೋಕಕ್ಕೆ ಇಳಿಸುತ್ತೇವೆಂದು ಸ್ಲೋಗನ್ ಇದೆ; ಸಂತೋಷ. ರಾಮರಾಜ್ಯ ನಿರ್ಮಾಣ ಮಾಡುವುದಾಗಿ ಹೇಳುತ್ತಿದ್ದಾರೆ. ಆದರೆ ಸಾಹುಕಾರರು ಬಡವರಾಗಬಹುದೇ ಹೊರತು ಬಡವರನ್ನು ಸಾಹುಕಾರರನ್ನಾಗಿ ಮಾಡಲು ಸಾಧ್ಯವಿಲ್ಲ. ಬಡವ ಬಡವನಾಗಿಯೇ ಇರುತ್ತಾನೆ. ಬರೀ ಸ್ಲೋಗನ್ ಇದೆಯೇ ವಿನಾ ನಿಜವಾಗಿಯೂ ಜನರ ಕ್ಷೇಮಾಭ್ಯುದಯವಾಗುತ್ತಿಲ್ಲ. ಬರೀ ಡಿಮ್ಯಾಂಡ್ ಮತ್ತು ಬಜೆಟ್‌ಗಳನ್ನು ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಈ ಸರಕಾರದ ಮೇಲೆ ಈಗ ಹೆಚ್ಚು ಆರೋಪವನ್ನು ಹೊರಿಸುವುದಕ್ಕಾಗುವುದಿಲ್ಲ, ಮುಂದೆ ಅಸೆಂಬ್ಲಿ ನಡೆಯುವಾಗ ಎಷ್ಟು ಮಟ್ಟಿಗೆ ಹೇಳುವಂತೆ ನಡೆದುಕೊಂಡಿದ್ದಾರೆಂಬುದು ನೋಡಬೇಕಾಗಿದೆ. ಈಗ ಇಂದಿರಾ ಗಾಂಧಿಯವರ ರಕ್ಷಣೆ ತಮಗಿರಬಹುದು. ಅದಿರುವವರೆಗೆ ತಮಗೆ ಅನುಕೂಲ. ಆದರೆ ಕೊನೆಯವರೆಗೆ ಅದಿರುವುದಿಲ್ಲ. ಕಂಗೆಟ್ಟ ಜನರಿಂದ ತೊಂದರೆಗೀಡಾಗಬೇಕಾಗುವುದು. ಜನರು ತಿರುಗಿ ಬೀಳುವರು. ಇದನ್ನು ಗಮನಿಸಿ ಜನರ ಹಿತವನ್ನು ಸಾಧಿಸಬೇಕಾಗುತ್ತದೆ. ಹೀಗೆಯೇ ಪರಿಸ್ಥಿತಿ ಮುಂದುವರೆದರೆ ಜನರು ರೊಚ್ಚಿಗೇಳುತ್ತಾರೆ. ಈ ಬಜೆಟ್ಟಿನಲ್ಲಿರುವುದು ಹಿಂದಿನ ಸರಕಾರಕ್ಕೆ ಸಂಬಂಧಪಟ್ಟದ್ದು, ಆದುದರಿಂದ ಇದರ ಬಗ್ಗೆ ನಿಮ್ಮನ್ನು ದೂರುವುದಿಲ್ಲ. ಯಾರು ಜನತೆಗೆ ಕ್ಷೇಮವನ್ನುಂಟುಮಾಡುವರೋ ಅವರಿಗೆ ಬೆಂಬಲ ಕೊಡುತ್ತೇವೆ. ಈಗ ಅನಿವಾರ್ಯವಾಗಿ 18 ಕೋಟಿ ಚಿಲ್ಲರೆ ರೂಪಾಯಿಗಳ ಹೆಚ್ಚುವರಿ ಬೇಡಿಕೆಯನ್ನು ಅಂಗೀಕರಿಸುತ್ತೇವೆ. ಇದು ಸರಿಯಾದ ಬೇಡಿಕೆಯಲ್ಲ. ಮುಂದೆ ಸರಿಯಾದ ಬೇಡಿಕೆ ಮಂಡಿಸುವಿರಿ ಎಂದು ಭಾವಿಸಿ ಕೆಲವು ಕಾಲ ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್ (ಹೊಸನಗರ).—ಅಧ್ಯಕ್ಷರೇ, ಈ ಸಮಯದಲ್ಲಿ 'ನುಡಿದಂತೆ ನಡೆಯಬೇಕು' ಎಂದಿತ್ಯಾದಿ ಇರುವ ಸರ್ವಜ್ಞರ ವಚನ ಜ್ಞಾಪಕಕ್ಕೆ ಬರುವುದು. ಚುನಾವಣಾ ಕಾಲದಲ್ಲಿ ಜನತೆಗೆ ಆಶ್ವಾಸನ ಕೊಟ್ಟಿರುವುದು ಸರಕಾರ ಮಾಡುತ್ತಿರುವುದು ನೋಡಬೇಕು. ವಚನ ಕೊಟ್ಟಂತೆ ನಡೆದರೆ ಜನರಿಗೆ ಅನುಕೂಲವಾಗುವುದು. ಜನರು ಕೂಡ ನಿಮ್ಮನ್ನು ಮೆಚ್ಚುವರು. ನನಗುಂಟಾಗಿರುವ ಅನುಭವವನ್ನು ಹೇಳುವುದಾದರೆ ಕೆಲಸವಿಲ್ಲದಿರುವವರಿಗೆ ಕೆಲಸ ಕೊಡಲು ಏನು ಕಾರ್ಯಕ್ರಮ ತೆಗೆದುಕೊಂಡರು, ಅದು ಎಷ್ಟುಮಟ್ಟಿಗೆ ಸಫಲವಾಯಿತು ಎಂಬುದನ್ನು ಯಾರಾದರೂ ಪರಿಶೀಲಿಸಿರುವರೇ? ಸುಮ್ಮನೆ ಅಂಕಿಅಂಶಗಳನ್ನು ನೋಡಿ ಎಲ್ಲಾ ಕಾರ್ಯಗತವಾಗಿವೆಯೆಂದು ಹೇಳುವರೇ ಹೊರತು ವಾಸ್ತವವಾಗಿ ಕೆಲಸವಾಗಿರುವುದನ್ನು ಯಾರೂ ಪರಿಶೀಲಿಸಿಲ್ಲ. ಕೆಲವು ಸಂದರ್ಭಗಳಲ್ಲಿ ಫೋಟೋಗ್ರಾಫ್ ಮಾಡಿದ್ದಾರೆ. ಉದಾಹರಣೆಗೆ ಹರಿಜನ ಮನೆಗಳ ವ್ಯವಸ್ಥೆ ಕೆಲಸ ತೃಪ್ತಿಕರವಾಗಿದೆ ಎಂಬ ಭಾವನೆ ಇಂದು ಸರಕಾರಕ್ಕಿದೆ. ಈ ವಿಚಾರದ ಅನುಭವ ಎಲ್ಲರಿಗೂ ಇದೆ. ಅವರಲ್ಲಿ ಅನೇಕರಿಗೆ ಆಕಾಶವೇ ಛಾವಣಿ ನೆಲವೇ ಹಾಸಿಗೆ. ಈ ಕೆಲಸ ಸರಿಯಾಗಿ ಆಗಿರುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಕೂಡ ಏನೂ ಸರಿಯಾದ ಕೆಲಸ ನಡೆದಿಲ್ಲ. ಮಾಡುವ ಖರ್ಚುವಿತರಣೆಯಿಂದ ಆಗುತ್ತಿಲ್ಲ. ಅದನ್ನು ಸರಕಾರ ಸರಿಯಾಗಿ ನೋಡಬೇಕು. ನಮ್ಮ ಅರ್ಥಿಕಮಂತ್ರಿಗಳು ಬಹಳ ಮೇಧಾವಿಗಳು, ರಾಜ್ಯದ ಎಕಾನಮಿ ವಿಚಾರದಲ್ಲಿ ಅವರಿಗೆ ಒಳ್ಳೆಯ ಪರಿಶ್ರಮವಿದೆ. ಯಾವಯಾವ ಬಾಬಿಗೆ ಹೆಚ್ಚು ಹಣ ಒದಗಿಸಬೇಕೆಂಬುದು ಅವರಿಗೆ ಗೊತ್ತಿದೆ. ಹೊಸನಗರದಲ್ಲಿ 75 ಸಾವಿರ ಓಟರುಗಳಿದ್ದಾರೆ, ಅದು ಮಲನಾಡು, ಇಂದು ಕೂಡ ಆ ಪ್ರಾಂತದಲ್ಲಿ ಯಾರಾದರೂ ಕಾಯಿಲೆ ಬಂದು ಮಲಗಿದರೆ ಎಂಟು ಮೈಲಿ ದೂರದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಸ್ವಾತಂತ್ರ್ಯ ಬಂದು 25 ವರ್ಷವಾದರೂ ಕೂಡ ರೂರಲ್ ಕಮ್ಯೂನಿಕೇಷನ್ ವ್ಯವಸ್ಥೆ ಉತ್ತಮವಾಗಿಲ್ಲ. ಈ ವಿಚಾರದಲ್ಲಿ ಎಷ್ಟೇ ಸಲಹೆ ಕೊಟ್ಟು ಒತ್ತಾಯಮಾಡಿದ್ದರೂ ಪ್ರಯೋಜನವಾಗಿಲ್ಲ. ವೈದ್ಯಕೀಯ ಮತ್ತು ಸಂಚಾರ ವ್ಯವಸ್ಥೆ ಬಾಬುಗಳಿಗೆ ಎಷ್ಟೇ ಖರ್ಚಾಗಿದ್ದರೂ ಸಹ ಮಲನಾಡಿಗೆ ಸಾಕಷ್ಟು

(ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್)

ಸಹಾಯವಾಗಿಲ್ಲ. ಮನೆಗಳ ಸೌಕರ್ಯ ಕೂಡ ಇದುವರೆಗೆ ಮಾಡಿರುವುದು ಏನೇನೂ ಸಾಲದು ಹಣ ಸಾಕಷ್ಟು ಒದಗಿಸುವುದಲ್ಲದೆ ಅದು ಸದ್ವಿನಿಯೋಗವಾಗುವಂತೆಯೂ ನೋಡಿ ಕೊಳ್ಳಬೇಕು. ಇದು ಮುಖ್ಯವಾದುದು.

ನಮಗೆ ಜನರಲ್ ಹಾಸ್ಟಲಿನಲ್ಲಿ ವಸತಿ ಕಲ್ಪಿಸಿದ್ದಾರೆ ಅಲ್ಲಿ ಊಟದ ವ್ಯವಸ್ಥೆ ಸರಿಯಾಗಿಲ್ಲ. ಬೇಕಾದವರಿಗೆ ಸರಿಯಾದ ಅನುಕೂಲ ಮಾಡುವರು. ಬಡವರಿಗೆ ಕೊಟ್ಟಿರುವ ಭರವಸೆಯನ್ನು ಸರಿಯಾಗಿ ಈಡೇರಿಸಿಲ್ಲ. ನಮ್ಮಂಥವರಿಗೇ ಸರಿಯಾದ ಅನುಕೂಲತೆ ಒದಗಿಸದಿರುವವರು ಬಡವರಿಗೆ ನಿಜವಾಗಿಯೂ ಅನುಕೂಲ ಮಾಡುವರೇ? ಮುಂದಿನ 5 ವರ್ಷಗಳಲ್ಲಿ ಬಡವರಿಗೆ ಕೊಟ್ಟಿರುವ ಭರವಸೆಯಂತೆ ಕಾರ್ಯತಃ ಮಾಡಿ ತೋರಿಸಿದರೆ ಮೆಚ್ಚಬಹುದು. ವಿರೋಧ ಪಕ್ಷದ ಶ್ರೀ ವಾಟಾಳ್ ನಾಗರಾಜ್‌ರವರು ಒಂದು ಮಾತನ್ನು ಹೇಳಿದ್ದಾರೆ. ಸಿದ್ಧವೀರಪ್ಪನವರು, ಚನ್ನಬಸಪ್ಪನವರು ಮುಂತಾದವರೇನು ಈಗ ಎದುರಿಗೆ ಕುಳಿತಿದ್ದಾರೆ, ಅವರು ಹಿಂದೆ ಈ ಕಡೆ ವಿರೋಧ ಪಕ್ಷದಲ್ಲಿದ್ದರು. ಈಗ ಆ ಕಡೆ ಅವರನ್ನು ನೋಡಿದರೆ ಅವರ ಮೇಲೆ ಹೇಗೆ ಟೀಕೆ ಮಾಡಬೇಕೋ ಅದಕ್ಕೆ ಮನಸ್ಸೇ ಬಾರದು—ಎಂದು ಹೇಳಿದ್ದಾರೆ ಅರ್ಜುನನು ಮಹಾಭಾರತ ಯುದ್ಧದಲ್ಲಿ ತಾತ, ಪಿತಾಮಹ ಮುಂತಾದವರನ್ನು ನೋಡಿ ಅವರ ಮೇಲೆ ಹೇಗೆ ಗಾಂಡೀವವನ್ನೆತ್ತುವುದು ಎಂದು ಚಿಂತಾಕ್ರಾಂತನಾದ. ವಾತ್ಸಲ್ಯವನ್ನು ಬಿಟ್ಟು ಧರ್ಮಯುದ್ಧಮಾಡು ಎಂದು ಕೃಷ್ಣಪರಮಾತ್ಮ ಹೇಳಿದನಂತೆ. ವಿರೋಧಪಕ್ಷದಲ್ಲಿ ಕುಳಿತುಕೊಂಡು ರಚನಾತ್ಮಕವಾದ ಟೀಕೆಗಳನ್ನು ಮಾಡಿ, ಧರ್ಮಯುದ್ಧಮಾಡಿ ನಮ್ಮನ್ನು ಎಚ್ಚರಿಸಿ ಸಭೆಯ ಕಾರ್ಯಕಲಾಪಗಳು ನಡೆಯದಂತೆ ತಡೆ ಹಿಡಿಯುವುದನ್ನು ಮಾಡದೇ ಇರಲಿ ಎಂದು ನಾನು ವಿರೋಧ ಪಕ್ಷದವರನ್ನು ಕೇಳಿಕೊಳ್ಳುತ್ತೇನೆ. ಬಡ್ಜೆಟ್ ಏನು ತಯಾರು ಮಾಡಿದ್ದಾರೆ ಅದು ಸರಿಯಾದ ರೀತಿಯಲ್ಲಿ ವಿತರಣೆಯಾಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

2–30 P.M.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಅಧ್ಯಕ್ಷರೇ, ಈಗತಾನೆ ಹೇಳಿದಂತಹ ವಿಷಯದಲ್ಲಿ ಒಂದೆರಡನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ಮನೆಯಲ್ಲಿ ಸ್ವತಂತ್ರ ಬಂದಲಾಗಾಯ್ತು ಇದೇ ಮಾತನ್ನು ಅನೇಕ ಜನ ಸದಸ್ಯರು ಹೇಳಿದ್ದಾರೆ; ಈಗ ನಾವು ಹೇಳುತ್ತಿದ್ದೇವೆ, ಮುಂದೆ ಇದೇ ರೀತಿ ಹೇಳುವವರು ಬರುತ್ತಾರೆ. ನೀವು ಹಣವನ್ನು ಸದ್ವಿನಿಯೋಗ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಮತ್ತೆ ಹೇಳುವುದಾದರೆ ನಿಮ್ಮ ಆಡಳಿತ ಅದೇ ರೀತಿ ಮುಂದುವರಿದಿದೆ ಎಂದು ಅರ್ಥ ಮಾಡುತ್ತೇನೆ. ಸ್ವಾತಂತ್ರ್ಯ ಬಂದ ಮೇಲೆ ಕಾಂಗ್ರೆಸ್ ಸರ್ಕಾರದವರು ಯಾವ ರೀತಿಯ ನೀತಿನಿಯಮಗಳನ್ನು ಹಾಕಿಕೊಳ್ಳದೆ ಅಧಿಕಾರಗಳ ಹತ್ತಿರ ಅಧಿಕಾರ ಮತ್ತು ಹಣವನ್ನು ನಂಬಿ ಕೊಡುತ್ತಿದ್ದೀರಿ ನೀವು ಯಾವ ರೀತಿ ನಂಬಿಕೆ ಅವರಲ್ಲಿ ಇಟ್ಟಿದ್ದೀರಿ ಎನ್ನುವ ವಿಷಯದ ಮೇಲೆ ತೀರ್ಮಾನವಾಗಿದೆ. ಸರ್ಕಾರಿ ಅಧಿಕಾರಿಗಳು ನಮಗೆ ಬಹಳ ನಮ್ರರಾಗಿದ್ದಾರೆ ನಮ್ಮನ್ನು ಕಂಡರೆ ಹೆದರುತ್ತಾರೆ; ಸಾರ್ವಜನಿಕ ಪ್ರತಿನಿಧಿಗಳನ್ನು ಕಂಡರೆ ಮತ್ತು ಮಂತ್ರಿಗಳನ್ನು ಕಂಡರೆ ಹೆದರುತ್ತಾರೆಂದು ನೀವು ತಿಳಿದುಕೊಂಡಿದ್ದೀರಿ ಅದು ತಪ್ಪು.

ಶ್ರೀ ಕೆ. ಎಚ್. ರಂಗನಾಥ.—ಮಧ್ಯಕಾಲೀನ ಚುನಾವಣೆಗಳಲ್ಲಿ ನಿಮ್ಮ ಪಾರ್ಟನರ್ಸ್ ಆಗಿದ್ದರು.

ಶ್ರೀ ಎಸ್. ಬಂಗಾರಪ್ಪ.—ಪಾಂಡಿಚೇರಿಯಲ್ಲಿ ನಿಮ್ಮ ಪಾರ್ಟನರ್ಸ್ ಆಗಿ ಕಾಮರಾಜ್ ಇದ್ದರು. ಮರೆಯಬೇಡಿ, ಅವರು ನೀವು ದೊಡ್ಡ ಪಾರ್ಟನರ್ಸ್ ಆಗಿ ಈ ದೇಶವನ್ನು ಹಾಳು ಮಾಡಿದ್ದೀರೆಂದು ಹೊಸದಾಗಿ ಹೇಳಬೇಕಾಗಿಲ್ಲ.

ಅಧ್ಯಕ್ಷರೇ, ಹಣ ಕೋಟಿಗಟ್ಟಲೆ ಇರಬಹುದು ಮಾನ್ಯಸದಸ್ಯರಾದ ಶ್ರೀ ಚಂದ್ರಶೇಖರ್ ಅವರು ಹೇಳಿದಂತೆ 25 ರೂಪಾಯಿ ಇರಬಹುದು. ಅದು ಸದ್ವಿನಿಯೋಗ ಆಗಬೇಕು ಎನ್ನುವ ಆಸೆ ನಮಗೂ ನಿಮಗೂ ಇದೆ. ಆದರೆ ಅದು ಆಗುತ್ತಾ ಇಲ್ಲ ಎನ್ನುವ ನೋವು ನಮ್ಮ ಮನಸ್ಸಿನಲ್ಲಿದೆ. ಅದನ್ನು ಹೇಗೆ ಸರಿಮಾಡಬೇಕು ಎಂದು ಮಾನ್ಯ ಅಧ್ಯಕ್ಷರನ್ನು ಕೇಳುತ್ತೇನೆ. ಹೆಚ್ಚುವರಿ ಬೇಡಿಕೆಗಳಾಗಲಿ ಅಥವಾ ಮುಂದೆ ಜೂನ್ ತಿಂಗಳಿನಲ್ಲಿ ಮಂಡನೆ ಮಾಡುತ್ತೇವೆಂದು ಏನು ಹೇಳಿದ್ದಾರೆ ಅದರಂತೆ ಸಂಪೂರ್ಣ ಹಣವನ್ನು ಅವರ ಕೈಗೆ ಕೊಡುತ್ತೇವೆ. ಅದಕ್ಕೆ ನಮ್ಮ ಅಭ್ಯಂತರವಿಲ್ಲ ಆದರೆ ನೀವು

ಒಂದು ಶರತ್ತಿಗೆ ಒಪ್ಪಬೇಕು. ಅಧಿಕಾರ ವರ್ಗದವರು ನಾವು ನೀವು ಸೇರಿ ಮಾಡತಕ್ಕ ಕಾನೂನುಗಳನ್ನು ಲೆಟರ್ ಅಂಡ್ ಸ್ಪಿರಿಟ್ ಅರ್ಥ ಮಾಡಿಕೊಂಡು ದೇಶದಲ್ಲಿರತಕ್ಕ ಬಡ ಜನರಿಗೆ ಅನುಕೂಲವಾಗುವಂತೆ ಹಣವನ್ನು ಖರ್ಚುಮಾಡಬೇಕು, ಮಾನ್ಯ ಚಂದ್ರಶೇಖರ್‌ರವರು ಹೇಳಿದಂತೆ ಆಕಾಶವೇ ಹೊದಿಕೆ ನೆಲವೇ ಹಾಸಿಗೆ ಎನ್ನುವ ಮಾತು ನಿಜ. ಆ ರೀತಿ ಅನೇಕ ಜನರಿದ್ದಾರೆ. ಎಲ್ಲ ಕ್ಷೇತ್ರಗಳಲ್ಲಿಯೂ ಜನರು ಕೊಟ್ಟಿರತಕ್ಕ ಅಧಿಕಾರ ಏನು ಇದೆ ಆ ಅಧಿಕಾರದಿಂದ ಅಧಿಕಾರಿಗಳ ಮೇಲೆ ಕಡಿವಾಣ ಹಾಕದೆ ಇದ್ದರೆ ನಿಮ್ಮ ಕೈಯ್ಯಲ್ಲಿ ಕೊಡುವ ಹಣ ಸಂಪೂರ್ಣವಾಗಿ ದುರುಪಯೋಗವಾಗುತ್ತದೆ ಎನ್ನುವ ಅಪನಂಬಿಕೆ ಬಂದಿದೆ. ಶ್ರೀಮತಿ ಇಂದಿರಾ ಗಾಂಧಿಯವರು ಅಥವಾ ಆಡಳಿತದಲ್ಲಿರುವ ಪಕ್ಷದವರು ಗರೀಬಿ ಹಟಾವೋ ಎಂದು ಏನು ಘೋಷಣೆ ಮಾಡಿದರೋ ಆ ಬರೀ ಘೋಷಣೆಯಿಂದ ದೇಶ ಉದ್ಧಾರವಾಗುವುದಿಲ್ಲವೆಂದು ನಾನು ಅರಿತುಕೊಂಡಿದ್ದೇನೆ. ಅನೇಕ ಜನ ಟ್ರಷರಿ ಬೆಂಚಿನಲ್ಲಿ ಇದ್ದಾರೆ ಅವರು ಕೂಡ ಈ ಮಾತನ್ನು ಹೇಳಿದ್ದಾರೆ ಅಧಿಕಾರವರ್ಗ ಬದಲಾವಣೆ ಆಗಿಲ್ಲ ಸರ್ಕಾರಗಳು ಮಾತ್ರ ಬದಲಾವಣೆಯಾಗಿವೆ ಯಾರೂ ಇದನ್ನು ಮರೆಯಬಾರದು. ಸರ್ಕಾರಗಳು ಮಾತ್ರ ಒಂದುಸಾರಿ ಸಿಂಡಿಕೇಟ್, ಒಂದುಸಾರಿ ಇಂಡಿಕೇಟ್ ಹೀಗೆ ಸರ್ಕಾರಗಳು ಬದಲಾಗಿವೆಯೇ ಹೊರತು ಅಧಿಕಾರಿಗಳು ಏನಾದರೂ ಬದಲಾವಣೆಯಾಗಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಈ ರಾಜ್ಯದಲ್ಲಿರತಕ್ಕ ಚೀಫ್ ಇಂಜಿನಿಯರ್‌ಗಳು, ಐ.ಜಿ.ಪಿ. ಡಿ.ಐ.ಜಿ. ಸೆಕ್ರೆಟರಿಗಳು ಡೈರೆಕ್ಟರುಗಳು ಹೀಗೆ ಎನ್ನು ಭಾರಿ ಭಾರಿ ಜನರಿದ್ದಾರೆ ಅಂತವರುಗಳ ಮೇಲೆ ಕ್ರಮ ಏನು ತೆಗೆದುಕೊಂಡಿದ್ದೀರಿ. ನೀವು ಒಬ್ಬರನ್ನಾದರೂ ಸಸ್‌ಪೆಂಡ್ ಮಾಡಿರತಕ್ಕದ್ದು ಇದೆಯೇ ? ಶ್ರೀಮಾನ್ ಚರಣಸಿಂಗ್‌ರು ಐ.ಜಿ.ಪಿ. ಯವರನ್ನು ತೆಗೆದುಹಾಕಿದರು. ಕೇರಳ ರಾಜ್ಯದಲ್ಲಿ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದು ನೆನಪಿದೆ. ಮೈಸೂರು ರಾಜ್ಯದಲ್ಲಿ ಇಂತಾದ್ದು ಒಂದಾದರೂ ಇದೆಯೇ ? ಇದ್ದರೆ ನಿಮ್ಮ ಆಡಳಿತಕ್ಕೆ ಕಳೆ ಬಂದೀತು.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಚನ್ನಬಸಪ್ಪನವರು ಒಬ್ಬ ಚೀಫ್ ಇಂಜಿನಿಯರ್ ಮೇಲೆ ಕ್ರಮತೆಗೆದುಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಚನ್ನಬಸಪ್ಪನವರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದಾಗ ಒಬ್ಬರನ್ನು ಸಸ್‌ಪೆಂಡ್ ಮಾಡಿದ್ದ ವಿಷಯ ನನಗೆ ಗೊತ್ತಿದೆ.

ಅಧ್ಯಕ್ಷರೇ ನಾವು ಮೊದಲು ಸಹಕಾರ ಕೊಡುತ್ತೇವೆ. ಇಲ್ಲಿಯವರೆಗೂ ಕೊಟ್ಟು ನೋಡಿದ್ದು ಆಗಿದೆ ಇನ್ನು ಮೇಲೆಯೂ ಸಹಕಾರ ಕೊಡುತ್ತೇವೆ. ವಿಜಿಲೆನ್ಸ್ ಕಮಿಷನ್, ಆಂಟಿಕರಪ್‌ಷನ್ ಸೆಲ್ ಇನ್ ಈಚ್ ಡಿಪಾರ್ಟ್‌ಮೆಂಟ್, ಆಂಟಿ ಕರಪ್‌ಷನ್ ಡಿಪಾರ್ಟ್‌ಮೆಂಟ್ ಇದನ್ನೆಲ್ಲಾ ನಂಬಿ ಉಪಯೋಗವಿಲ್ಲ. ಜನಗಳಿಗೆ ಅದು ಅರ್ಥವಾಗಿದೆ. ಅರ್ಥ ಸಚಿವರು ಹಣ ಕೇಳುತ್ತಾರೆ ಅದನ್ನು ಕೊಡುತ್ತೇವೆ, ಹಣ ಖರ್ಚಾಗುತ್ತದೆ. ಆಂಟಿಕರಪ್‌ಷನ್‌ನವರು ಸೆಕೆಂಡ್ ಡಿವಿಜನ್ ಕ್ಲಾರ್ಕುಗಳು ಇಂತವರುಗಳ ಮೇಲೆ ಕ್ರಮತೆಗೆದುಕೊಂಡು ದೊಡ್ಡ ಸಂಖ್ಯೆಗಳನ್ನು ತೋರಿಸುತ್ತಾರೆಯೇ ಹೊರತು ಚೀಫ್ ಇಂಜಿನಿಯರ್‌ರವರು ದೊಡ್ಡ ದೊಡ್ಡ ಅಧಿಕಾರಿಗಳು ಮತ್ತು ಲಕ್ಷಾನುಗಟ್ಟಲೆ ಹಣ ಸಂಪಾದನೆ ಮಾಡುತ್ತಿದ್ದಾರೆ, ಅಧಿಕಾರಿಗಳ ಮನೆಯ ಹೆಣ್ಣು ಮಕ್ಕಳ ಮೈಮೇಲೆ ಇರುವ ಒಡವೆಗಳು ಅವರಿಗೆ ಇರತಕ್ಕ ಆಸ್ತಿಪಾಸ್ತಿ ಏನು ಅವರ ವೈಭವದ ಜೀವನ ಏನು ಎಂಬುದನ್ನು ನೋಡದೆ ಕಣ್ಣುಮುಚ್ಚಿಕೊಂಡು ಕುಳಿತಿದ್ದಾರೆ. ಸಣ್ಣಪುಟ್ಟ ಅಧಿಕಾರಿಗಳನ್ನು ಹಿಡಿದು ವಿಜಿಲೆನ್ಸ್ ಕಮಿಷನ್ನಿನವರು ದೊಡ್ಡ ದೊಡ್ಡ ವರದಿಗಳನ್ನು ನಮ್ಮ ಮುಂದೆ ಇಡುತ್ತಾರೆ. ಶ್ರೀಮಾನ್ ಎಂ.ವೈ. ಘೋರ್ಪಡೆಯವರು ನಮ್ಮ ಒಂದಿಗೆ ಸ್ವಲ್ಪ ಕಾಲ ಕುಳಿತಿದ್ದವರು. ಅವರು ಗ್ರೀನ್‌ರೆವಲೂಷನ್ ಮೇಲೆ ಕೊಟ್ಟಿರುವ ಅಂಕಿಅಂಶಗಳು ಅಚ್ಚಳಿಯದೆ ನಮ್ಮ ಮುಂದಿದೆ. ಆ ವಿಷಯದ ಬಗ್ಗೆ ಚರ್ಚೆ ಬಂದಾಗ ಮಾತನಾಡುತ್ತೇನೆ. ರಾಜ್ಯದ ಆರ್ಥಿಕ ಮಟ್ಟವನ್ನು ಮೇಲಕ್ಕೆ ತರಬೇಕೆನ್ನುವ ಉತ್ಸಾಹ ಅವರಿಗೆ ಇದೆ. ಅದನ್ನು ಮೆಚ್ಚುತ್ತೇನೆ. ಇವರು ಈ ಕೆಲಸ ಮಾಡಬೇಕು ಎನ್ನುವುದಾದರೆ ಯಾವ ಸಚಿವ ಖಾತೆಗೆ ಹಣ ಕೊಡುತ್ತೀರಿ ಅವರ ಮೇಲೆ ಒಂದು ಶರತ್ತನ್ನು ಹಾಕಬೇಕು. ಏನೆಂದರೆ ಅಡ್ಮಿನಿಸ್ಟ್ರೇಷನ್ ಹೇಗೆ ಇರಬೇಕು ಎನ್ನುವ ಬಗ್ಗೆ ಒಂದು ಶರತ್ತು ಹಾಕಬೇಕು.

ಐದನೇಯ ವಿತ್ತೀಯ ಆಯೋಗದ ವರದಿಯ ಬಗ್ಗೆ ಹೋದಸಾರಿ ನಾನು ಸದಸ್ಯನಾಗಿದ್ದಾಗ ಸಾಕಷ್ಟು ಪ್ರಮಾಣದಲ್ಲಿ ಚರ್ಚೆಯಾಗಿದೆ. ಆಯೋಗದವರ ವರದಿಯಂತೆ ನಮಗೆ ಬರಬೇಕಾದ ಹಣದಲ್ಲಿ ಸುಮಾರು ನೂರು ಕೋಟಿ ರೂಪಾಯಿ ಕೇಂದ್ರ ಸರ್ಕಾರದವರೂ ಖೋತಾ ಮಾಡಿದ್ದು ಆ ಹಣ ಇನ್ನೂ ಬಂದಿಲ್ಲ. ನಮ್ಮ ರಾಜ್ಯಕ್ಕೆ ಎಷ್ಟು ಕೊಡಬೇಕಾಗಿತ್ತೋ ಅದರಲ್ಲಿ ಖೋತಾ ಮಾಡಿದ್ದಾರೆ. ಇದನ್ನು ಏಕೆ ಕೊಟ್ಟಿಲ್ಲ, ಕಾರಣಗಳು ಏನು ಏಕೆ ಈ ಅನ್ಯಾಯ ! ಕೇಂದ್ರ ಸರ್ಕಾರದವರು ಖೋತಾ ಮಾಡಿರುವುದರಿಂದ ಇಲ್ಲಿನ ಕೆಲಸಕಾರ್ಯಗಳಿಗೆ ತೊಂದರೆಯಾಗಿದೆ. ಕಾನೂನು ಪ್ರಕಾರ

(ಶ್ರೀ ಎಸ್. ಬಂಗಾರಪ್ಪ)

ನಮಗೆ ದಕ್ಕಬೇಕಾದ, ನಮಗೆ ಬರಬೇಕಾದ, ಐದನೇ ಆಯೋಗದ ವರದಿಯಂತೆ ನಮಗೆ ಬರಬೇಕಾದ ಹಣವನ್ನು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಓವರ್ ಡ್ರಾಫ್ಟ್ ವಿಷಯ. ಪ್ರತಿ ರಾಜ್ಯದವರು ಓವರ್‌ಡ್ರಾಫ್ಟ್ ಮಾಡುತ್ತಾರೆ. ಈ ರಾಜ್ಯಕ್ಕೆ ಎರಡು ಸಮಸ್ಯೆಗಳಿವೆ. ಇರತಕ್ಕ ಸಾಲಸೋಲಗಳನ್ನು ತಗ್ಗಿಸಬೇಕಾದರೆ ಅಥವಾ ಜನತೆಯ ಜೀವನಮಟ್ಟವನ್ನು ಏರಿಸಬೇಕಾದರೆ ಸಂಪನ್ಮೂಲಗಳನ್ನು ಜಾಸ್ತಿ ಮಾಡಿಕೊಳ್ಳಬೇಕು. ಕಡಿಮೆ ಬಿದ್ದರೆ ಓವರ್‌ಡ್ರಾಫ್ ಸೌಲಭ್ಯ ಉಪಯೋಗಿಸಿಕೊಳ್ಳಬೇಕು. ಅದಕ್ಕೆ ಈ ಸೌಲಭ್ಯ ಇರತಕ್ಕದ್ದು. ನಿನ್ನೆ ಪತ್ರಿಕೆಯಲ್ಲಿ ಯೋಜನಾ ಸಚಿವರಾದ ಶ್ರೀ ಸುಬ್ರಮಣ್ಯಂರವರು ರಾಜ್ಯಗಳಿಗೆ ಓವರ್ ಡ್ರಾಫ್ಟ್ ಕೊಡತಕ್ಕ ಬಗ್ಗೆ ಒಂದು ನೀತಿ ನಿರೂಪಣೆ ಮಾಡಿರುವುದಾಗಿಯೂ ಇನ್ನು ಮುಂದೆ ಓವರ್‌ಡ್ರಾಫ್ಟ್ ಯಾರಿಗೂ ಕೊಡಬಾರದು, ಈ ಸೌಲಭ್ಯ ರಾಜ್ಯಸರ್ಕಾರಗಳಿಗೆ ಸಿಕ್ಕುವುದಿಲ್ಲ ಎಂದು ಹೇಳಿರುವುದನ್ನು ಓದಿದೆ.

ನಾನು ಹೇಳುತ್ತಿರುವುದು ಮೈಸೂರು ರಾಜ್ಯದಲ್ಲಿ ಒಬ್ಬರೇ ಓವರು ಡ್ರಾಫ್ಟ ತೆಗೆದುಕೊಂಡಿಲ್ಲ, ಇತರ ರಾಜ್ಯಗಳವರೂ ಪಡೆದುಕೊಂಡಿದ್ದಾರೆ, ಆದರೆ ಇದರಲ್ಲಿ ನಮ್ಮ ರಾಜ್ಯಕ್ಕೆ ಅನಾನುಕೂಲ ವಾಗುವಂತೆ ಕಡಿಮೆ ಮಾಡಿದ್ದು ಏಕೆ ಎಂದು ನಾನು ಕೇಳುತ್ತಿದ್ದೇನೆ, ಇಲ್ಲಿ ಗವರ್ನರಾಗಿದ್ದ ಶ್ರೀ ಧರ್ಮವೀರರವರು ಇದರ ಬಗ್ಗೆ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟು ಕೇಂದ್ರ ಸರಕಾರದವರು ಓವರು ಡ್ರಾಫ್ಟ ವಿಚಾರದಲ್ಲಿ ಅನ್ಯಾಯ ಮಾಡಿದ್ದಾರೆ ಎಂದು ಹೇಳಿದರು. ಎಲ್ಲ ರಾಜ್ಯ ಸರಕಾರಗಳವರಿಗೂ ಓವರು ಡ್ರಾಫ್ಟ ಕೊಡುತ್ತಿದ್ದಾರೆ, ಅವರಿಗೆ ಹೆಚ್ಚಾಗಿ ಕೊಟ್ಟು ನಮ್ಮ ರಾಜ್ಯಕ್ಕೆ ಕೇಂದ್ರ ಸರಕಾರ ಕಡಿಮೆ ಮಾಡಿದ್ದೇಕೆ ಎಂದು ನಾನು ಇಲ್ಲಿ ಕೇಳಬೇಕಾಗಿದೆ, ಮತ್ತು ಇದೇ ತಾನೆ ಬಂದಿರುವ ಮಂತ್ರಿಮಂಡಲದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಇಲ್ಲಿ ತಿಳಿಸಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಐದನೇ ಫೈನಾನ್ಸ್ ಕಮಿಷನ್‌ನವರು ನಮ್ಮ ರಾಜ್ಯಕ್ಕೆ ಏನು ನಿಗದಿ ಮಾಡಿದ್ದರು ಅದು ಸಂಪೂರ್ಣವಾಗಿ ಬಂದಿದೆ, ಆದರೆ ಅದು ಸಾಲದೆ ಬಂತು ಸಾಕಷ್ಟು ಕೊಡಲಿಲ್ಲ ಅದರ ಬಗ್ಗೆ ಕೇಂದ್ರದವರೊಡನೆ ವ್ಯವಹಾರ ಮಾಡುತ್ತಿದ್ದೇವೆ ಮತ್ತು ಇದರ ಬಗ್ಗೆ ಯಾವ ರೀತಿ ಮಾಡಬೇಕೆಂದು ಇದೆ ಎನ್ನುವುದನ್ನು ನನ್ನ ಬಜೆಟ್ಟು ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ, ಮೈಸೂರು ರಾಜ್ಯದ ಪತಿಯಿಂದ ನಾವು ಮಾಡಬೇಕಾದುದು ಕೇಂದ್ರದವರು ಸ್ಪೆಷಲ್ ಅಸಿಸ್ಟೆನ್ಸ್ ಎಷ್ಟರಮಟ್ಟಿಗೆ ಕೊಡಲಿಕ್ಕೆ ಸಾಧ್ಯ ಅದನ್ನು ತಿಳಿದುಕೊಂಡು ನಮ್ಮ ಸರಕಾರಕ್ಕೆ ಎಷ್ಟು ಶಕ್ತಿ ಇದೆಯೋ ಅಷ್ಟನ್ನೂ ಉಪಯೋಗ ಮಾಡಲಿಕ್ಕೆ ಸಿದ್ಧರಿದ್ದೇವೆ, ಈಗ ಓವರು ಡ್ರಾಫ್ಟ ವಿಚಾರವಾಗಿ ಮಾನ್ಯ ಸದಸ್ಯರು ಏನು ಹೇಳಿದರೋ ಅದರ ಬಗ್ಗೆ ಹೆಚ್ಚು ಕಾತರ ಪಡಬೇಕಾದ ರೀತಿ ಏನೂ ಇಲ್ಲ, ಇವೊತ್ತು ಓವರ್ ಡ್ರಾಫ್ಟ್‌ಗಳನ್ನು ಕೇಂದ್ರ ಸರಕಾರ ನಿಲ್ಲಿಸುತ್ತೇವೆಂದು ಹೇಳಿಲ್ಲ, ಇದನ್ನು ಫ್ರೀಸ್ ಮಾಡಬೇಕು ಹೆಚ್ಚು ಮಾಡಬಾರದು ಎಂದು ನಮ್ಮ ಮುಂದೆ ಇಟ್ಟಿದ್ದಾರೆ, ನಾವೂ ಕೂಡ ಕೋಟಿಗಟ್ಟಲೆ ಓವರು ಡ್ರಾಫ್ಟ್ ಕೊಡಿ ಎಂದೂ ಹೇಳಿಲ್ಲ. ಬಜೆಟ್ಟಿನಲ್ಲಿ ಇರುವ ಯೋಜನೆಗಳನ್ನೆಲ್ಲಾ ಮಾಡಲು ಸಾಕಷ್ಟು ಹಣವನ್ನು ಸಂಪಾದನೆ ಮಾಡಲು ಓವರು ಡ್ರಾಫ್ಟ್‌ಗಳನ್ನು ಅವಲಂಬನೆ ಮಾಡಬೇಕಾಗಿದೆ, ಹೆಚ್ಚು ಓವರು ಡ್ರಾಫ್ಟ್‌ಗಳನ್ನು ಪಡೆಯಕೂಡದು ಎಂದು ನಮ್ಮ ಅಭಿಪ್ರಾಯ ಇವೆ, ಅದೇ ರೀತಿ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಅವಶ್ಯಕವಾದ ಕೆಲಸಗಳನ್ನು ಮಾಡಲು ಅದಕ್ಕಾಗಿ ಹಣ ತೆಗೆದುಕೊಂಡು ಏನೇನು ಕೆಲಸಗಳನ್ನು ಮಾಡಬೇಕೋ ಅವನ್ನೆಲ್ಲಾ ಮಾಡಲು ಸಿದ್ಧರಿದ್ದೇವೆ. ಇದನ್ನು ನಾನು ನನ್ನ ಬಜೆಟ್ಟು ಭಾಷಣದಲ್ಲಿ ಕೂಡ ಹೇಳಿದ್ದೇನೆ. ಇದಕ್ಕಾಗಿ ಕೇಂದ್ರ ಸರಕಾರಕ್ಕೆ ಹೋಗಿ ಅಲ್ಲಿರುವ ಪ್ಲಾನಿಂಗ್ ಕಮಿಷನ್ ಜೊತೆ ಚರ್ಚೆ ಮಾಡಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಅವರಿಗೆ ವಿವರಿಸಿ ಸ್ವಲ್ಪ ಹೆಚ್ಚು ಹಣ ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ ಮತ್ತು ಅವಶ್ಯಕವಾದ ಕೆಲಸಗಳನ್ನು ಏನೇನು ಮಾಡಬೇಕೋ ಅವನ್ನೆಲ್ಲಾ ಮಾಡಲಿಕ್ಕೆ ತಯಾರಿದ್ದೇವೆ, ಇದರ ಬಗೆ ಎಷ್ಟೆಷ್ಟು ಮಾಡುತ್ತೇವೆ ಎನ್ನುವ ವಿವರಗಳನ್ನೆಲ್ಲಾ ಮುಂದೆ ನಾನು ಪೂರ್ಣವಾದ ಬಜೆಟ್ಟನ್ನು ಮಂಡನೆ ಮಾಡುವಾಗ ಮಾನ್ಯ ಸದಸ್ಯರಿಗೆ ತಿಳಿಸಲು ಇಚ್ಛೆಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲಿ ಹೇಳಿರುವುದು ಬಹಳ ಸಂತೋಷದ ಸಂಗತಿ ಇದರ ಬಗ್ಗೆ ನಾನು ಇಲ್ಲಿ ಇನ್ನೂ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಅದರಲ್ಲೂ ನಮ್ಮ ಅರ್ಥ ಸಚಿವರಿಗೆ ಸಾಕಷ್ಟು ಕಾಲಾವಕಾಶ ಕೊಡಬೇಕು, ಅವರಿಗೆ ಆದಕ್ಕಾಗಿ ಹೆಚ್ಚು ಕಾಲ ಕೊಡೋಣ, ಆದರೆ ನಾನು ಇಲ್ಲಿ ಹೇಳುವುದು ಐದನೇ ಹಣಕಾಸಿನ ಆಯೋಗದವರು ಸಾಕಷ್ಟು ಹಣ ಕೊಡಲಿಲ್ಲ ಎಂದು ಹೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಕೊಟ್ಟರು ಎಂದು ಹೇಳಿದರು, ಆದರೆ ನಮ್ಮ ರಾಜ್ಯಕ್ಕೆ ಎಷ್ಟು ಕೊಡಬೇಕಾಗಿತ್ತೋ ಅಷ್ಟನ್ನು ನಮಗೆ ಕೊಡಲಿಲ್ಲ ಎನ್ನುವ ಒಂದು ವಾದ ನಮ್ಮದು ಇದೆ. ಅವರು ಕೊಡಲಿಲ್ಲ ಎಂದು ನಾನು ಹೇಳಲಿಲ್ಲ. ಕೊಟ್ಟಿದ್ದಾರೆ ಅದನ್ನೂ ನಾನು ಒಪ್ಪುತ್ತೇನೆ. ಆದರೆ ಬೇರೆ ರಾಜ್ಯಗಳಿಗೆ ಐದನೇ ವಿತ್ತೀಯ ಆಯೋಗವು ಹೆಚ್ಚು ಹಣ ಕೊಟ್ಟು ನಮ್ಮ ರಾಜ್ಯಕ್ಕೆ ಕಡಿಮೆ ಮಾಡಿ ಕೊಡಲು ಕಾರಣವೇನು ? ಇದಕ್ಕೆ ಮಂತ್ರಿಗಳು ಸುಮಾರು ನೂರು ಕೋಟಿ ರೂಪಾಯಿಗಳೋ ಏನೋ ಸ್ವಲ್ಪಮಟ್ಟಿನ ಸ್ಪೆಷಲ್ ಅಸಿಸ್ಟೆನ್ಸ್ ಕೊಟ್ಟರು ಎಂದು ಹೇಳಿದರು.

ಶ್ರೀ ಎಂ. ವೈ. ಘೋರ್ಪಡೆ.—105 ಕೋಟಿ ರೂಪಾಯಿಗಳವರೆಗೆ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅದು ಸಾಲದು ಇನ್ನೂ ಹೆಚ್ಚು ಕೊಡಬೇಕಾಗಿತ್ತು ಎನ್ನುವುದು ನಮ್ಮ ವಾದ.

ಶ್ರೀ ಎಂ. ವೈ. ಘೋರ್ಪಡೆ.—ರಾಜ್ಯ ಸರಕಾರದ ಒತ್ತಾಯದ ಪರಿಣಾಮವಾಗಿ 105 ಕೋಟಿ ರೂಪಾಯಿ ಸ್ಪೆಷಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ. ಇದರಲ್ಲಿ 42.55 ಕೋಟಿ ರೂಪಾಯಿಗಳಷ್ಟು ಬಂದಿದೆ ಇನ್ನೂ ಹೆಚ್ಚು ಬರಬೇಕಾಗಿತ್ತು ಎಂದೂ ಹೇಳಿದ್ದೇವೆ. ನಮ್ಮ ರಾಜ್ಯವನ್ನು ಇತರ ರಾಜ್ಯಗಳಿಗೆ ಹೋಲಿಸಲಿಕ್ಕೆ ಇದರಲ್ಲಿ ಬರುವುದಿಲ್ಲ, ಆದರೆ ನಮ್ಮ ಅವಶ್ಯಕತೆಗಳಿನುಗುಣವಾಗಿ ನಮಗೆ ಕಡಿಮೆ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಬೇರೆ ರಾಜ್ಯಗಳಿಗೆ ಹೋಲಿಸುವುದಕ್ಕೆ ಬರುವುದಿಲ್ಲ ಎನ್ನುವುದನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ, ಬೇರೆ ರಾಜ್ಯಗಳಲ್ಲಿ ಇರತಕ್ಕ ಸರ್‌ಪ್ಲಸ್ ಯಾವ ರೀತಿ ಇದೆ. ರಿಸೋರ್ಸಸ್ ಯಾವ ರೀತಿ ಇದೆ. ಆ ದೇಶವಲ್ಲಿ ಇರತಕ್ಕ ಪ್ರಾಬ್ಲಂಸ್‌ಗಳೇನು ಇವುಗಳನ್ನೆಲ್ಲಾ ಐದನೇ ಫೈನಾನ್ಸ್ ಕಮಿಷನ್‌ನವರು ಸರಿಯಾಗಿ ಪರಿಗಣನೆಗೆ ತೆಗೆದುಕೊಂಡಿಲ್ಲ, ಈ ಫೈನಾನ್ಸ್ ಕಮಿಷನ್‌ನವರು ಬೇರೆ ರಾಜ್ಯಗಳಿಗೆ ಹೆಚ್ಚು ಮೊತ್ತ ಕೊಟ್ಟು ನಮ್ಮ ರಾಜ್ಯಕ್ಕೆ ಕಡಿಮೆ ಮಾಡಲು ಕಾರಣವೇನಿತ್ತು ? ಇದನ್ನು ಹೇಳುತ್ತಾ ನಮ್ಮ ಸರಕಾರದವರು ಇನ್ನೂ ಹೆಚ್ಚು ಹಣ ಪಡೆಯಲು ಪ್ರಯತ್ನ ಮಾಡಿ ಎಂದು ಇಲ್ಲಿ ಹೇಳುತ್ತಿದ್ದೇನೆ, ಇನ್ನೂ 143 ಕೋಟಿಯವರೆಗೆ ಜಾಸ್ತಿ ಪಡೆಯಲು ಪ್ರಯತ್ನ ಮಾಡಿ ಎಂದು ಹೇಳುತ್ತಿದ್ದೇನೆ.

ಇನ್ನು ಮಂತ್ರಿಮಂಡಲದ ವಿಷಯವಾಗಿ ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ, ಮಂತ್ರಿಮಂಡಲದವರಿಗೆ ಹಣ ಬೇಕು ಎಂದು ಇಲ್ಲಿ ಸಪ್ಲಿಮೆಂಟರಿ ಗ್ರಾಂಟುಗಳನ್ನು ತಂದಿದ್ದಾರೆ, ಅದನ್ನು ಕೊಡೋಣ, ಹಣ ನಿಮಗೆ ಎಷ್ಟು ಬೇಕೋ ಅಷ್ಟನ್ನೂ ಕೊಡೋಣ, ಅದರೆ ಈ ಸಂದರ್ಭದಲ್ಲಿ ನಿಮ್ಮ ಜವಾಬುದಾರಿ ಏನಿದೆ ಎನ್ನುವುದರ ಬಗ್ಗೆ ಕೆಲವು ಎಚ್ಚರಿಕೆಯ ಮಾತುಗಳನ್ನು ಹೇಳಬೇಕಾಗಿದೆ, ಮಂತ್ರಿಮಂಡಲದ ರಚನೆ ಈಗತಾನೇ ಆಗಿದೆ, ಇದರ ಬಗ್ಗೆ ಮೊಟ್ಟಮೊದಲನೆಯದಾಗಿ ವಿರೋಧ ಪಕ್ಷದಲ್ಲಿದ್ದ ಅನೇಕ ಸದಸ್ಯರು ಇಂದು ಆಡಳಿತದ ಪಕ್ಷದಲ್ಲಿ ಕುಳಿತಿದ್ದಾರೆ ಇದರಲ್ಲಿ ನಮ್ಮ ಹಿರಿಯರಾದ ಶ್ರೀಮಾನ್ ಹೆಚ್. ಸಿದ್ದವೀರಪ್ಪನವರೂ ಇಂದು ಅಲ್ಲಿ ಕುಳಿತಿದ್ದಾರೆ, ಇದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ ಅವರು ಅಂತಹ ಪೊಸಿಷನ್‌ಗೆ ಬರಲಿ ಎಂದು ನನ್ನ ಆಸೆ, ಅದರೆ ಇದರಲ್ಲಿ ಅವರ ಜವಾಬುದಾರಿ ಏನಿದೆ ಎಂದರೆ ಅವರು ಈ ಕಡೆ ಕುಳಿತಿದ್ದಾಗ ಏನೇನು ಹೇಳಿದ್ದಾರೋ ಈಗ ಅವೆಲ್ಲಾ ಅವರಿಗೂ ಅನ್ವಯವಾಗುತ್ತದೆ ಅವರು ನಮಗೆ ಹೆಚ್ಚು ಹೆಚ್ಚಾದ ಒಳ್ಳೆಯ ದಾರಿ ಹಾಕಿಕೊಟ್ಟಿದ್ದಾರೆ ಅದೇ ದಾರಿಯಲ್ಲಿ ಮುಂದುವರಿಯುತ್ತಾರೋ ಇಲ್ಲವೋ ಕಾದು ನೋಡಬೇಕಾಗಿದೆ. ಮಾನ್ಯ ಮಂತ್ರಿಗಳು ಯಾವ ರೀತಿ ಮಾಡುತ್ತಾರೆ ಎನ್ನುವುದನ್ನು ನಾವು ಕಣ್ಣಿಗೆ ಎಣ್ಣೆ ಹಚ್ಚಿಕೊಂಡು ದುರ್ಬೀನು ಹಿಡಿದು ನೋಡುತ್ತೇವೆ. ಜನ ಜೀವನದ ಹಿತದೃಷ್ಟಿಯಿಂದ ವಿರೋಧ ಪಕ್ಷದವರು ಇಂದು ನಾಯಕರೇ ಆಗಿರುವಾಗ ಯಾವ ರೀತಿ ಅವರು ಮಾಡುತ್ತಾರೋ ನೋಡಬೇಕಾಗಿದೆ. ಶ್ರೀಮಾನ್ ಸಿದ್ದವೀರಪ್ಪನವರ ಬಗ್ಗೆ ನನಗೆ ಅಭಿಮಾನ ಇದೆ, ಆದರೆ ಅವರು ಜನತೆಗೆ ಸರಿಯಾದ ಕೆಲಸಗಳನ್ನು ಮಾಡದೇ ಹೋದಾಗ ಅವರನ್ನು ನಾವು ತರಾಟೆಗೆ ತೆಗೆದುಕೊಳ್ಳಲೇ ಬೇಕಾಗುತ್ತದೆ. ಅಭಿಮಾನದಿಂದ ನಾವು ಹೇಳುವ ಮಾತುಗಳು ಅವರಿಗೆ ಒಂದೊಂದು ಸಾರಿ ಚುಚ್ಚಿ ಹೇಳಬೇಕಾಗಿ ಬರುತ್ತದೆ. ಇದನ್ನು ಅವರೂ ಒಪ್ಪುತ್ತಾರೆ ಎಂದು ನನಗೆ ನಂಬಿಕೆ ಇದೆ. ಅದೇ ರೀತಿ ವಿರೋಧ ಪಕ್ಷದಲ್ಲಿದ್ದ ಶ್ರೀಮಾನ್ ಕೆ. ಹೆಚ್. ಪಾಟೀಲರವರು ಇಂದು ತಿರುಗ ಮುರುಗು ಆಗಿ ಮಂತ್ರಿಗಳಾಗಿ ಬಂದಿದ್ದಾರೆ ಅವರು ಬಹಳ ಸೀನ್‌ಸಿಯರ್ ಹಾಗೂ

(ಶ್ರೀ ಎಸ್. ಬಂಗಾರಪ್ಪ)

ಅನೆಸ್ಟ್ ಆದ ವ್ಯಕ್ತಿಗಳು. ಅವರು ಯಾವಾಗಲೂ ರೂಲ್ಸುಗಳನ್ನು ಇಲ್ಲ ತಿರುಗು ಮುರುಗು ಮಾಡಿ ಹೇಳುತ್ತಲೇ ಇದ್ದರು. ಇಂದು ಜವಾಬುದಾರಿಯುಳ್ಳ ಒಂದು ಸ್ಥಾನದಲ್ಲಿದ್ದಾರೆ ಮುಂದಕ್ಕೆ ಅವರು ಯಾವ ರೀತಿ ಕೆಲಸ ಮಾಡುತ್ತಾರೋ ನೋಡಬೇಕಾಗಿದೆ, ಅವರ ಬಗ್ಗೆ ನನಗೆ ತುಂಬಾ ಅಭಿಮಾನವಿದೆ, ಹಾಗೇ ನನ್ನ ಗೆಳೆಯರಾದ ಶ್ರೀಮಾನ್ ಅಜೀಜ್ ಸೇಟರ ಬಗ್ಗೆ ಹೇಳಬೇಕಾಗಿದೆ.

ಅಧ್ಯಕ್ಷರು.—ಇಲ್ಲಿ ಎಷ್ಟು ವಿಚಾರಗಳಿವೆಯೋ ಅದರ ಬಗ್ಗೆ ಮಾತ್ರ ತಾವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಸರಿಯಾಗಿಯೇ ಮಾತಾಡುತ್ತಿದ್ದೇನೆ.

ಅಧ್ಯಕ್ಷರು.—ನಮಗೆ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ಕೇವಲ ಒಂದೂವರೆ ಗಂಟೆ ಕಾಲ ಮಾತ್ರ ಅವಕಾಶ ಇದೆ, ದಯವಿಟ್ಟು ಬೇಗ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಮಂತ್ರಿಮಂಡಲ ಮತ್ತು ಅದಕ್ಕೆ ಇರತಕ್ಕ ಜವಾಬುದಾರಿ ಬಗ್ಗೆ ಮಾತ್ರ ಹೇಳುವುದು ಹಿಂದಿನಿಂದಲೂ ಬಂದಿರುವ ಪದ್ಧತಿ. ಇದನ್ನು ಹೇಳುವಂತಿಲ್ಲ ಎಂದರೆ ಹೇಗೆ? ಇನ್ನೂ ಕೆಲವರು ಹೊಸಬರು ಮಂತ್ರಿಗಳಾಗಿ ಬಂದಿದ್ದಾರೆ ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಅದನ್ನು ಕಾದು ನೋಡಬೇಕು, ಶ್ರೀ ಅಜೀಜ್ ಸೇಟರವರು ನಮ್ಮ ಗೆಳೆಯರಾಗಿದ್ದಂತಹವರು.

ಒಬ್ಬರು ಸದಸ್ಯರು.—ಸ್ವಾಮಿ, ನನ್ನ ಒಂದು ಕ್ರಿಯಾಲೋಪವಿದೆ. ಏನೆಂದರೆ ರೂಲ್ 172 ಪ್ರಕಾರ ನೋಡುವುದಾದರೆ, ಅದರಲ್ಲಿ ವಿಷಯದ ಬಗ್ಗೆ ಮಾತ್ರ ಮಾತನಾಡಬೇಕು ಎಂದು ಇದೆ. ಆದರೆ ಈಗ ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಯಾವುದಕ್ಕೆ ಸಂಬಂಧವಿದೆ ಎಂಬುದು ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ರೂಲ್ಸ್ ಪ್ರಕಾರವೇ ಮಾತನಾಡುತ್ತಿದ್ದೇನೆ. ಜಿ.ಎ.ಡಿ. ವಿಷಯ ಇದರಲ್ಲಿ ಇರುವುದರಿಂದ ನಾನು ಮಂತ್ರಿಮಂಡಲದ ಬಗ್ಗೆ ಹೇಳುತ್ತಿದ್ದೇನೆ.

ಒಬ್ಬರು ಸದಸ್ಯರು.—ಮಾನ್ಯ ಸದಸ್ಯರು ಬಡ್ಜೆಟ್ ಬಗ್ಗೆ ಮಾತನಾಡಬಹುದೇ ಹೊರತು, ಮಂತ್ರಿಮಂಡಲದ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿಲ್ಲ?

ಅಧ್ಯಕ್ಷರು.—ಆ ರೀತಿಯ ಟೀಕೆಯನ್ನು ಮಾಡುವುದು ಸರಿಯಲ್ಲ. ತಮ್ಮ ವೇಳೆ ಸಹ ಮುಗಿಯಿತು. ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.—5 ನಿಮಿಷದಲ್ಲಿ ಮುಗಿಸುತ್ತೇನೆ. ಮಂತ್ರಿಮಂಡಲದ ರಚನೆಯ ಬಗ್ಗೆ ಏತಕ್ಕೆ ನಾನು ಹೇಳುತ್ತಿದ್ದೇನೆ ಎಂದರೆ, ಪ್ರಜಾಪ್ರಭುತ್ವದಲ್ಲಿ ಯಾವಾಗಲೂ ಮಂತ್ರಿ ಮಂಡಲ.............................

Sri H. S. SIDDAPPA.—I rise to a point of order, Sir, It is now 3 O'Clock and it is time for recess. There is neither tiffin nor coffee in the canteen. So, the Chair may allow the hon. Member to go on with his speech rather than Cutting him short.

MADAM SPEAKER.—The House does not rise for recess.

Sri C. M. ARUMUGHAM.—May I request the Chair to give the ruling on the point of order raised by my hon. Friend?

MADAM SPEAKER.—There is no point of order.

ಶ್ರೀ ಎಸ್. ಬಂಗಾರಪ್ಪ.—ಮಂತ್ರಿಮಂಡಲದ ರಚನೆ ಬಗ್ಗೆ ನಾನು ಹೇಳುತ್ತಿದ್ದೆ. ಯಾವಾಗಲೂ ಮಂತ್ರಿಮಂಡಲ ಜಾತಿಗಳ ಆಧಾರದ ಮೇಲೆ ರಚನೆಯಾಗಬಾರದು. ಇದುವರೆಗೆ ಆ ರೀತಿಯಾಗುತ್ತಿತ್ತು. ಈ ಸಲ ಅಲ್ಪಸಂಖ್ಯಾತ ಕೋಮಿನವರಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಹಳೆಯ ಮೈಸೂರು ಇದ್ದಾಗ ಒಕ್ಕಲಿಗರು ಜಾಸ್ತಿ ಇದ್ದಾರೆಂಬ ಕಾರಣದಿಂದ ಒಕ್ಕಲಿಗರ ರಾಜ್ಯವಾಗಿತ್ತು. ಇಂಟಿಗ್ರೇಷನ್ ಆದಮೇಲೆ ಅಂದರೆ ಕರ್ನಾಟಕ ರಾಜ್ಯವಾದ ಮೇಲೆ ಕರ್ನಾಟಕ ಎಂಬ ಹೆಸರನ್ನು ಈ ರಾಜ್ಯಕ್ಕೆ ಇಡುವುದಕ್ಕೆ ನಿಮ್ಮ ಕೈಯಲ್ಲಿ ಇನ್ನೂ ಆಗಿಲ್ಲ. ಲಿಂಗಾಯಿತರು ಜಾಸ್ತಿ ಇದ್ದಾರೆಂಬ ಕಾರಣದಿಂದ ಲಿಂಗಾಯಿತರ ರಾಜ್ಯವಾಯಿತು. ಅಂದಿನಿಂದ ಶ್ರೀ

ನಿಜಲಿಂಗಪ್ಪನವರು, ಶ್ರೀ ಜತ್ತಿಯವರು ಮತ್ತು ಶ್ರೀ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿ ಸರ್ಕಾರ ನಡೆಸಿಕೊಂಡು ಬಂದರು. ಈ ಮಧ್ಯೆ ಶ್ರೀ ಕಂಠಿಯವರು ಭರತನ ಹಾಗೆ ಕೆಲವು ದಿನಗಳವರೆಗೆ ಮುಖ್ಯ ಮಂತ್ರಿಯಾಗಿದ್ದರು.

ಅಧ್ಯಕ್ಷರು.—ಈ ವಿಷಯವನ್ನೆಲ್ಲಾ ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬಹುದು. ತಾವು ತಮ್ಮ ಭಾಷಣವನ್ನು ಇನ್ನು ಒಂದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ನಾನು ಮಂತ್ರಿಮಂಡಲದ ಬಗ್ಗೆ ಹೇಳಬೇಕಾಗಿವೆ, ಆದ್ದರಿಂದ ಇನ್ನು ಐದು ನಿಮಿಷಗಳ ಕಾಲ ಬೇಕು.

ಅಧ್ಯಕ್ಷರು.—ಆ ರೀತಿ ಕಾಲಾವಕಾಶ ಕೊಡುವುದಕ್ಕಾಗುವುದಿಲ್ಲ. ಈಗ ಶ್ರೀ ಗುಂಡೂರಾವ್ ಅವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ತಾವು ಆ ರೀತಿ ನಡೆದುಕೊಳ್ಳಬಾರದು. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲೇ ಬೇಕು. ತಾವು ಅಧ್ಯಕ್ಷರಾಗಿ ಇನ್ನೂ ಎರಡೂ ಕಾಲು ದಿವಸವಾಗಿದೆ ಇಷ್ಟು ಜಾಗ್ರತೆ ....**

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ರೀತಿಯ ನಡವಳಿಕೆಯನ್ನು ನಾನು ಒಪ್ಪುವುದಿಲ್ಲ.

ಅಧ್ಯಕ್ಷರು.—ಶ್ರೀ ಗುಂಡೂರಾವ್ ಅವರು ಮಾತನಾಡಬಹುದು.

† ಶ್ರೀ ಆರ್. ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಅರ್ಥಮಂತ್ರಿಯವರು ಹೆಚ್ಚುವರಿ ಬೇಡಿಕೆಯನ್ನು ಏನು ತಂದಿದ್ದಾರೆ ಅದು ಬಹಳ ಸ್ವಾಗತಾರ್ಹವಾದುದು. ಇಷ್ಟು ಒಂದು ಅಲ್ಪಕಾಲದಲ್ಲಿ ಅವರು ಒಂದು ವಿಶೇಷವಾದಂಥ ರೀತಿಯಲ್ಲಿ ಇದನ್ನು ತಂದಿದ್ದಾರೆ. ಇನ್ನೂ ಸರ್ಕಾರ ರಚನೆಯಾಗಿ ಒಂದೇ ವಾರವಾಗಿದ್ದರೂ ಕೂಡ ಅವರು ಹೆಚ್ಚಿನ ಶ್ರಮವಹಿಸಿ ಅನೇಕ ರೀತಿಯ ಖರ್ಚುಗಳಿಗೆ ಅವಕಾಶವನ್ನು ನೀಡಿದ್ದಾರೆ ಮತ್ತು ಕೆಲವು ಯೋಜನೆಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಟ್ಟಿದ್ದಾರೆ. ಮುಖ್ಯವಾಗಿ ನಾನು ಅರ್ಥ ಸಚಿವರ ಗಮನಕ್ಕೆ ತರುವುದೇನೆಂದರೆ, ಚುನಾವಣೆ ಕಾಲದಲ್ಲಿ ಮತದಾರರ ಪಟ್ಟಿಯನ್ನು ಏನು ತಯಾರು ಮಾಡಿದ್ದರು, ಅದರಲ್ಲಿ ಬಹಳ ಹೆಚ್ಚುಕಡಿಮೆಯಾಗಿತ್ತು. ಸಾವಿರಾರು ಜನರಿಗೆ ಅವರ ಹೆಸರು ಪಟ್ಟಿಯಲ್ಲಿ ಇಲ್ಲದೆ ಓಟಿನ ಅವಕಾಶ ಸಿಗದೆ ಓಟುಮಾಡಲು ಸಾಧ್ಯವಾಗದೇ ವಾಪಸ್ ಹೋದರು. ಏತಕ್ಕೆ ಈ ರೀತಿಯಾಯಿತು ಎಂಬ ಬಗ್ಗೆ ಸಾಕಷ್ಟು ರೀತಿಯಲ್ಲಿ ವಿಚಾರಣೆ ನಡೆಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ, ಹಾರಂಗಿ ಯೋಜನೆ ತ್ವರಿತವಾಗಿ ಆಗಬೇಕಾಗಿದೆ. ಆ ಯೋಜನೆಗೆ ತಾವು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕು. ಮತ್ತು ಇದರ ಬಗ್ಗೆ ತಮ್ಮ ಹೆಚ್ಚಿನ ಲಕ್ಷ ಇರಬೇಕೆಂದು ಕೇಳಿಕೊಳ್ಳುತ್ತೇನೆ.

ಹಾಗೆಯೇ ಕಾರ್ಮಿಕ ವರ್ಗ ಮತ್ತು ಹರಿಜನ ಗಿರಿಜನರಿಗೆ ಸರ್ಕಾರಿ ಜಾಗವನ್ನು ಕೊಡುವ ವಿಷಯದಲ್ಲಿ ಅನ್ಯಾಯವಾಗಿದೆ. ಈಗ ಜಮೀನು ಇರುವವರೇ ಸರ್ಕಾರಿ ಜಮೀನನ್ನು ಮತ್ತೆ ಆಕ್ರಮಣ ಮಾಡಿದ್ದಾರೆ. ಇದರಿಂದ ಜಾಗ ಇಲ್ಲದಿರುವವರಿಗೆ ಜಾಗ ಇಲ್ಲದಂತಾಗಿದೆ. ಇದನ್ನು ಸಹ ತಾವು ತಮ್ಮ ಒಂದು ಬಡ್ಜೆಟ್‌ನಲ್ಲಿ ತನಿಖೆ ಮಾಡುವುದಕ್ಕೆ ಹೆಚ್ಚಿನ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3-00 P.M.

ಈಗಾಗಲೇ ಇದುವರೆಗೂ ಅನೇಕ ಸ್ನೇಹಿತರು ಸರ್ಕಾರವನ್ನು ಟೀಕೆ ಮಾಡಿದ್ದಾರೆ. ಈ ಸರ್ಕಾರ ಕೇವಲ ಒಂದು ವಾರದ ಹಿಂದೆ ಅಸ್ತಿತ್ವಕ್ಕೆ ಬಂದಿದೆ. ಆದ್ದರಿಂದ ಈಗ ನಮ್ಮ ಸರ್ಕಾರ ಯಾವುದೇ ತರಹದ ಟೀಕೆಗೂ ಹೊಣೆಯಾಗುವುದಿಲ್ಲ. ಇಲ್ಲಿಯವರೆಗೂ ಹಣಕಾಸಿನ ವ್ಯವಹಾರವಲ್ಲಿ ಏನು ಹೆಚ್ಚು ಕಡಿಮೆ ಬಂದಿದೆ ಅದೆಲ್ಲವೂ ಹಿಂದೆ ಇದ್ದ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಅದಕ್ಕೆ ಹಿಂದಿನ ಸರ್ಕಾರವೇ ಜವಾಬ್ದಾರರು, ನಮ್ಮ ಸರ್ಕಾರ ಅದಕ್ಕೆ ಜವಾಬ್ದಾರರಲ್ಲ. ಇದನ್ನು ನಾನು

** Matter expunged as ordered by the Speaker.

(ಶ್ರೀ ಆರ್. ಗುಂಡೂರಾವ್)

ಮಾನ್ಯ ವಿರೋಧಪಕ್ಷದ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ ವಿರೋಧಪಕ್ಷದಲ್ಲಿದ್ದವರು ಕೆಲವರು ಈಗ ನಮ್ಮ ಕಡೆ ಬಂದು ಮಂತ್ರಿಗಳಾಗಿದ್ದಾರೆ ಅವರಿಗೆ ತೊಂದರೆ ಕೊಡಬೇಕು ಎಂದು ಕೆಲವು ವಿರೋಧ ಪಕ್ಷದ ಸದಸ್ಯರು ಹೇಳಬಹುದು. ನಮ್ಮ ಸರ್ಕಾರ ಆಡಳಿತವನ್ನು ವಹಿಸಿಕೊಂಡು ಇನ್ನೂ ಒಂದು ವಾರ ಕೂಡ ಆಗಿಲ್ಲ. ಯಾವ ರೀತಿ ಸರ್ಕಾರ ರಚನೆಯಾಗುತ್ತದೆ, ಯಾವರೀತಿ ಆಡಳಿತ ನಡೆಯುತ್ತದೆ ಎಂಬುದನ್ನು ನಮ್ಮ ಮಾನ್ಯ ವಿರೋಧಪಕ್ಷದ ಸದಸ್ಯರು ತಾಳ್ಮೆಯಿಂದ ಕುಳಿತುಕೊಂಡು ನೋಡಿ ನಂತರ ಟೀಕೆ ಟಿಪ್ಪಣಿಗಳನ್ನು ಮಾಡಬೇಕು. ಈಗ ದಕ್ಷರಾದ ಅರ್ಥಮಂತ್ರಿಗಳು ಬಂದಿದ್ದಾರೆ, ಮುಂದಿನ ಬಡ್ಜೆಟ್ಟಿನಲ್ಲಿ ಹೆಚ್ಚಿನ ತೆರಿಗೆಯನ್ನು ಹಾಕದೆ ಜನತೆಗೆ ಹೆಚ್ಚು ಹೊರೆಯಾಗದ ರೀತಿಯಲ್ಲಿ ಬಡ್ಜೆಟ್ಟನ್ನು ತಯಾರು ಮಾಡಬೇಕೆಂದು ಹೇಳಿ ಈಗ ಈ ಸಭೆಯ ಮುಂದೆ ತಂದಿರತಕ್ಕ ತಾತ್ಕಾಲಿಕ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತೇನೆ. ಈಗ ಈ ಬಡ್ಜೆಟ್ಟಿನಲ್ಲಿ ಸಮಾಜವಾದಕ್ಕೆ ನಿಜವಾಗಿಯೂ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಚುನಾವಣೆ ಕಾಲದಲ್ಲಿ ಏನೊಂದು ಘೋಷಣೆಯನ್ನು ಮಾಡಿದ್ದರು ಆ ಘೋಷಣೆಯನ್ನು ಜಾರಿಗೆ ತರುವುದಕ್ಕೆ ಬಡವರ ಮತ್ತು ಕಾರ್ಮಿಕರ ಹಾಗೂ ಹರಿಜನರ ಉದ್ಧಾರಕ್ಕಾಗಿ ಇದು ಸಹಕಾರಿಯಾದಂತಹ ಬಡ್ಜೆಟ್ ಆಗಿದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಅರ್ಥ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ನೋಡಿದ ಮೇಲೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಅಷ್ಟು ಆರೋಗ್ಯಕರವಾಗಿಲ್ಲ, ಬಹಳ ಕಷ್ಟಕರವಾಗಿದೆ ಎಂಬುದು ಎದ್ದು ಕಾಣುತ್ತದೆ. ಇದಕ್ಕೆಲ್ಲಾ ಕಾರಣರು ಯಾರು ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆ ಕಾರಣವನ್ನು ತಿಳಿದುಕೊಳ್ಳಬೇಕಾದರೆ ಈ ಬಗ್ಗೆ ಸ್ವಲ್ಪ ಟೀಕೆಗಳನ್ನು ಮಾಡಬೇಕಾಗುತ್ತದೆ. ಆದಾದನಂತರ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ನಮ್ಮ ರಾಜ್ಯಕ್ಕೆ 105 ಕೋಟಿ ರೂಪಾಯಿಗಳ ಸ್ಪೆಷಲ್ ಅಸಿಸ್ಟೆನ್ಸ್ ಕೊಡುತ್ತೇವೆ ಎಂದು ಹಿಂದೆ ಕೇಂದ್ರ ಸರ್ಕಾರದವರು ವಾಗ್ದಾನ ಮಾಡಿದ್ದರು. ಆದರೆ ಅದನ್ನು ಕೇಂದ್ರ ಸರ್ಕಾರದವರು ಪೂರ್ಣವಾಗಿ ಪೂರೈಕೆ ಮಾಡಲಿಲ್ಲ. ಆ ಬಗ್ಗೆ ಅವರು ಏನನ್ನೂ ಹೇಳುವುದಕ್ಕೆ ತಯಾರು ಇಲ್ಲ. ಆದಾಗ್ಯೂ ನಮ್ಮ ಸರ್ಕಾರದ ಓವರ್ ಡ್ರಾಫ್ಟ್ 76 ಕೋಟಿ ರೂಪಾಯಿಗಳವರೆಗೂ ಬರುತ್ತದೆ, ಇದು ಒಳ್ಳೆಯದಲ್ಲ, ಇದನ್ನು ಸರಿಪಡಿಸಬೇಕು ಎಂದು ಕೇಂದ್ರ ಸರ್ಕಾರದವರು ನಮ್ಮ ರಾಜ್ಯಸರ್ಕಾರಕ್ಕೆ ಬುದ್ಧಿವಾದವನ್ನು ಹೇಳಿದ್ದಾರೆ. ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿ ನಮ್ಮ ಸ್ಟೇಟಿನಲ್ಲಿ ಕಾಂಗ್ರೆಸ್ (ಆರ್) ಸರ್ಕಾರ ಇದೆ, ಕೇಂದ್ರದಲ್ಲಿಯೂ ಕಾಂಗ್ರೆಸ್ (ಆರ್) ಸರ್ಕಾರ ಇದೆ, ಆದ್ದರಿಂದ ನಮ್ಮ ಸ್ಟೇಟಿನಲ್ಲಿ ಹಿಂದಿನ ಹಾಗೆ ಪರಿಸ್ಥಿತಿ ಉದ್ಭವಿಸುವುದಿಲ್ಲ, ನಾವು ಕೇಂದ್ರ ಸರ್ಕಾರದೊಡನೆ ಒಳ್ಳೆಯ ರಿಲೇಷನ್‌ಷಿಪ್ ಇಟ್ಟುಕೊಂಡರೆ ಅವರಿಂದ ನಾವು ಹಣ ಸಹಾಯ ಮತ್ತು ಅವರ ಮೆಚ್ಚಿಗೆಯನ್ನು ಪಡೆಯುವುದರಲ್ಲಿ ಯಾವ ಕಷ್ಟವೂ ಇರುವುದಿಲ್ಲ ಎನ್ನುವ ಧಾಟಿಯಲ್ಲಿ ಮಾತನಾಡಿದರು. ಮಾನ್ಯ ಅರ್ಥ ಮಂತ್ರಿಗಳಾದ ಶ್ರೀಮಾನ್ ಪೋರ್ಪಡೆಯವರಿಗೆ ಸ್ವಲ್ಪ ವೇ ಆಫ್ ಅಂಡರ್‌ಸ್ಟ್ಯಾಂಡಿಂಗ್ ಕೆಪಾಸಿಟಿ ಇದೆ. ಅವರು ಎಸ್ಟಿಮೇಟ್ ಕಮಿಟಿಯ ಚೇರ್ಮನ್ ಆಗಿದ್ದರು. ಅವರಿಗೆ ಸಾಕಷ್ಟು ಅನುಭವವೂ ಇದೆ. ಅವರು ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳಾದ ಶ್ರೀ ಚವಾನ್ ಅವರೊಡನೆ ಚೆನ್ನಾಗಿ ವ್ಯವಹರಿಸುತ್ತಾರೆ, ಕಣ್ಣುಮುಚ್ಚಿಕೊಂಡು ಕೇಂದ್ರ ಸರ್ಕಾರದಿಂದ ಉತ್ತರವನ್ನು ಪಡೆಯುವುದಿಲ್ಲ, ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಏನು ಹಣಸಹಾಯ ಪಡೆಯಬೇಕೋ ಅದನ್ನು ಪಡೆಯುತ್ತಾರೆ ಎನ್ನುವ ನಂಬಿಕೆ ನಮಗೆ ಇದೆ. ಈಗ ಕೇಂದ್ರ ಸರ್ಕಾರದವರು ಪರದೇಶಗಳಿಂದ ಏನು ಸಾಲವನ್ನು ತಂದಿದ್ದಾರೆ ಅದನ್ನು ಇನ್ನು 5 ವರ್ಷಗಳ ಕಾಲ ವಾಪಸು ಕೊಡುವುದಿಲ್ಲ ಎಂದು ಏನೊಂದು ಅವಕಾಶವನ್ನು ಪಡೆದುಕೊಂಡಿದ್ದಾರೆ ಅದೇರೀತಿ ನಮ್ಮ ರಾಜ್ಯ ಸರ್ಕಾರದವರು ಕೇಂದ್ರಸರ್ಕಾರದಿಂದ ಪಡೆದುಕೊಂಡಿರತಕ್ಕ ಓವರ್ ಡ್ರಾಫ್ಟ್ ಸಂಬಂಧದ 76 ಕೋಟಿ ರೂಪಾಯಿಗಳನ್ನು 5 ವರ್ಷಗಳವರೆಗೂ ವಾಪಸ್ಸು ಕೊಡುವುದಕ್ಕಾಗುವುದಿಲ್ಲ ಅದಕ್ಕೆ ಕಾಲಾವಕಾಶ ಕೊಡಬೇಕು ಎಂದು ಧೈರ್ಯವಾಗಿ ಕೇಂದ್ರ ಸರ್ಕಾರದವರನ್ನು ಕೇಳಬೇಕು. ಅದಕ್ಕೆ ಬೆಂಬಲ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಈಗ ರಾಜ್ಯದಲ್ಲಿ ಉಂಟಾಗಿರತಕ್ಕ ಮುಗ್ಗಟ್ಟನ್ನು ಬಗೆಹರಿಸಲು ಎಲ್ಲಾ ಸದಸ್ಯರನ್ನೂ ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಎಲ್ಲಾ ಪಕ್ಷಗಳನ್ನೂ ಒಳಗೊಂಡಂಥಾ ಒಂದು ಸಮಾಲೋಚನಾ ಸಮಿತಿಯನ್ನು ರಚಿಸಬೇಕು. ಸೆಂಟ್ರಲ್ ಗೌರ್ನಮೆಂಟಿನ ಫೈನಾನ್ಸಿಯಲ್ ರಿಲೇಷನ್ ಷಿಪ್ ಬಗ್ಗೆ ರಾಜ್ಯ ಸರ್ಕಾರ ಯಾವರೀತಿ ಇರಬೇಕೆಂದು ರಾಜಮನ್ನಾರ್

ಕಮಿಟಿಯ ವರದಿಯಲ್ಲಿ ಹೇಳಿರುವಂತೆ ಸ್ಟೇಟ್ಸ್ ರೈಟ್ಸ್ ಏನಿವೆ ಅವುಗಳನ್ನು ಕೇಂದ್ರ ಸರ್ಕಾರದಿಂದ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ರಾಜಮನ್ನಾರ ಕಮಿಟಿಯ ವರದಿಯಲ್ಲಿ ಅನೇಕ ಘನವಾದ ವಿಚಾರಗಳನ್ನು ಹೇಳಿದ್ದಾರೆ. ಆದರಿಂದ ಜನಗಳಿಗೆ ಹೆಚ್ಚು ಹೆಚ್ಚು ಉಪಯೋಗ ಇದೆ. ಆದ್ದರಿಂದ ಅದನ್ನು ಹೆಚ್ಚು ಸೀರಿಯಸ್ ಆಗಿ ವಿಚಾರ ಮಾಡಿ ಅದನ್ನು ಎಷ್ಟರಮಟ್ಟಿಗೆ ಕಾರ್ಯ ರೂಪಕ್ಕೆ ತರಬಹುದು ಎಂಬುದನ್ನು ಸಹ ಯೋಚನೆ ಮಾಡಬೇಕು. ಈ ವರ್ಷ ನಮ್ಮ ರಾಜ್ಯದ ಬಡ್ಜೆಟ್ಟಿನಲ್ಲಿ 3‌.52 ಕೋಟಿ ರೂಪಾಯಿ ಡಿಫಿಸಿಟ್. ಇವೆ. ಅದು ವರ್ಷದ ಕೊನೆಯಲ್ಲಿ 76 ಕೋಟಿ ರೂಪಾಯಿಗಳ ಡಿಫಿಜಿಟ್ ಆಗುತ್ತದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ನಮ್ಮ ಸ್ಟೇಟಿಗೆ 105 ಕೋಟಿ ರೂಪಾಯಿಗಳ ಸ್ಪೆಷಲ್ ಅಸಿಸ್ಟೆನ್ಸ್ ಏನು ಕೊಡುತ್ತೇವೆ ಎಂದು ಕೇಂದ್ರ ಸರ್ಕಾರದವರು ಹೇಳಿದ್ದರು ಆದರಲ್ಲಿ 42 ಕೋಟಿ ರೂಪಾಯಿಗಳು ಮಾತ್ರ ನಮ್ಮ ರಾಜ್ಯಕ್ಕೆ ಬಂದಿದೆ. ಅವರಲ್ಲಿ ಉಳಿದಿರತಕ್ಕ ಫೈನಾನ್ಸಿಯಲ್ ಅಸಿಸ್ಟೆನ್ಸ್ ಏನಿದೆ ಅದನ್ನು ಪಡೆಯುವುದುದಕ್ಕೆ ಕೇಂದ್ರ ಸರ್ಕಾರದ ಮೇಲೆ ಹೆಚ್ಚು ಪ್ರೆಶರ್ ಹಾಕಿ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಈ ಮನೆಯಲ್ಲಿ ವಿರೋಧಪಕ್ಷದವರು ಇದ್ದರೂ ಕೂಡ ಸರ್ಕಾರದವರು ದೇಶದ ಅಭಿವೃದ್ಧಿಗಾಗಿ ಯಾವ ಪ್ರೋಗ್ರಾಮ್‌ಗಳನ್ನು ಹಾಕಿಕೊಳ್ಳುತ್ತಾರೆಯೋ ಅದಕ್ಕೆಲ್ಲಾ ಸಾಕಷ್ಟು ಬೆಂಬಲ ಸಿಕ್ಕುತ್ತದೆ ಎಂದು ನಾನು ಹೇಳುತ್ತೇನೆ.

ಇನ್ನು ಸೋಷಿಯಲಿಜಮ್ ಮತ್ತು ಸೆಕ್ಯುಲರಿಜಮ್ ಬಗ್ಗೆ ಮಾನ್ಯ ಅರ್ಥಸಚಿವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗ ನೀವು ಸೋಶಿಯಲಿಸಂ ಕಡೆಗೆ ಹೋಗುತ್ತಿದ್ದೀರೆಂದು ಹೇಳುತ್ತಿದ್ದೀರಿ. ಆದರೆ ಮೈಸೂರಿನ ಜನತೆಯನ್ನು ಯಾವ ದಿಕ್ಕಿಗೆ ತೆಗೆದುಕೊಂಡು ಹೋಗುತ್ತೀರೆಂದು ತಮ್ಮ ಬಾಯಿಂದ ಬರಲಿಲ್ಲ. ತಮ್ಮ ಭಾಷಣದಲ್ಲಿ 1.84. ಕೋಟಿ ರೂಪಾಯಿಯ ತ್ಯಾಗವನ್ನು ಬಂಗ್ಲಾ ನಿರಾಶ್ರಿತರ ಬಗ್ಗೆ ಮೈಸೂರಿನ ಜನತೆ ಮಾಡಿದ್ದಾರೆಂದು ಹೇಳಿದ್ದೀರಿ. ಆದರೆ ನಿರಾಶ್ರಿತರು ಪುನಃ ವಾಪಸ್ಸು ಬಂಗ್ಲಾ ದೇಶಕ್ಕೆ ಹೋದರೂ ಕೂಡ, ಇನ್ನೂ ಆ ಹೊರೆಯನ್ನು ನಮ್ಮ ಜನತೆಯ ಮೇಲೆ ಹಾಕುತ್ತಿರುವುದು ನ್ಯಾಯವೇ ? ಇದರಿಂದ ನಮ್ಮ ವೀಕರ್ ಸೆಕ್ಷನ್ಸ್ ಏನಿವೆ, ಅವರಿಗೆ ಹೊರಲಾರದ ಹೊರೆಯಾಗುವುದರಿಂದ ಅದನ್ನು ಮೈಸೂರಿನ ಜನತೆಯ ಮೇಲೆ ಇನ್ನು ಮುಂದಾದರೂ ಹಾಕಕೂಡದೆಂದು ಸೂಚನೆಯನ್ನು ಕೊಡುತ್ತೇನೆ. ನಮ್ಮ ದೇಶ ಸೆಕ್ಯೂಲರ್ ದೇಶ, ಇತರ ದೇಶಗಳಿಗೂ ಸಹಾಯ ಮಾಡತಕ್ಕದ್ದು ನ್ಯಾಯ. ಆದರೆ ಇನ್ನೂ ಅದನ್ನು ಮುಂದುವರಿಸಿಕೊಂಡು ಹೋಗಬಾರದು.

ಇನ್ನು ಕ್ಷಾಮ ಪರಿಸ್ಥಿತಿಯು ನಮ್ಮ ದೇಶದ ನಾನಾ ಕಡೆಗಳಲ್ಲಿ ತಲೆದೋರಿದೆ. ಕೆಲವು ಪ್ರದೇಶಗಳಲ್ಲಿ ಜನರಿಗೆ ಅನ್ನವಿಲ್ಲದೆ, ಅನ್ನವನ್ನು ಹುಡುಕಿಕೊಂಡು ಹೋಗುವ ಪರಿಸ್ಥಿತಿ ಉಂಟಾಗಿದೆ. ಮತ್ತು ಉತ್ತರ ಕರ್ಣಾಟಕದ ಕೆಲವು ಭಾಗಗಳಲ್ಲಿ ರಾಗಿ, ಜೋಳದ ಬೆಳೆಗಳು ಹೋಗಿ ಜನರು ಬಹಳ ಸಂಕಷ್ಟಕ್ಕೀಡಾಗಿದ್ದಾರೆ. ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರು ಕೂಡ ಇಲ್ಲದೆ ಜನರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅದರ ಬಗ್ಗೆ ಕೂಡ ಸರ್ಕಾರದವರು ತಕ್ಕ ಕ್ರ್ಯಾಶ್ ಪ್ರೋಗ್ರಾಂಗಳನ್ನು ಹಾಕಿಕೊಂಡು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ. ಅದೇ ರೀತಿ ಈ ಮನೆಯ ಒಂದು ಕನ್‌ಸ್ಟೇಟಿವ್ ಕಮಿಟಿಮಾಡಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಆಗಾಗ್ಗೆ ವಿಮರ್ಶೆಮಾಡಿ, ಈ ಮನೆಯ ಸದಸ್ಯರ ಸಲಹೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಎನ್. ಜಿ. ಒ. ಬಗ್ಗೆ ಇಷ್ಟು ಖರ್ಚಾಗುತ್ತದೆಂದು ಹೇಳಿದ್ದಾರೆ. ಆದರೆ ಅವರ ನ್ಯಾಯವಾದ ಬೇಡಿಕೆಗಳು ಏನು ಎಂಬುದರ ಬಗ್ಗೆ ಒಂದು ಶಬ್ದ ಕೂಡ ಮಾನ್ಯ ಸಚಿವರು ಹೇಳಿಲ್ಲ.

ಪ್ಯಾರಿಟಿ ಇನ್ ರಿಗಾರ್ಡ್ ಟು ವೇಜಸ್—ಇದರ ಬಗ್ಗೆ ಇವತ್ತಿನ ವರೆಗೂ ಏನನ್ನೂ ಹೇಳಿಲ್ಲ. ಅವರು ಕೇಳುವಂತಹ ನ್ಯಾಯವಾದ ಡಿಮ್ಯಾಂಡುಗಳ ಸಿದ್ಧಾಂತವನ್ನೇ ಒಪ್ಪದೆ, ನೀವು ಎಷ್ಟು ಬಾಯಿಯಲ್ಲಿ ಹೇಳಿದರೂ ಪ್ರಯೋಜನವಿಲ್ಲ, ಮತ್ತು ಅದು ನಿರಾಶಾದಾಯಕವಾಗಿರುತ್ತದೆ. ಕೊನೆಯದಾಗಿ ನಿಮ್ಮ ಭಾಷಣದಲ್ಲಿರುವ ಕೆಲವು ಅಂಶಗಳನ್ನು ಬಿಟ್ಟು, ಕೆಲವು ಅಂಶಗಳಿಗೆ ಅಪ್ರಿಶಿಯೇಟ್ ಮಾಡಿದರೂ ಕೂಡ, ಇದು ಅಷ್ಟು ಆಶಾದಾಯಕವಾಗಿ ಕಾಣುತ್ತಾ ಇಲ್ಲ.

ಇನ್ನು ಆಡಳಿತವು ದಕ್ಷವಾಗಿಯೂ ಪ್ರಾಮಾಣಿಕವಾಗಿಯೂ ನಡೆಯಬೇಕೆಂದು ಸೂಚಿಸಿದ್ದೀರಿ. ಆದರೆ ನಿಮ್ಮ ಕ್ಯಾಪಿಟಲಿಸ್ಟ್ ಫಾರ್ಮೇಶನ್ path ಏನಿದೆ ಅದು ಕರಪ್‌ಶನ್ ಮತ್ತು ಅದಕ್ಷತೆಯನ್ನು ಹೆಚ್ಚಿಸುತ್ತದೆ. ನಿಮ್ಮ ಆ ಪದ್ಧತಿ ಸರಿಯಾದ ಪದ್ಧತಿಯಲ್ಲ. ಇಂದಿರಾಗಾಂಧಿಯವರು ಅದನ್ನೇ ಹೇಳುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಇಂದಿರಾ ಗಾಂಧಿಯವರು ಕ್ಯಾಪಿಟಲಿಸ್ಟಿಕ್ formation ಪಾತ್‌ನಲ್ಲಿ ಹೋಗಬೇಕೆಂದು ಹೇಳುತ್ತಾ ಇಲ್ಲ. ಅವರು ಸೋಶಿಯಲಿಸ್ಟಿಕ್ ಪಾತ್‌ನಲ್ಲಿ ಹೋಗಬೇಕೆಂದು ಹೇಳುತ್ತಾರೆ. ಆದ್ದರಿಂದ ಸೋಶಿಯಲಿಸ್ಟ್ ಪಾತ್ ಯಾವ ರೀತಿಯಾಗಬೇಕೆಂಬುದರ ಬಗ್ಗೆ ಸಲಹೆಗಳನ್ನು ಕೊಟ್ಟರೆ ಅದರಿಂದ ಉಪಯೋಗವಾಗುತ್ತದೆ.

ಶ್ರೀ ವಿ. ಎನ್. ಪಾಟೀಲ್.—ನಿಮ್ಮ ಕ್ಯಾಪಿಟಲಿಸ್ಟಿಕ್ ಪಾತಿನಿಂದ ಬಂಡವಾಳಶಾಹಿಗಳಿಗೆ ಪೋಷಣೆ ಮಾಡಿದಂತಾಗುತ್ತದೆ, ದೀನ ದಲಿತ ವರ್ಗದವರಿಗೆ ಶೋಷಣೆ ಮಾಡಿದಂತಾಗುತ್ತದೆ. ನಿಮ್ಮ ಮೊನಾಪಲಿ ಕ್ಯಾಪಿಟಲಿಸ್ಟಿಕ್ formation ಪಾಲಿಸಿಯನ್ನು ಕಡಿಮೆಮಾಡಿ, ನ್ಯಾಶನಲಿಸ್ಟ್ ಕ್ಯಾಪಿಟಲಿಸ್ಟಿಗೆ ಪ್ರೋತ್ಸಾಹ ಕೊಡಿ, ಆಗ ಸರ್ಪ್ಲಸ್ ಕ್ಯಾಪಿಟಲ್ ತನ್ನಿಂದ ತಾನಾಗಿಯೇ ನಿಂತು ಹೋಗುತ್ತದೆ. ಮತ್ತು ಜನರಲ್ ಪ್ರೊಸ್ಪರಿಟಿ ತಾನಾಗಿಯೇ ಬೆಳೆಯುವುದಕ್ಕೆ ಪ್ರಾರಂಭವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ರಷ್ಯಾದಲ್ಲಿ ಕ್ಯಾಪಿಟಲ್ ಫಾರ್ಮೇಶನ್ ಇಲ್ಲ ಎಂದೇನೂ ಅಲ್ಲ. ಅಲ್ಲಿ ಸಾಕಷ್ಟು ಕ್ಯಾಪಿಟಲ್ ಫಾರ್ಮೇಶನ್ ಇಲ್ಲದಿದ್ದರೆ ಪ್ರಗತಿಯಾಗುವುದಿಲ್ಲ. ಕ್ಯಾಪಿಟಲ್ ಫಾರ್ಮೇಶನ್ ಇರಬೇಕು ಮತ್ತು ಅದರ ಮೇಲೆ ಸಾಕಷ್ಟು ಸೋಶಿಯಲ್ ಕಂಟ್ರೋಲ್ ಇಟ್ಟುಕೊಂಡು ಅದನ್ನು ಸಮಾಜಕ್ಕೋಸ್ಕರ ಉಪಯೋಗಿಸಬೇಕು. ಕ್ಯಾಪಿಟಲ್ ಫಾರ್ಮೇಷನ್ ಇಲ್ಲದೆ ಯಾವ ಪ್ರಗತಿಯೂ ಆಗುವುದಿಲ್ಲ. ಅದರ ಫಾರ್ಮೇಶನ್ ಸಮಾಜಕ್ಕೋಸ್ಕರ ಉಪಯೋಗವಾಗುತ್ತದೆ. ಅದು ಎಷ್ಟುಮಟ್ಟಿಗೆ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಈಗ ಚರ್ಚೆಯಾಗಿರತಕ್ಕಂತದ್ದು ಸಪ್ಲಿಮೆಂಟರಿ ಡಿಮ್ಯಾಂಡ್ ಬಗ್ಗೆ. ಇವರು ಎಕನಾಮಿಕ್ ಪಾಲಿಸಿಯ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಅದನ್ನು ಇಲ್ಲಿ ಮಾಡಬೇಕಾಗಿಲ್ಲ,

ಶ್ರೀ ವಿ. ಎನ್. ಪಾಟೀಲ್.—ಮೊನಾಪಲಿ ಕ್ಯಾಪಿಟಲಿಸಂ ಬ್ಯಾನಿಶ್ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಸಪ್ಲಿಮೆಂಟರಿ ಡಿಮ್ಯಾಂಡ್ ಆದರೂ, ಇಲ್ಲಿ ಮಾತನಾಡುವಾಗ ಅದಕ್ಕೆ ಸರಿಯಾದ ವಿವರಣೆ ಕೊಟ್ಟು ಮಾತನಾಡಬೇಕಾಗಿದೆ. ಅದು ನನ್ನ ಅಪ್ರೋಚ್.

ಅಧ್ಯಕ್ಷರು.—ತಾವು ಬಜೆಟ್ ಭಾಷಣದ ಮೇಲೆ ಮಾತನಾಡುವಾಗ ಈ ಎಲ್ಲಾ ವಿಚಾರ ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಪಾಯಿಂಟ್ ಆಫ್ ಆರ್ಡರ್ ಸರ್. ಈಗ ಬಜೆಟ್ ಭಾಷಣಕ್ಕೆ ಬೇರೊಂದು ಅವಕಾಶ ಕೊಡುತ್ತೀರಾ ಹೇಗೆ? ಮತ್ತು ಇಲ್ಲಿ ಬರೀ ಸಪ್ಲಿಮೆಂಟರಿ ಬಜೆಟ್ ಮೇಲೆ ಮಾತ್ರ ಮಾತನಾಡಬೇಕೇ ಹೇಗೆ? ಅದನ್ನು ತಿಳಿಸಬೇಕು.

ಅಧ್ಯಕ್ಷರು.—ಹೌದು, ಸಪ್ಲಿಮೆಂಟರಿ ಬಡ್ಜೆಟ್ ಬಗ್ಗೆ ಮಾತ್ರ ಈಗ ಮಾತನಾಡಬೇಕು.

ಶ್ರೀ ವಿ. ಎನ್. ಪಾಟೀಲ್.—ನಮ್ಮ ಸಂಸ್ಥಾನದ ಎನ್. ಜಿ. ಓ. ಗಳ ಬೇಡಿಕೆ ವಿಷಯವಾಗಿ ಹೇಳುವುದಾದರೆ, ಕೇಂದ್ರಸರ್ಕಾರದ ನೌಕರರಿಗೂ ಮತ್ತು ನಮ್ಮ ರಾಜ್ಯದ ನೌಕರರಿಗೂ ಸಂಬಳ ಸಾರಿಗೆಗಳಲ್ಲಿ ಬಹಳ ವ್ಯತ್ಯಾಸವಿದೆ. ತುಂಬಾ ಡಿಸ್‌ಪ್ಯಾರಿಟಿ ಇದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ನಮ್ಮ ಸರ್ಕಾರದವರು ಕೇಂದ್ರಸರ್ಕಾರದಲ್ಲಿ ಈ ಬಗ್ಗೆ ಹೆಚ್ಚಿನ ಒತ್ತಾಯವನ್ನು ತರಬೇಕು. ಮಾನ್ಯ ಹಣಕಾಸಿನ ಮಂತ್ರಿಗಳು ಆ ವಿಷಯದ ಬಗ್ಗೆ ಹೆಚ್ಚಿನ ಜವಾಬ್ದಾರಿ ವಹಿಸಿ, ಆಸಕ್ತಿ ವಹಿಸಿ ಕೆಲಸಮಾಡುತ್ತೇನೆಂದು ಈ ಸಭೆಗೆ ಅವರು ಆಶ್ವಾಸನೆಯನ್ನು ಕೊಟ್ಟರೆ, ಎನ್. ಜಿ. ಓ. ಗಳಿಗೆ ಹೆಚ್ಚು ಗ್ಯಾರಂಟಿ ಕೊಟ್ಟಹಾಗಾಗುತ್ತದೆ. ಈ ವಿಚಾರದಲ್ಲಿ ಅಡಿಷನಲ್ ಬರ್ಡನ್ ಏನು ಬರುತ್ತದೋ ಅದನ್ನು ಹೊರಲಿಕ್ಕೆ ತಯಾರಾಗಿರುತ್ತೇವೆಂದು ಹಣಕಾಸಿನ ಮಂತ್ರಿಗಳು ಈ ಸಭೆಯಲ್ಲಿ ಆಶ್ವಾಸನೆಯನ್ನು ಕೊಡಬೇಕು. ಅಲ್ಲದೆ ನಾನು ಇಕನಾಮಿಕ್ ಪ್ರಾಬ್ಲಮ್ಸ್ ಬಗ್ಗೆ ಏನೇನು ಸಲಹೆಗಳನ್ನು ಕೊಟ್ಟಿದ್ದೇನೋ ಅವುಗಳ ಬಗ್ಗೆ ಸೂಕ್ತ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri B. SUBBAIAH SHETTY (Surathkal).—I congratulate the Hon'ble Finance Minister for presenting a Budget with no extra taxes on the common man.

Sri H. D. DEVE GOWDA.—About the general discussion on the Budget and the Supplementary Demands for Grants, if permissible under the rules, I suggest to club them and have one debate.

ಶ್ರೀ ಎಂ. ಎಸ್. ಕೃಷ್ಣನ್.—ವೋಟ್ ಆನ್ ಅಕೌಂಟ್ ಬಗ್ಗೆ ಮಾತನಾಡುವಾಗ ಸಪ್ಲಿಮೆಂಟರಿ ಡಿಮ್ಯಾಂಡ್ ವಿಷಯದಲ್ಲಿಯೂ ಮಾತನಾಡಬೇಕೆಂಬುದಾಗಿ ಮಾನ್ಯ ಸಚಿವರ ಸಲಹೆಯಾಗಿತ್ತು. ಆದ್ದರಿಂದ ಸಪ್ಲಿಮೆಂಟರಿ ಡಿಮ್ಯಾಂಡ್ ವಿಷಯದಲ್ಲಿಯೂ ಮಾತನಾಡುವುದಕ್ಕೆ ತಾವು ಅವಕಾಶಕೊಡಬೇಕೆಂದು ಪ್ರಾರ್ಥನೆ.

MADAM SPEAKER.—That has not been moved.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಅರ್ಥ ಸಚಿವರು ಆ ವಿಚಾರವಾಗಿ ಆಗಲೇ ಮಾತನಾಡಿದ್ದಾರೆ. ಅವರು ಮಾತನಾಡುವಾಗ ಯಾವ್ಯಾವ ಬಾಬುಗಳಿಗೆ ಯಾವ್ಯಾವ ರೀತಿ ವೆಚ್ಚಮಾಡಬೇಕೆಂಬುದೇ ಇರತಕ್ಕ ಮೂಲಭೂತವಾದ ತತ್ವವೆಂಬುದಾಗಿ ಹೇಳಿ ಅವುಗಳಲ್ಲಿ ಕೆಲವಾರು ತತ್ವಗಳನ್ನು ಪ್ರತಿಪಾದನೆ ಮಾಡಿದ್ದಾರೆ. ಆದ್ದರಿಂದ ಅದರ ಬಗ್ಗೆ ಮಾತನಾಡಲು ಅವಕಾಶವನ್ನು ಕೊಡಬೇಕೆಂದು ನಮ್ಮ ಅಭಿಪ್ರಾಯ.

Sri B. SUBBAYYA SHETTY.—I should like to draw the attention of the Government to certain things for which funds will have to be made available immediately. It is a matter of common knowledge that lands are acquired for public purposes and many families, especially tenants and poor labourers who are uprooted, because the compensation awarded by the Government is taken away by the land-lords and the tenants and poor labourers are left out to their own fate. Such a thing occurred in Mangalore while acquiring lands for the Penambur Harbour Project. Thousands of people were uprooted and the compensation awarded was taken away by the landlords, and the then Government promised them that they would be rehabilitated. But it goes to the credit of the Government that it did not keep up its promise. For this developmental project, for the upliftment of the country and for the benefit of the country, these poor people, tenants and poor labourers have sacrificed their all, home and hearth, where they lived since the time of their fore-fathers. But it is regrettable to note that even today these people have not been rehabilitated. Loans to the extent of Rs. 18 lakhs were advanced through the Co-operative Society and they built some houses in far away places like Katipall and decrees have been obtained against them and they will be uprooted from these places. Thus they will become homeless and displaced persons again. Therefore I plead and demand that grants have to be made available for rehabilitating these poor tenants and labourers and funds have to be found to wipe out their existing debts.

In this connection, I would like to point out that under Demand No. 31-II Minor and sub Heads-50 Public Works a sum of Rs. 5,44,000 has been provided for improvement of Lalbagh and Sri Jayachamarajendra Park, Bangalore, and further an amount of Rs. 80,60,000 is demanded under Capital Outlay of P.W.D. It is stated in the reasons given that an amount equal to this was surrendered. I am of the opinion that the matters under these heads are not very urgent, they could wait, and the amount could be reduced and very well be used for rehabilitating the poor displaced persons.

(SRI B. SUBBAYYA SHETTY)

I thank you very much for giving me this opportunity to say a few words.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಅಧ್ಯಕ್ಷಿಣಿಯವರೇ, ಈ ಸಂಪ್ಲಿಮೆಂಟರಿ ಗ್ರಾಂಟಿನಲ್ಲಿ ಫ್ಯಾಮಿನ್ ರಿಲೀಫ್ ಫಂಡ್ಸ್‌ಗೆ ಹಣವನ್ನು ಕೇಳಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಫ್ಯಾಮಿನ್ ರಿಲೀಫ್ ಕಾಮಗಾರಿಗಳು ನಡೆದು ಸುಮಾರು 8—10 ತಿಂಗಳುಗಳಾದರೂ ಕೆಲಸಗಾರರಿಗೆ ಮತ್ತು ಕೂಲಿಗಾರರಿಗೆ ಹಣ ಪಾವತಿಯಾಗದೇ ಇರುವುದರಿಂದಲೂ ಎಲ್ಲರೂ ಕೂಡ ಬಹಳ ಕಷ್ಟಕ್ಕೆ ಸಿಕ್ಕಿದ್ದಾರೆ. ಆ ಬಗ್ಗೆ ಕೆಲವು ಕಡೆಗಳಲ್ಲಿ ಅಧಿಕಾರಿಗಳಾಗಿರತಕ್ಕವರಲ್ಲಿಯೇ ಒಬ್ಬ ಅಧಿಕಾರಿ ಮಾಡಿದ್ದನ್ನು ಇನ್ನೊಬ್ಬ ಅಧಿಕಾರಿ ಸರಿಯಾಗಿಲ್ಲವೆಂಬುದಾಗಿ ಹೇಳುವುದೇ ಜಾಸ್ತಿಯಾಗಿ ಆ ಅಧಿಕಾರಿಗಳ ಜಿಜ್ಞಾಸೆಯ ದೆಸೆಯಿಂದ ಇದುವರೆಗೂ ಕೂಲಿ ಹಣ ಪಾವತಿಯಾಗಿಲ್ಲ.

ಇನ್ನು ಈ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನಾಂಗದವರಿಗೆ ಗೃಹನಿರ್ಮಾಣಕ್ಕಾಗಿ ಸಾಕಷ್ಟು ಹಣವನ್ನು ಇದುವರೆಗೂ ಒದಗಿಸದೇ ಸುಮಾರು ಎರಡು ವರ್ಷಗಳಿಂದಲೂ ವಸತಿ ಸೌಕರ್ಯವಿಲ್ಲದೆ ಅವರು ತುಂಬಾ ಕಷ್ಟಪಡುತ್ತಿದ್ದಾರೆ. ಆ ಜನಾಂಗದವರ ಸಹಕಾರ ಸಂಘಕ್ಕೆ ಈ ಬಗ್ಗೆ ಎಷ್ಟು ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟು ಹಣವನ್ನು ಇದುವರೆಗೆ ಒದಗಿಸದೇ ಇರುವುದರಿಂದ ಅವರು ಆಫೀಸಿನಿಂದ ಆಫೀಸಿಗೆ ಅಲೆದಾಡುತ್ತಿದ್ದಾರೆ. ಅವರ ಸ್ಥಿತಿಗತಿ ತುಂಬಾ ಕೆಟ್ಟಿದೆ. ಅದಕ್ಕಾಗಿ ಸರ್ಕಾರದವರು ಅವರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು. ಇನ್ನು ನಿಮ್ನವರ್ಗದವರ ವಿಷಯವಾಗಿ ಹೇಳುವುದಾದರೆ, ಅವರಿಗೆ ಗೃಹ ನಿರ್ಮಾಣಕ್ಕಾಗಿ ಸಾಕಷ್ಟು ಹಣ ಸಹಾಯ ಸರ್ಕಾರದಿಂದ ಒದಗದೇ ಇರುವುದರಿಂದ ಆ ಜನಾಂಗದವರಲ್ಲಿ ಅನೇಕರು ಆ ಸಂಘಕ್ಕೆ ಅಡಿಷನಲ್ ಷೇರು ಕೊಡುವುದಕ್ಕೋಸ್ಕರ ತಮ್ಮ ಹೆಂಗಸರ ಕಿವಿ ಬೆಂಡೋಲೆ ಮತ್ತು ಮೂಗುಬಟ್ಟುಗಳನ್ನು ಒತ್ತೆಯಿಟ್ಟು ಹಣ ಕೂಡಿಸಿ ಸಂಘಕ್ಕೆ ಕಟ್ಟಲು ತಿರುಗುತ್ತಿದ್ದಾರೆ. ಆದ್ದರಿಂದ ಇವರ ವಿಚಾರದ ಬಗ್ಗೆ ಸರ್ಕಾರ ಹೆಚ್ಚು ಗಮನವನ್ನು ಹರಿಸಬೇಕು. ಹರಿಜನರಿಗೂ ಮತ್ತು ಗಿರಿಜನರಿಗೂ ಗೃಹ ನಿರ್ಮಾಣದ ಸೌಕರ್ಯದ ಬಗ್ಗೆ ಬಹಳ ತೊಂದರೆಯಾಗಿದೆ. ಅದನ್ನು ಕೂಡಲೇ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರವಾದ ಅರಸೀಕೆರೆಯಲ್ಲಿ ಸೇಕಡ 90 ಪಾಲಿನಷ್ಟು ಜನಗಳಿಗೆ ಗೃಹ ವಸತಿ ಸೌಕರ್ಯಗಳಿಲ್ಲದೆ ತುಂಬಾ ತೊಂದರೆಪಡುತ್ತಿದ್ದಾರೆ. ಸಹಕಾರ ಸಂಘದಲ್ಲಿ ಹಾಗೂ ಅಭಿವೃದ್ಧಿ ಮಂಡಲಿಗಳಲ್ಲಿ ಶೇಕಡ 10 ಪಾಲಿನಷ್ಟು ಜನರಿಗೂ ಗೃಹನಿರ್ಮಾಣಕ್ಕಾಗಿ ಹಣ ಸಿಗದೆ ತುಂಬಾ ತೊಂದರೆಪಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ಹೆಚ್ಚಿಗೆ ಹಣವನ್ನು ಒದಗಿಸಿಕೊಟ್ಟು ಅವರ ಬಗ್ಗೆ ಸರ್ಕಾರ ಹೆಚ್ಚು ಗಮನವನ್ನು ಹರಿಸಬೇಕು.

ಇನ್ನು ಸೆನ್ಸಸ್ ಕೆಲಸವೇನೋ ಇತ್ತೀಚೆಗೆ ನಡೆದಿದೆ. ಆದರೆ ಬಡ ಅಧ್ಯಾಪಕರನ್ನು ಆ ಕೆಲಸಕ್ಕೆ ಹಚ್ಚಿದ್ದರೂ ಅವರಿಗೆ ಕೊಡಬೇಕಾಗಿದ್ದ ರೆಮ್ಯೂನರೇಷನ್ನನ್ನು ಇದುವರೆಗೂ ಸರ್ಕಾರ ಪಾವತಿ ಮಾಡಲಿಲ್ಲ. ಅದನ್ನು ಆದಷ್ಟು ಜಾಗ್ರತೆಯಾಗಿ ಆ ಬಡ ಉಪಾಧ್ಯಾಯರಿಗೆ ಪಾವತಿ ಮಾಡಲು ತಕ್ಕ ಆಜ್ಞೆಯನ್ನು ಕೂಡಲೇ ಸರ್ಕಾರದಿಂದ ಹೊರಡಿಸಬೇಕೆಂದು ನನ್ನ ಪ್ರಾರ್ಥನೆ. ಅದಕ್ಕೋಸ್ಕರ ಅನೇಕ ಅಧ್ಯಾಪಕ ವರ್ಗದವರು ಕೇವಲ ಬಸ್ ಚಾರ್ಜುಗಳನ್ನು ಸಹ ಕೊಡುವುದಕ್ಕೆ ಅಸಮರ್ಥರಾಗಿ ಈಗಾಗಲೇ ತುಂಬಾ ಕಷ್ಟಕ್ಕೆ ಸಿಕ್ಕಿದ್ದಾರೆ.

ಇನ್ನು ಕಂದಾಯದ ಬಗ್ಗೆ ಬೇಡಿಕೆಯನ್ನು ಸಲ್ಲಿಸಿದ್ದಾರೆ. ಹಿಂದೆ ರಾಜ್ಯದಲ್ಲಿ ಬರಗಾಲ ಬಂದಿತ್ತೆಂದು ರೈತರಿಗೆ ಮೂರು ವರ್ಷದ ಕಂದಾಯವನ್ನು ಸರ್ಕಾರದವರು ಮಾಫಿ ಮಾಡಿದ್ದರು ಅಲ್ಲದೆ ಇನ್ನು ಕೆಲವು ವರ್ಷಗಳ ಕಂದಾಯವನ್ನು ತಡೆಹಿಡಿದಿದ್ದರು. ಈಗ ಹಾಗೆ ಹಿಂದೆ ತಡೆಹಿಡಿದಿಟ್ಟಿದ್ದ ಎಲ್ಲ ವರ್ಷಗಳ ಕಂದಾಯವನ್ನೂ ಒಂದೇ ಗಂಟಿನಲ್ಲಿ ಕೊಡಬೇಕೆಂದು ರೈತರನ್ನು ಒತ್ತಾಯ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಇನ್ನು ಕೆಲವು ಕಡೆ ಶ್ಯಾನುಭೋಗರು ಹಾಗೂ ವಿಲೇಜ್ ಅಕೌಂಟೆಂಟರು ಹೋಗಿ ರೈತರನ್ನು ಒತ್ತಾಯ ಮಾಡಿ ಅವರು ವಿದ್ಯಾವಂತರಲ್ಲ ಎಂಬುದನ್ನು ತಿಳಿದು ಅವರಿಂದ ಹತ್ತು ರೂಪಾಯಿಗಳ ಬಾಕಿ ಬರಬೇಕಾಗಿದ್ದರೆ ಅಂಥವರಿಂದ ನೂರಾರು ರೂಪಾಯಿಗಳನ್ನು ವಸೂಲ್ಮಾಡಿಕೊಂಡು ಅವರಿಗೆ ಯಾವ ರಶೀದಿ ವಗೈರೆಗಳನ್ನೂ ಅವರು ಕೊಡುತ್ತಿಲ್ಲ. ಮುಂದೆ ಇದರಿಂದ ರಾಜ್ಯದಲ್ಲಿ ದೊಡ್ಡ ಅನಾನುಕೂಲಗಳಾಗಬಹುದು. ಆದ್ದರಿಂದ ಮೊದಲೇ ಸರ್ಕಾರದವರು ಇತ್ತ ಕಡೆಗೆ ಅವರ ಗಮನವನ್ನು ಹರಿಸುವುದು ಒಳ್ಳೆಯದು.

3-30 P. M.

ಇನ್ನು ರಾಜ್ಯದಲ್ಲಿ ನಡೆಯಬೇಕಾಗಿದ್ದ ಅಭಿವೃದ್ಧಿ ಕಾರ್ಯಗಳ ವಿಚಾರಕ್ಕೆ ಬಂದರೆ ಕಳೆದ 2 ವರ್ಷಗಳಿಂದಲೂ ರಾಜ್ಯದಲ್ಲಿ ಒಂದು ಕಾಸಿನ ಕೆಲಸಗಳೂ ಕೂಡ ಆಗಿಲ್ಲ. ಬಡ್‌ಜೆಟ್‌ನಲ್ಲಿ ಪಡೆದುಕೊಂಡಂಥ ಹಣ ಎಲ್ಲಿಗೆ ಹೋಗುತ್ತದೆಯೋ ಗೊತ್ತಾಗುತ್ತಿಲ್ಲ. ಇಂಥದಕ್ಕೆಲ್ಲಾ ಅವಕಾಶ ಕೊಡಬಾರದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

BUDGET ESTIMATES FOR 1972-73
DEMANDS FOR GRANTS

(Vote on account)

Demand No. 1—Taxes on Income other than Corporation Tax.

SRI M. Y. GHORPADE (Minister for Finance).—Sir, on the recommendation of the Governor I beg to move:

That sums not exceeding Rs. 3,66,000 be granted on account, out of the consolidated fund of the State to defray the charges which will come in course of payment during the year ending 31st day of March 1973, in respect of Taxes on income other than Corporation Tax.

MADAM SPEAKER.—Motion moved:

That sums not exceeding Rs. 3,66,000 be granted on account out of the consolidated fund of the State to defray the charges which will come in course of payment during the part of the year ending 31st March 1973, in respect of "Taxes on income other than Corporation Tax".

It is vote an Account. There will be no Cut Motions. This demand and all the other Demands are open for debate.

ಶ್ರೀ ಎಚ್. ಡಿ. ದೇವೇಗೌಡ.—ಈಗ ತಾನೆ ಮಾನ್ಯ ಸಚಿವರು ಡಿಮ್ಯಾಂಡ್ಸ್ ಫಾರ್ ಗ್ರಾಂಟ್ಸ್‌ನ್ನೂ ಮೂವ್ ಮಾಡಿದ್ದಾರೆ. ಇದು ನಾಲ್ಕು ತಿಂಗಳ ಓಟ್‌ಆನ್‌ಅಕೌಂಟ್. ಆದ್ದರಿಂದ ಸದಸ್ಯರಿಗೆ ಮಾತನಾಡುವುದಕ್ಕೆ ಅಧ್ಯಕ್ಷರು ಸ್ವಲ್ಪ ಹೆಚ್ಚಿನ ವೇಳೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಾನು ಮೊದಲು ಮಾನ್ಯ ಸಚಿವರು ಓಟಾನ್ ಅಕೌಂಟ್‌ನ್ನು ಸಭೆಯ ಮುಂದೆ ಚರ್ಚೆಗೆ ಇಟ್ಟಿದ್ದಾರೆಂದು ತಿಳಿದಿದ್ದೆ. ಅದು ತೀರ್ಮಾನವಾದ ನಂತರ ಸಪ್ಲಿಮೆಂಟರಿ ಡಿಮ್ಯಾಂಡನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ತಾವು ಮೊದಲು ಸಪ್ಲಿಮೆಂಟರಿ ಡಿಮ್ಯಾಂಡನ್ನು ಚರ್ಚೆಗೆ ಇಟ್ಟಮೇಲೆ ಅದರ ಮೇಲೆ ಓಟನ್ನು ತೆಗೆದುಕೊಳ್ಳಬೇಕಾಗಿತ್ತು. ಡಿಮ್ಯಾಂಡ್ಸ್ ಫಾರ್ ಗ್ರಾಂಟ್ಸ್ ಬಡ್ಜೆಟ್ಟನ್ನು ಈಗತಾನೆ ಮೂವ್ ಮಾಡಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರುಗಳು ಎರಡನ್ನೂ ಸಭೆಯ ಮುಂದೆ ಮಂಡಿಸಿ, ಆಗ ಸದಸ್ಯರಿಗೆ ಎರಡರಮೇಲೂ ಮಾತನಾಡಲು ಅವಕಾಶವಾಗುತ್ತದೆಂದು ಹೇಳಿದರು. ಇದನ್ನು ವಿರೋಧ ಪಕ್ಷದ ಮಾನ್ಯ ಸದಸ್ಯರೂ ಕೂಡ ಒಪ್ಪಿದ್ದರಿಂದ ನಾನು ಜೊತೆಗೆ ಇದನ್ನೂ ಮಂಡಿಸಿದೆ. ಡಿಮ್ಯಾಂಡ್ಸ್ ಫಾರ್ ಗ್ರಾಂಟ್ಸನ್ನು ನಾನೀಗ ಮೂವ್ ಮಾಡದಿದ್ದರೆ ಸಪ್ಲಿಮೆಂಟರಿ ಡಿಮ್ಯಾಂಡುಗಳ ಮೇಲಿನ ಚರ್ಚೆ ಈ ದಿವಸವೇ ಮುಗಿಯಬೇಕಾಗಿತ್ತು. ಅದು ಬೇಡ ಈ ಇಂಟೇರಿಯಂ ಬಡ್ಜೆಟ್ ಮತ್ತು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಎರಡರ ಚರ್ಚೆಯನ್ನೂ ಜೊತೆಯಲ್ಲೇ ಮಾಡೋಣ ಎಂದುದರಿಂದ ಹೀಗೆ ಮಾಡಲಾಯಿತು.

ಶ್ರೀ ಎಸ್. ಬಂಗಾರಪ್ಪ.—ಎರಡನ್ನೂ ಕವರ್ ಮಾಡಲು ಸಾಧ್ಯವಿದೆ ಎಂಬುದನ್ನು ನಾನೂ ಬಲ್ಲೆ.

† ಶ್ರೀ ಎಸ್. ವಿ. ನಾಯಕ್ (ಕುಮಟಾ).—ಅಧ್ಯಕ್ಷರೇ, ಮಾನ್ಯ ಆರ್ಥಿಕ ಸಚಿವರು ಈ ಸದನದ ಮುಂದೆ ಅನುಪೂರಕ ಬೇಡಿಕೆಗಳನ್ನು ಇಟ್ಟಿದ್ದಾರೆ. ಈ ಬೇಡಿಕೆಗಳು ಸ್ವಾಗತಾರ್ಹವಾದವುಗಳು. ಅವರು ದೊಡ್ಡವಿದ್ಯಾವಂತರು. ಅವರಿಗೆ ಆಳವಾದ ಆರ್ಥಿಕ ಜ್ಞಾನವಿದೆ; ಅವರಲ್ಲಿ ಆರ್ಥಿಕ ನವೀನತೆಯಿದೆ. ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನಾನು ಉತ್ತರ ಕನ್ನಡ ಜಿಲ್ಲೆಯಿಂದ ಬಂದಂಥ ಒಬ್ಬ ಸದಸ್ಯ. ಆದ್ದರಿಂದ ನಾನು ನನ್ನ ಜಿಲ್ಲೆಗೆ ಸಂಬಂಧಪಟ್ಟಹಾಗೆ ಕೆಲವು ಅನುಪೂರಕ ಬೇಡಿಕೆಗಳ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ಸಭೆಯ ಮುಂದೆ ಇಡಬೇಕಾಗಿದೆ. ನಾನೀಗ ನಮ್ಮ ಜಿಲ್ಲೆಯಲ್ಲಿ ಕೆಲವು ಜನ ಮೀನುಗಾರಿಕೆಯಲ್ಲಿ ತೊಡಗಿರತಕ್ಕ ಜನರು ಸಮುದ್ರ ಕರಾವಳಿಯಲ್ಲಿ ತಮ್ಮ ಗ್ರಾಹಕಗಳನ್ನು ಶತ ಶತಮಾನಗಳಿಂದಲೂ ಮಾಡಿಕೊಂಡು ಬಂದಿರುತ್ತಾರೆ. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಾಸಮಾಡತಕ್ಕ ಮೀನುಗಾರರು ತಮ್ಮ ಗೃಹವಸತಿಯ ... ...

Sri C. M. ARUMUGHAM.—Madam, on behalf of the Opposition I wish to submit that when such an important subject such as the Demands for Grants is being discussed, it is but necessary that at least fifty per cent of the Ministry should be present in the House. I know, Madam, that the Council is going on but they should give top priority to the Assembly when we are discussing the Demands for Grants.

MADAM SPEAKER.—One Hon. Minister is there.

Sri C. M. ARUMUGHAM.—Just now he has come; but where is the Finance Minister? It is most improper on the part of the Ministers to leave the House when the discussion on the budget is going on; particularly, the Finance Minister must be present in the House. The Treasury Benches should respect the Opposition and the speakers who are raising points.

(*At this stoge, the Finance Minister entered the House*)

MADAM SPEAKER.—The Finance Minister is also here. Does the hon. Member think that the Finance Minister cannot go out even to ease himself. Just because he wants to say something, it is not fair on his part to make such comments.

(MR CKAIRMAN [SRI G. RAME GOWDA] in the Chair)

ಶ್ರೀ ಎಸ್. ವಿ. ನಾಯಕ್.—

ಅಧ್ಯಕ್ಷರೆ.........

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ಯಾವಾಗಲೂ ಸಭೆಯಲ್ಲಿ ಬಡ್ಜೆಟ್ ಮೇಲೆ ಚರ್ಚೆ ನಡೆಯತಕ್ಕ ಕಾಲದಲ್ಲಿ ಎಲ್ಲ ಮಂತ್ರಿಗಳೂ ಸಭೆಯಲ್ಲಿ ಇರಬೇಕಾದ್ದು ಅಗತ್ಯ. ಆದರೆ ಇಲ್ಲಿ ಈಗ 2—3 ಜನರು ಮಾತ್ರ ಇದ್ದಾರೆ. ನಾನು ಈ ಮಾತುಗಳನ್ನು ಶ್ರೀಮಾನ್ ಘೋರ್ಪಡೆಯವರ ಬಗ್ಗೆ ಹೇಳುತ್ತಿಲ್ಲ. ಯಾವಾಗಲೂ ಬಡ್ಜೆಟ್ ಮೇಲೆ ಚರ್ಚೆ ನಡೆಯತಕ್ಕ ಕಾಲದಲ್ಲಿ ಎಲ್ಲಾ ಸಚಿವರೂ ಸಭೆಯಲ್ಲಿರಬೇಕಾದ್ದು ಅಗತ್ಯ......

ಶ್ರೀ ಕೆ. ಎನ್. ವೀರಪ್ಪಗೌಡ.—ಮಾನ್ಯ ಸಚಿವರಿಗೂ ಪ್ರೊಸೀಜರ್ ಗೊತ್ತಿದೆ. ಅವರು ಸಭೆಗೆ ಬಂದನಂತರ ಎದ್ದು ಹೊರಗಡೆ ಹೋಗಲೇಬಾರದೆಂಬ ನಿರ್ಬಂಧ ಯಾವ ಕಾನೂನಿನಲ್ಲೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಂಥದನ್ನು ಕೈ ಬಿಟ್ಟು ಒಳ್ಳೇ ಪದ್ಧತಿಯನ್ನು ಕಲಿಯಬೇಕೆಂದು ಹೇಳುತ್ತಿದ್ದೇವೆ. ಎಲ್ಲ ಮಂತ್ರಿಗಳೂ ಸಭೆಯಲ್ಲಿ ಹಾಜರಿರಬೇಕಾದ್ದು ಅವಶ್ಯಕ.

ಛೇರ್ಮನ್ನರು.—ಬಡ್ಜೆಟ್ ಚರ್ಚೆ ನಡೆಯತಕ್ಕ ಕಾಲದಲ್ಲಿ ಎಲ್ಲಾ ಮಂತ್ರಿಗಳೂ ಸಭೆಯಲ್ಲಿ ಇರಲೇ ಬೇಕೆಂಬ ಸಂಪ್ರದಾಯವೇನೂ ಇರುವುದಿಲ್ಲ. ಇಲ್ಲಿ ಕೆಲವರಿದ್ದರೆ ಸಾಕು ಕೆಲಸ ನಡೆದು ಕೊಂಡು ಹೋಗುತ್ತೆ. ಅವರೆಲ್ಲರೂ ಒಂದು ಕ್ಯಾಬಿನೆಟ್ಟಿನ ಸದಸ್ಯರು. ಇಲ್ಲಿ ಏನೇನು ಚರ್ಚೆ ನಡೆಯುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳತಕ್ಕ ಶಕ್ತಿ ಅವರಿಗೆ ಇದೆ.

ಶ್ರೀ ಎಸ್. ವಿ. ನಾಯಕ್.—ನಾನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸ ಮಾಡತಕ್ಕ ಮೀನುಗಾರರು ತಮ್ಮ ಗ್ರಾಹಕ ನಿವೇಶನಗಳ ಬಗ್ಗೆ ಒಂದು ದುರ್ಘರ ಪ್ರಸಂಗಕ್ಕೆ ಸಿಕ್ಕಿದ್ದಾರೆಂಬ ವಿಚಾರವನ್ನು ಹೇಳುತ್ತಿದ್ದೆ. ಅವರು ವಾಸ ಮಾಡತಕ್ಕ ಗ್ರಾಹಕ ನಿವೇಶನಗಳೆಲ್ಲಾ ಇನ್ನೂ ಅರಣ್ಯ ಖಾತೆಯ ಅಂಕಿತದಲ್ಲೇ ಇರುತ್ತದೆ. ಆ ನಿವೇಶನಗಳನ್ನು ಔದ್ಯೋಗಿಕ ಕಾರಣದಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಕಳೆದುಕೊಳ್ಳತಕ್ಕ ಸಂದರ್ಭ ಅವರಿಗೆ ಉಂಟಾಗಿದೆ. ಸರ್ಕಾರದವರು ಇದರ ಕಡೆಗೆ ಕೂಡಲೆ ಗಮನಕೊಡಬೇಕು.

ಎರಡನೆಯದಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುವ ಜನರ ರೀತಿ ಒಂದು ವೈಶಿಷ್ಟ ರೀತಿಯದ್ದಾಗಿದೆ. ಅದರ ಬಗ್ಗೆ ಒಂದೆರಡು ವಿಷಯಗಳನ್ನು ಈ ಸಭೆಯ ಮುಂದೆ ತರಲು ಇಚ್ಛಿಸುತ್ತೇನೆ. ಅಲ್ಲಿರುವ ಮುಕ್ರಿ, ಅಗೆಯರು, ಹಳೆಯರು ಈ ಜನರ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಅಲ್ಲಿ ಜನರು ತಮ್ಮದೇ ಆದ ಒಂದು ನಿವೇಶನದಲ್ಲಿ ನೂರಾರು ವರ್ಷಗಳಿಂದ ವಾಸಿಸುತ್ತಾ ಬಂದಿದ್ದಾರೆ. ಅವರಿಗೆ ನಿವೇಶನಗಳನ್ನು ಕಟ್ಟಿ ಕೊಟ್ಟಿಲ್ಲ. ಅವರಿಗೆ ಸರ್ಕಾರದವರು ಬೆಂಬಲಿಗರಾಗಿ ನಿಂತುಕೊಂಡು ಗೃಹನಿರ್ಮಾಣವನ್ನು ಕಲ್ಪಿಸಿಕೊಟ್ಟು, ಅದಕ್ಕೆ ಯೋಗ್ಯ ಪರಿಹಾರ ವನ್ನು ಸರ್ಕಾರ ಒದಗಿಸಿ ಕೊಡುತ್ತದೆ ಎಂದು ನಾನು ನಂಬಿದ್ದೇನೆ.

ಮೂರನೆಯದಾಗಿ ಅರಣ್ಯ ಜಿಲ್ಲೆಯಾದಂಥ ನಮ್ಮ ಜಿಲ್ಲೆಯಲ್ಲಿ ಸಾಗುವಳಿಗೆ ಸಾಕಷ್ಟು ಭೂಮಿ ಇದ್ದರೂ, ಸರ್ಕಾರ ಲಕ್ಷಾಂತರ ಎಕರೆ ಭೂಮಿಯನ್ನು ಬಿಟ್ಟು ಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರೂ ಕೂಡ ಇಲ್ಲಿಯವರೆಗೆ ಸಾಕಷ್ಟು ಭೂಮಿ ಬಿಡುಗಡೆ ಆಗಲಿಲ್ಲ. ಅರಣ್ಯ ಬೆಳೆಸುವುದಕ್ಕೆ ಸಾಕಷ್ಟು ಭೂಮಿಯನ್ನು ಇಟ್ಟುಕೊಂಡು ಇನ್ನು ಉಳಿದ ಭೂಮಿಯನ್ನು ಸಾಗುವಳಿಗೆ ಬಿಡುಗಡೆ ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ನಮ್ಮ ಆರ್ಥಿಕ ಸಂಪತ್ತನ್ನು ಹೆಚ್ಚಿಸುವುದರಲ್ಲಿ ಅನುವು ಮಾಡಿಕೊಳ್ಳುತ್ತಾರೆಂದು ನಾನು ಈ ಸಂದರ್ಭದಲ್ಲಿ ನಂಬಿದ್ದೇನೆ.

ಇನ್ನು ಕಾರವಾರ ಜಿಲ್ಲೆಯಲ್ಲಿ ಹರಿಗೆ ಹತ್ತಿರ ಈಗ ಸ್ಥಾಪಿತವಾಗಲಿರುವ ಕಾಸ್ಟಿಕ್ ಸೋಡಾ ಫ್ಯಾಕ್ಟರಿ ಕಾರ್ಖಾನೆಯಿಂದ ಕೆಲವು ಜನಗಳಿಗೆ ರಿಹ್ಯಾಬಿಲಿಟೇಷನ್ ಪ್ರಶ್ನೆ ಬರುತ್ತದೆ. ಅಲ್ಲಿಯ ಜನರಿಗೆ ಪುನರ್ನಿವೇಶನ ಕಲ್ಪಿಸುವ ಪ್ರಸಂಗದಲ್ಲಿ ಯೋಗ್ಯ ಪರಿಹಾರವನ್ನು ಸರ್ಕಾರ ಕೊಡುತ್ತದೆ ಎಂದು ನಾನು ನಂಬಿದ್ದೇನೆ. ಇದೇ ಸಂದರ್ಭದಲ್ಲಿ ನಾನು ಇನ್ನೊಂದು ಮಾತು ಹೇಳುವುದೇ ನೆಂದರೆ ಕಾಸ್ಟಿಕ್ ಸೋಡಾ ಫ್ಯಾಕ್ಟರಿಗೆ ಹೊಂದಿಕೊಂಡಂತೆ ಸಂಬಂಧಪಟ್ಟ ಮಂತ್ರಿಗಳು ಅಲ್ಲಿ ಔದ್ಯೋಗಿಕ ಕೇಂದ್ರಗಳನ್ನು ಸ್ಥಾಪಿಸಿ, ತಾಂತ್ರಿಕ ತಜ್ಞರಿಗೆ ಮತ್ತು ನಿರುದ್ಯೋಗ ಪದವೀಧರರಿಗೆ ತಕ್ಕ ಉದ್ಯೋಗಗಳನ್ನು ಕಲ್ಪಿಸಿಕೊಟ್ಟರೆ ಅವರು ಹಳ್ಳಿಗಾಡಿನಿಂದ ಬಾಂಬೆ, ಕಲ್ಕತ್ತಾ, ಮದ್ರಾಸ್ ಈ ಪಟ್ಟಣಗಳಿಗೆ ಹೋಗುವುದು ತಪ್ಪಿದಂತಾಗುತ್ತದೆ. ಆಮೂಲಕ ಈ ಜಿಲ್ಲೆಯ ಉದ್ಧಾರ ವನ್ನು ಮಾಡುವುದಕ್ಕೆ ಅನುವು ಮಾಡಿಕೊಡುತ್ತಾರೆಂದು ನಾನು ನಂಬಿದ್ದೇನೆ.

ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳುತ್ತೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ರುವ ಸಹ್ಯಾದ್ರಿ ಪರ್ವತದಿಂದ ಬಂದಂಥ ನೀರು ಅರಬ್ಬೀ ಸಮುದ್ರಕ್ಕೆ ಹೋಗಿ ಬೀಳುತ್ತದೆ. ಅಲ್ಲಿ ಶರಾವತಿ, ಗಗನಾಶಿನಿ, ಕಾಳಿನದಿ ಇವುಗಳಿಗೆ ಒಡ್ಡು ಹಾಕಿ ಅಲ್ಲಿಯ ಸಿಹಿ ನೀರಿನಿಂದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಬೇಕೆಂದು ತಮ್ಮನ್ನು ವಿನಂತಿಸಿ ಕೊಳ್ಳುತ್ತೇನೆ. ಈ ಭೂಮಿಗೆ ನೀರಿನ ಪೂರೈಕೆ ಮಾಡಿಕೊಟ್ಟರೆ ಈ ಜಿಲ್ಲೆಯ ಅಭಿವೃದ್ಧಿಯಾಗುತ್ತದೆ ಮತ್ತು ಅದರ ಮೂಲಕ ರಾಜ್ಯದ ಅಭಿವೃದ್ಧಿಯೂ ಆಗುತ್ತದೆ ಮತ್ತು ನೀವು ಏನು ಒಂದು ಸಮಾಜವಾದಿ ಸಮಾಜವಾದ ರಚನೆ ಮಾಡುತ್ತೇವೆ ಎಂದು ಹೊರಟಿದ್ದೀರೋ, ಚುನಾವಣಾ ಸಂದರ್ಭದಲ್ಲಿ ಏನು ಒಂದು ಘೋಷಣೆ ಮಾಡಿದ್ದೀರೋ ಅದಕ್ಕೆ ಅನುಕೂಲವಾಗುತ್ತದೆ ಎಂದು ತಿಳಿದು ಈ ಪೂರಕ ಬೇಡಿಕೆ ಯನ್ನು ನಾನು ನಿಮ್ಮ ಮುಂದೆ ಮಂಡಿಸುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ಹೊಸ ವಾತಾವರಣದಲ್ಲಿ ನಾವು ಇವತ್ತು ಕಾಲು ಇಡುತ್ತಾ ಇದ್ದೇವೆ. ಹಿಂದೆ ಒಂದು ಕಾಲದಲ್ಲಿ ಸಮಾಜವಾದಿ ಗೆಳೆಯರು ಈ ಕಡೆ ಕುಳಿತಿದ್ದರು. ಈಗ ಅವರು ಬಡತನ ನಿರ್ಮೂಲನೆ, ಸಮಾಜವಾದಿ ಘೋಷಣೆ ಮುಖೇನ ಅಧಿಕಾರವನ್ನು ಪಡೆದು ಹೊಸ ಆಡಳಿತವನ್ನು ಪ್ರಾರಂಭ ಮಾಡಿದ್ದಾರೆ. ಈಗ ಹೆಚ್ಚುವರಿ ಬೇಡಿಕೆ ಮತ್ತು ಮುಂದಿನ ಮೂರು ತಿಂಗಳ ಆಯವ್ಯಯವನ್ನು ಮಂಡಿಸಿದ್ದಾರೆ. ಈ ಹೆಚ್ಚುವರಿ ಬೇಡಿಕೆಯಲ್ಲಿ ಮುಖ್ಯವಾಗಿ ಲ್ಯಾಂಡ್ ರೆವಿನ್ಯೂ ಎನ್ನತಕ್ಕಂಥ ವಿಷಯದಲ್ಲಿ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರೆವಿನ್ಯೂ ದಾಖಲೆಗಳನ್ನು ಇಡುವುದಕ್ಕೆ ಈಗ ಒಂದು ಹೊಸ ವರ್ಗವನ್ನು ಸೃಷ್ಟಿ ಮಾಡಿದ್ದಾರೆ. ಆ ವರ್ಗ ವಿಲೇಜ್ ಅಕೌಂಟೆಂಟ್ಸ್ ಎಂದು, ಅವರನ್ನು ನಂಬಿ ಅನೇಕ ಜನ ಗೇಣಿ ರೈತರು ತಲೆ ಮೇಲೆ ಕೈ ಹೊತ್ತು ಕೂತಿದ್ದಾರೆ. ಈ ಭೂಸುಧಾರಣ ಕಾನೂನಿನ ಪ್ರಕಾರ ಸಂರಕ್ಷಿತ ರೈತ ಎಂದು ರುಜುವಾತು ಮಾಡಬೇಕಾದರೆ ಅವನು 1965ನೇ ಇಸವಿ ಹಿಂದಿನ 12 ವರ್ಷದ ದಾಖಲೆಗಳನ್ನು ಒದಗಿಸಿ ಕೊಡಬೇಕು. ಆದರೆ ತಾಲ್ಲೂಕು ಆಫೀಸುಗಳಲ್ಲಿ 12 ವರ್ಷದ ಮೇಲಿನ ಆ ದಾಖಲೆಗಳನ್ನು ಇಟ್ಟಿಲ್ಲ. 1965 ನೇ ಇಸವಿಯಲ್ಲಿ ಭೂಸುಧಾರಣೆ ಜಾರಿಗೆ ತರಬೇಕಾದರೆ 1952—53 ನೇ ಇಸವಿಯ ಪಹಣಿ ದೊರೆಯುತ್ತಿತ್ತು. ಆದರೆ 1958—59 ನೇ ಇಸವಿಯ ಹಿಂದಿನ ಎಲ್ಲಾ ದಾಖಲೆಗಳನ್ನೂ ಸುಟ್ಟು ಹಾಕಿದ್ದಾರೆ. ಗೇಣಿ ರೈತರಿಗೆ ಸಂರಕ್ಷಿತ ರೈತ ಎಂದು ಅವನಿಗೆ ಖಾತೆ ಆಗಬೇಕಾದರೆ 1952 ನೇ ಇಸವಿ ಪಹಣಿಯಲ್ಲಿ ಏನು ದಾಖಲೆ ಇದೆಯೋ ಅದನ್ನು ರಕ್ಷಿಸಿ ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ಇನ್ನೂ ಕೆಲವು ಕಡೆಗಳಲ್ಲಿ ವಿಲೇಜ್ ಅಕೌಂಟೆಂಟ್ಸ್‌ರನ್ನು ನೇಮಿಸಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ವಿಲೇಜ್ ಅಕೌಂಟೆಂಟ್ಸ್‌ಗಳನ್ನು ನೇಮಿಸುವ ವಿಷಯದಲ್ಲಿ ಅಪೀಲು ಹೋಗಿ, ಅವನ್ನು ಹೈಕೋರ್ಟ್‌ನವರು ರದ್ದುಪಡಿಸಿ ಹೊಸದಾಗಿ ನೇಮಕ ಮಾಡಬೇಕೆಂದು ಆಜ್ಞೆಯನ್ನು ಹೊರಡಿಸಿದರು. ಇವತ್ತು ಅನೇಕ ಪಂಚಾಯಿತಿಗಳಲ್ಲಿ ವಿಲೇಜ್ ಅಕೌಂಟೆಂಟ್ಸ್‌ಗಳೇ ಇಲ್ಲ. ಜೊತೆಗೆ ಅವರು ಪಂಚಾಯಿತಿ ಅಧ್ಯಕ್ಷರ ಮಾತೂ ಕೇಳುವುದಿಲ್ಲ. ಪಂಚಾಯಿತಿ ಅಧ್ಯಕ್ಷರು ಮೀಟಿಂಗ್ ಕರೆದರೆ ಪಂಚಾಯಿತಿ ಕಾರ್ಯದರ್ಶಿಗಳು ಇರುವುದೇ ಇಲ್ಲ. ಕೇಳಿದರೆ ತಹಸೀಲ್ದಾರರು ಊರಿಗೆ ಬಂದಿದ್ದರು ಆದ್ದರಿಂದ ನಾನು ಬರಲಿಲ್ಲ ಎಂದು ಹೇಳುತ್ತಾರೆ. ವಿಲೇಜ್ ಅಕೌಂಟೆಂಟ್ಸ್‌ಗಳು ಏನು ಇದ್ದಾರೆ ಅವರನ್ನು ಹಿಡಿದುಕೊಂಡು ಬಂದು ಪಂಚಾಯಿತಿ ಸಭೆ ನಡೆಸುವ ಸಂದರ್ಭ ಇದೆ. ಈ ಲ್ಯಾಂಡ್ ರೆವಿನ್ಯೂ ಬಾಬಿಗೆ ಹೆಚ್ಚುವರಿ ಬೇಡಿಕೆ ಕೊಡಬೇಕೆಂದು ಕೇಳಿದ್ದಾರೆ. ಆದ್ದರಿಂದ ನಾವು ಕೇಳುವ ಎಲ್ಲಾ ರೆವಿನ್ಯೂ ದಾಖಲೆಗಳನ್ನು ಒದಗಿಸುವಂತೆ ಏರ್ಪಾಡು ಮಾಡಬೇಕು ಮತ್ತು ವಿಲೇಜ್ ಅಕೌಂಟೆಂಟ್‌ಗಳನ್ನು ಪಂಚಾಯಿತಿ ಅಧ್ಯಕ್ಷರ ಅಧೀನದಲ್ಲಿ ಕೆಲಸ ಮಾಡುವ ರೀತಿಯಲ್ಲಿ ಕಾನೂನು ಮಾಡಿ ಸ್ಪಷ್ಟ ನಿರ್ದೇಶನ ನೀಡಬೇಕು. ಆವಾಗ ಮಾತ್ರ ಸ್ಪಷ್ಟವಾದ ದಾಖಲೆಗಳು ಸಿಕ್ಕುತ್ತವೆ. ಈ ಭೂಸುಧಾರಣೆ ಅನ್ನುವುದು ಬಹಳ ಪ್ರಾಮುಖ್ಯವಾದ ವಿಷಯ. ಇದು ಗಜಗರ್ಭ ಇದ್ದ ಹಾಗೆ. ತಾವು ಸಮಾಜವಾದ ತತ್ವವನ್ನು ಒಪ್ಪಿಕೊಂಡಿದ್ದೀರಿ. ಭೂಸುಧಾರಣೆಯನ್ನು ನಿರ್ದಿಷ್ಟವಾದ ಅವಧಿಯಲ್ಲಿ ಕಾರ್ಯಗತಮಾಡಬೇಕು ಎನ್ನುವ ನಂಬಿಕೆ ಇಟ್ಟಿದ್ದೀರಾ? ನಿಮ್ಮ ಮಾತಿನಿಂದ ಆ ವಿಷಯದಲ್ಲಿ ಇನ್ನೂ ಸ್ಪಷ್ಟಪಟ್ಟಿಲ್ಲ. ಈಗ ಭೂಸುಧಾರಣಾ ಕಾರ್ಯವು ಕುಂಟುತ್ತಾ ನಡೆಯುತ್ತಿದೆ. ಹೀಗಾದರೆ ಜಾಗ್ರತೆ ಯಶಸ್ವಿಯಾಗಿ ಈ ಕಾರ್ಯ ನಡೆಯುವುದಿಲ್ಲ. ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಸಾಗರದ ಕೋರ್ಟಿನಲ್ಲಿ 7 ಸಾವಿರ ಅರ್ಜಿಗಳಿವೆ ಅವುಗಳಲ್ಲಿ 7 ವರ್ಷವಾದರೂ 500 ಕ್ಕಿಂತ ಹೆಚ್ಚು ವಿಲೇ ಆಗಿಲ್ಲ. ಪ್ರತಿ ವರ್ಷ ಸುಮಾರು 1500 ಗೇಣಿ ಅರ್ಜಿಗಳು ಬರುತ್ತವೆ. 1965ನೇ ಅಕ್ಟೋಬರಿನಲ್ಲಿ ಭೂಸುಧಾರಣಾ ಕಾನೂನು ಜಾರಿಗೆ ಬಂತು, ಅದನ್ನು ನಾವು ಸ್ವಾಗತ ಮಾಡಿದೆವು. ಕಾಗೋಡಿನಲ್ಲಿ ಚಳುವಳಿ ಮಾಡಿ ಶ್ರಮ ಪಟ್ಟೆವು. ಆದರೆ ಅದು ಇವತ್ತಿನವರೆಗೂ ಸರಿಯಾಗಿ ಜಾರಿಯಾಗಿಲ್ಲ. ಮಂತ್ರಿಮಂಡಲದಲ್ಲಿರುವ ಮಾನ್ಯ ಚನ್ನಬಸಪ್ಪನವರಿಗೆ ಈ ವಿಷಯ ಚೆನ್ನಾಗಿ ಗೊತ್ತಿದೆ. ಇಂದಿನವರೆಗೆ ಎಷ್ಟು ಗೇಣಿದಾರರಿಗೆ ಖಾತೆ ಮಾಡಿದ್ದೀರಿ? ಇಂದಿನವರೆಗೂ ಕೂಡ ಕಾನೂನಿನಂತೆ ಒಂದು ನೋಟಿಫಿಕೇಷನ್ ಹೊರಡಿಸಿಲ್ಲ. ವೀರೇಂದ್ರ ಪಾಟೀಲರ ಸರಕಾರ ಮಾತ್ರ ಈ ಲೋಪಕ್ಕೆ ಕಾರಣವೆಂದು ಹೇಳುವುದಿಲ್ಲ ಕಳೆದ ಒಂದು ವರ್ಷದಿಂದ ಈಗಿರುವ ಆಡಳಿತ ಪಕ್ಷಕ್ಕೆ ಸಂಬಂಧಪಟ್ಟ ಸರಕಾರವೇ ಕೇಂದ್ರ ಸರಕಾರದಲ್ಲಿತ್ತು, ಅದೇ ಆಡಳಿತ ನಡೆಸಿದೆ. ಆವಾದರೂ ಸರಿಯಾದ ಕ್ರಮ ಕೈಕೊಳ್ಳಬಹುದಾಗಿತ್ತು. ಸಮಾಜವಾದವನ್ನು ಜಾರಿಗೆ ತರುವುದಾಗಿ ನೀವು ಹೇಳುವಾಗ ಈಗಲಾದರೂ ಕೂಡ ಇಷ್ಟು ಅವಧಿಯೊಳಗಾಗಿ ಗೇಣಿದಾರರಿಗೆ ಖಾತೆ ಮಾಡುತ್ತೇವೆಂದು ಮಾತು ಕೊಡಿ. ಗೇಣೀದಾರರ ಹೆಸರಿಗೆ ಜಾಗ್ರತೆ ಖಾತೆ ಮಾಡದಿದ್ದರೆ ಅದಕ್ಕಿಂತಲೂ ಹೆಚ್ಚಾದ ವಚನಭ್ರಷ್ಟತ್ವ ಬೇರೊಂದಿಲ್ಲ. ಮಾನ್ಯ ಅರ್ಥಿಕ ಸಚಿವರು ಇದಕ್ಕಾಗಿ ಆಯವ್ಯಯದಲ್ಲಿ ಹಣ ಮೀಸಲಾಗಿಟ್ಟಿರುವಂತೆ ಕಾಣುವುದಿಲ್ಲ. ಅಂದಮೇಲೆ ಭೂಸುಧಾರಣೆ ಎಷ್ಟರಮಟ್ಟಿಗೆ ಜಾರಿಗೆ ಬರುವುದು ಎಂಬ ವಿಚಾರದಲ್ಲಿ ಸಂಶಯವಿದೆ. ಆದುದರಿಂದ ಆ ವಿಚಾರದಲಿ ಸರಿಯಾದ ಘೋಷಣೆ ಮಾಡಬೇಕು. ಚುನಾವಣಾ ಕಾಲದಲ್ಲಿ ಪ್ರಧಾನಿಯವರು ಭಾಷೆ

ಕೊಟ್ಟಂತೆ ಅದಕ್ಕನುಸಾರವಾಗಿ ಭೂಸುಧಾರಣೆಯನ್ನು ಒಂದು ನಿರ್ದಿಷ್ಟ ಅವಧಿಯೊಳಗಾಗಿ ಕಾರ್ಯಗತ ಮಾಡಬೇಕು. ಒಂದು ಆರ್ಡರನ್ನು ಹೊರಡಿಸಿ ಎಲ್ಲಾ ರೈತರನ್ನೂ ಯಾವುದೇ ಸಂದರ್ಭದಲ್ಲೂ ಕೂಡ ಜಮೀನಿನಿಂದ ಬಿಡಿಸಬಾರದು ಎಂದು ತಿಳಿಸಬೇಕು. ಈಗ ಸಣ್ಣ ಹಿಡುವಳಿದಾರರಿಗೆ ಸಂಬಂಧಪಟ್ಟಂತೆ ಒಂದು ವಿಧಿ ಇದೆ. ಅವರಿಗೆ ಅರ್ಧ ಜಮೀನನ್ನು ಬಿಡಿಸಿಕೊಳ್ಳಲು ಅವಕಾಶವಿದೆ. ಆದರೆ ಅದರಂತೆ ನಡೆದರೆ ಯಾರಿಗೂ ಪ್ರಯೋಜನವಿಲ್ಲ ಕಾನೂನನ್ನು ಪರಿಶೀಲಿಸಿ ಇರುವ ಲೋಪವನ್ನು ಸರಿಪಡಿಸಿ ಪ್ರಗತಿದಾಯಕವಾಗಿ ಮಾಡಬೇಕು.

ಇನ್ನು ಎಕ್ಸೈಜು ಬಗ್ಗೆ ಹೆಚ್ಚುವರಿ ಬೇಡಿಕೆ ಇದೆ. ಇತ್ತೀಚೆಗೆ ಕಳ್ಳಬಟ್ಟಿ ಸಾರಾಯನ್ನು ಹಿಡಿಯಲು ಒಂದು ಹೊಸ ವ್ಯವಸ್ಥೆ ಮಾಡಿದ್ದಾರೆ. ಇದರಿಂದ ಹರಿಜನರು, ಗಿರಿಜನರು ಮುಂತಾದ ಬಡವರಿಗೆ ತೊಂದರೆಯಾಗಿದೆ, ಸಾರಾಯಿ ಅವರ ಮನೆಯಲ್ಲಿಲ್ಲದಿದ್ದರೂ ಸಹ ಅವರಿಗೆ ತೊಂದರೆ ಕೊಡುತ್ತಿದ್ದಾರೆ. ಅವರನ್ನು ಸುಮ್ಮನೆ ಹೆದರಿಸುತ್ತಾರೆ. ದಾರಿದ್ರ್ಯದಲ್ಲಿರುವ ಅವರು ಅಧಿಕಾರಿಗಳ ಕಿರುಕುಳದಿಂದ ನರಳಬೇಕಾಗಿದೆ. ಇದು ನಿಲ್ಲಬೇಕು.

ಚುನಾವಣೆಗೆ ಸಂಬಂಧಪಟ್ಟ ಬೇಡಿಕೆ ಇದೆ. ಇಷ್ಟು ದಿವಸಗಳಾದರೂ ಕೂಡ ವೈಜ್ಞಾನಿಕ ರೀತಿಯಿಂದ ಈ ಕೆಲಸ ನಡೆಯುತ್ತಿಲ್ಲ. ಓಟರುಗಳ ಪಟ್ಟಿ ಮಾಡಿರುವುದರಲ್ಲಿ ಇರುವವರು ಸತ್ತಿದ್ದಾರೆ ಊರಲ್ಲಿರುವವರು ಊರು ಬಿಟ್ಟಿದ್ದಾರೆ, ಎಷ್ಟೋ ಜನರ ಹೆಸರು ಬಿಟ್ಟುಹೋಗಿದೆ. ಪ್ರಜಾಪ್ರಭುತ್ವ ಉಳಿಯಬೇಕಾದರೆ ಪ್ರತಿಯೊಬ್ಬ ವಯಸ್ಕನಿಗೂ ಮತ ನೀಡಲು ಅವಕಾಶ ದೊರೆಯಬೇಕು, ಅದಕ್ಕೆ ತಕ್ಕಂತೆ ಕರಾರುವಾಕ್ಕಾದ ಪಟ್ಟಿ ಮಾಡಬೇಕು. ಈ ಸಲ ಮಾಡಿರುವಂಥ ಅವ್ಯವಸ್ಥಿತವಾದ ಪಟ್ಟಿ ಹಿಂದೆಂದೂ ಮಾಡಿರಲಿಲ್ಲ. ಪಟ್ಟಿ ತಯಾರಿಸುವಾಗ ಒಂದು ಡೂಪ್ಲಿಕೇಟ್ ಮನೆಯವರಿಗೆ ಕೊಟ್ಟರು ಹೆಸರು ಪಟ್ಟಿಯಲ್ಲಿಲ್ಲದಿದ್ದರೆ ಚುನಾವಣೆ ಕಾಲದಲ್ಲಿ ಆ ಡೂಪ್ಲಿಕೇಟನ್ನು ತೋರಿಸಿ ಓಟು ಮಾಡಬಹುದೆಂದು ತಿಳಿಸಿದ್ದರು. ಆದರೆ ಅನೇಕ ಕಡೆ ಪಟ್ಟಿಗಳಲ್ಲಿ ಹೆಸರೇ ಇಲ್ಲದೆ ಹೊಡೆದಾಟವಾಗಿದೆ, ಜನರಲ್ಲಿ ಅಶಾಂತಿಯುಂಟಾಗಿದೆ. ಆದುದರಿಂದ ಈಗಿರುವ ಪಟ್ಟಿಯನ್ನು ಕೂಡಲೇ ರದ್ದುಮಾಡಿ ಹೊಸಪಟ್ಟಿ ತಯಾರಿಸಬೇಕು.

ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿಗೆ ಬಂದರೆ ರಾಜ್ಯಪಾಲರ ಕಾರ್ಯದರ್ಶಿಗಳ ಕಛೇರಿಯನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆಮಾಡಲು ಹೆಚ್ಚು ಹಣ ವೆಚ್ಚವಾಗಿದೆ. ಇದು ಸಮಂಜಸವೇ? ದುಂದುವೆಚ್ಚ ಬೇಡವೆಂದು ಮೊದಲಿಂದಲೂ ಹೇಳುತ್ತಿದ್ದೇವೆ. ಈ ದೇಶದ 23 ಕೋಟಿ ಜನರು ಬಡತನದಲ್ಲಿ ಜೀವನ ಮಾಡುತ್ತಿದ್ದಾರೆ. ಹಾಗಿರುವಾಗ ಅನೇಕ ಬಾಬುಗಳಿಗೆ ವಿನಾಕಾರಣ ಹೆಚ್ಚು ಖರ್ಚುಮಾಡುವುದು ಸೂಕ್ತವಲ್ಲ. ಮಂತ್ರಿಗಳು ಕಡಮೆ ವೆಚ್ಚ ಮಾಡಬೇಕು. ನಮ್ಮದು ಬಡದೇಶ. ಆದುದರಿಂದ ರಾಜ್ಯಪಾಲರಿಗೆ, ಅವರ ಸಿಬ್ಬಂದಿ ವಗೈರೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದನ್ನು ದಯೆಯಿಟ್ಟು ನಿಲ್ಲಿಸಬೇಕು. ಭೋಗ ವಿಲಾಸಗಳಿಗೆ ಖರ್ಚು ಕಡಮೆಮಾಡಿ ಅದನ್ನು ಬೇರೆ ರೀತಿ ಸದ್ವಿನಿಯೋಗ ಮಾಡಲು ಅವಕಾಶವಿದೆ. ಇನ್ನು ಮುಂದಾದರೂ ದುಂದುವೆಚ್ಚ ಮಾಡಬಾರದು.

4-00 P.M.

ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್, ಈಚೆಗೆ ಸ್ವಲ್ಪ ಕೋರ್ಟುಗಳು ಜಾಸ್ತಿಯಾಗಿವೆ, ಕೋರ್ಟುಗಳು ಜಾಸ್ತಿಯಾಗುತ್ತಿವೆಯೇ ವಿನಹ ಕೋರ್ಟಿನಲ್ಲಿ ಬಹುಬೇಗ ಜನರಿಗೆ ನ್ಯಾಯ ಸಿಕ್ಕುತಾ ಇಲ್ಲ. ಸಾಧ್ಯವಾದಷ್ಟು ಜನರಿಗೆ ತಮ್ಮ ನೆರೆಯಲ್ಲಿ ಅನುಕೂಲ ಸಿಗುವ ರೀತಿಯಲ್ಲಿ ಪ್ರತಿ ತಾಲ್ಲೂಕಿಗೂ ಕೂಡ ಒಂದೊಂದು ಕೋರ್ಟನ್ನು ಒದಗಿಸಿಕೊಟ್ಟರೆ ಒಳ್ಳೆಯದು. ಸಾಗರದ ಒಂದು ಕೋರ್ಟಿಗೆ ಶಿಕಾರಿಪುರ, ಸೊರಬ ಹೊಸನಗರ ಈ ಮೂರು ಪ್ರದೇಶದ ಜನರು ಬಂದು ಹೋಗಬೇಕು ಅವರಿಗೆ ಎಷ್ಟು ತೊಂದರೆಯಾಗಬಹುದು ಎನ್ನುವುದನ್ನು ತಾವು ಊಹಿಸಬಹುದು. ಆದ್ದರಿಂದ ನೀವು ನ್ಯಾಯವನ್ನು ನೇರವಾಗಿ ಮತ್ತು ಸಾಮಾನ್ಯ ಜನರಿಗೆ ಹತ್ತಿರದಲ್ಲಿ ದೊರಕಿಸುವ ದೃಷ್ಟಿಯಿಂದ ನ್ಯಾಯಾಲಯಗಳನ್ನು ಪ್ರತಿ ತಾಲ್ಲೋಕಿನಲ್ಲೂ ಒದಗಿಸಿಕೊಡಬೇಕು. ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಒಂದು ಮಾತು. ನಮ್ಮಲ್ಲಿ ಮೈಸೂರು ವಿದ್ಯುಚ್ಛಕ್ತಿಮಂಡಲಿ ಇದ್ದು ಅದರ ಜೊತೆಗೆ ಮೈಸೂರು ಪವರ್ ಕಾರ್ಪೊರೇಷನ್ ಹೊಸದಾಗಿ ಆಗಿದೆ. ಈ ಪವರ್ ಕಾರ್ಪೊರೇಷನ್ ರದ್ದುಪಡಿಸಬೇಕೆಂದು ಈಗಾಗಲೇ ಚಳುವಳಿಯು ಕೂಡ ಹೊರಗಡೆ ನಡೆಯುತ್ತಿದೆ. ಪವರ್ ಕಾರ್ಪೊರೇಷನಿಗೆ ಎನ್ನತಕ್ಕದ್ದು ಅನಾವಶ್ಯಕವಾದ ಸಂಸ್ಥೆ, ಈಗಲಾದರೂ ಅದನ್ನು ಮುಚ್ಚಬೇಕು. ಹಿಂದೆ ಶರಾವತಿ ಪ್ರಾಜೆಕ್ಟಿನಲ್ಲಿ ಕೆಲಸಮಾಡುತ್ತಿದ್ದ ನೂರಾರು ಜನ ಕಾರ್ಮಿಕರು 10—15 ವರ್ಷಗಳು ಕೆಲಸ ಮಾಡಿದರೂ ಕೂಡ ಅವರು ಹಂಗಾಮಿ ಕಾರ್ಮಿಕರಾಗಿದ್ದಾರೆ. ಪವರ್ ಕಾರ್ಪೊರೇಷನ್

(ಶ್ರೀ ಕಾಗೋಡು ತಿಮ್ಮಪ್ಪ)

ಅಧ್ಯಕ್ಷರು ಯಾರು ಆಗಿದ್ದಾರೋ ಅವರು ಅವರಿಗೆ ಬೇಕಾದ ಜನರನ್ನು ತೆಗೆದುಕೊಂಡರೆ ಈಗ ಹಂಗಾಮಿ ಕೆಲಸ ಮಾಡುತ್ತಾ ಇರುವವರಿಗೆ ಸರ್ವೀಸ್ ಸೇರಿಸಿಕೊಡಬೇಕು. ಮತ್ತು ಹಿಂದೆ ಕೆಲಸ ಮಾಡಿರತಕ್ಕಂಥ ಜನರನ್ನು ಎಂ. ಎಸ್. ಇ. ಬಿ. ಗೆ ಸೇರಿಸುವುದೋ ಅಥವಾ ಪವರ್ ಕಾರ್ಪೊರೇಷನ್‌ಗೆ ಸೇರಿಸುವುದೇ ಎನ್ನುವುದು ತೀರ್ಮಾನವಾಗಿಲ್ಲ. ಇದೇ ಕಾರಣದಿಂದ ಹೊರಗೆ ಕಾರ್ಮಿಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇದೇ ಕಾರಣದಿಂದ ಗಲಭೆ ನಡೆದು 30—32 ಜನಗಳ ಮೇಲೆ ಕೇಸ್ ನಡೆದು ಅನೇಕ ಜನರನ್ನು ಸಸ್‌ಪೆಂಡ್ ಮಾಡಿದ್ದಾರೆ. ಈ ಪವರ್ ಕಾರ್ಪೊರೇಷನ್ ರದ್ದುಪಡಿಸಬೇಕು. ಇದಕ್ಕೆ ಹಣ ಹೇಗೆ ದೊರಕಿತು, ಇದಕ್ಕೆ ಯಂತ್ರಗಳನ್ನು ಹೇಗೆ ಒದಗಿಸಿ ಕೊಟ್ಟಿದ್ದಾರೆ, ಯಾವ ಬಾಬಿನಿಂದ ಹಣ ದೊರಕಿತು, ಎಲ್ಲಿಂದ ಬಂತು ಎನ್ನುವುದು ಗೊತ್ತಿಲ್ಲ. ಇದಕ್ಕೆ ಯಾವ ಬೆಲೆಯನ್ನು ಕೊಟ್ಟಿದ್ದಾರೆ ಎನ್ನುವುದು ಗೊತ್ತಿಲ್ಲ. ಹೆಚ್ಚು ಹಣ ಉಳಿತಾಯ ಮಾಡುವುದಕ್ಕೆ ಆಗದ ಪವರ್ ಕಾರ್ಪೊರೇಷನ್‌ಗೆ ಬೇರೆ ಇಲಾಖೆಯಿಂದ ಹಣ ತೆಗೆದುಕೊಂಡಿದ್ದಾರೆ. ಬಹಳ ಅನುಭವ ಇರತಕ್ಕಂತ ಜನರನ್ನು ತೆಗೆದುಕೊಂಡರೆ ಹಿಂದೆ ಇದ್ದಂಥ ಇಲಾಖೆಯಲ್ಲಿ ಕೆಲಸ ಮಾಡಲು ಸ್ವಲ್ಪ ಕಷ್ಟವಾಗುತ್ತದೆ, ಈ ಪವರ್ ಕಾರ್ಪೊರೇಷನ್ ಸಂಸ್ಥೆ. ಈ ಸಂಸ್ಥೆ ಏನು ಕೆಲಸಮಾಡಬೇಕೋ ಅದನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಿಸಿಕೊಳ್ಳಲುಸಾಧ್ಯವಿದೆ. ಈ ದೃಷ್ಟಿಯಿಂದ ಪವರ್ ಕಾರ್ಪೊರೇಷನ್ ರದ್ದುಮಾಡತಕ್ಕ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಬಹಳ ಒಳ್ಳೆಯದೆಂದು ನಾನು ಕಳಕಳಿಯಿಂದ ವಿನಂತಿಸಿ ಕೊಳ್ಳುತ್ತೇನೆ. ಇಷ್ಟು ಮಾತನ್ನು ತಮ್ಮ ಗಮನಕ್ಕೆ ತರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಸಭಾಧ್ಯಕ್ಷರೇ, ಆರ್ಥಿಕಮಂತ್ರಿಗಳು ಬೇಡಿರತಕ್ಕಂಥ ಈ ಬೇಡಿಕೆಯ ಬಗ್ಗೆ ಇದು ತಾತ್ಕಾಲಿಕ ಬೇಡಿಕೆಯಾದರೂ ಕೂಡ ನಾನು ಆರಿಸಿಬಂದಿರತಕ್ಕ ಪ್ರದೇಶದ ಜನಗಳ ಪರವಾಗಿ ನನ್ನ ಅಭಿಪ್ರಾಯ ಹೇಳಬೇಕಾಗಿದೆ. ನನ್ನ ಕ್ಷೇತ್ರ ಹೆಸರಿಗೆ ಮಾತ್ರ ಗಾಂಧಿನಗರವಾದರೂ ಅದು ಸುಮಾರು 85 ಪರ್‌ಸೆಂಟ್ ಹರಿಜನರು, ಬಡವರು ಮತ್ತು ಕಾರ್ಮಿಕರು ಇರತಕ್ಕಂಥ ಸ್ಥಳವಾಗಿದೆ. ಈ ತಾತ್ಕಾಲಿಕವಾದ ಬೇಡಿಕೆಗಳನ್ನು ನಾನು ಕೂಡಾ ತಾತ್ಕಾಲಿಕವಾಗಿ ಒಪ್ಪುತ್ತೇನೆ. ಇದರಲ್ಲಿ 76 ಐಟಮ್‌ಗಳು ಇವೆ. ಈ 76 ಐಟಮ್‌ಗಳಲ್ಲಿ ಒಂದು ಐಟಮ್ ಕೂಡ ಕಾರ್ಮಿಕರ, ಬಡವರ ಅಥವಾ ಹರಿಜನರ ಬಗ್ಗೆ, ಮತ್ತು ಬೆಂಗಳೂರಿನ ಜನರಬಗ್ಗೆ ಇಲ್ಲ. 25 ವರ್ಷಗಳಾದರೂ ಕೂಡ ಈ ಸಪ್ಲಿಮೆಂಟರಿ ಬಡ್ಜೆಟ್ ತರುವಾಗ ಆರ್ಥಿಕ ಮಂತ್ರಿಗಳು ತಂದರೋ ? ಅಥವಾ ಹಿಂದಿನ ಅಧಿಕಾರಿಗಳು ಬರೆದಿದ್ದಂಥಾದನ್ನು ನಮ್ಮ ಮಂತ್ರಿಗಳು ನಮ್ಮ ಮುಂದೆ ಇಟ್ಟಿದ್ದಾರೋ ಎನ್ನುವುದು ನನಗಂತೂ ಗೊತ್ತಿಲ್ಲ. ನಾನು ಬಹಳ ಪಶ್ಚಾತ್ತಾಪದಿಂದ ಹೇಳುತ್ತೇನೆ, ಯಾರ ಮನಸ್ಸು ನೋಯಿಸಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಸುಮಾರು ಮೂರನೇ ಒಂದು ಭಾಗದಷ್ಟು ವರಮಾನ ಬರುವ ಬೆಂಗಳೂರು ನಗರವನ್ನು ಒಳಹೊಕ್ಕು ನೋಡಿದ್ದರೆ ಇಂತಹ ಸಪ್ಲಿಮೆಂಟರಿ ಬಡ್ಜೆಟ್ ನಮ್ಮ ಮುಂದೆ ಬರುತ್ತಿರಲಿಲ್ಲ. ಇದು ಬಡವರ ಬಗ್ಗೆ ಒಂದು ಮಾತನ್ನೂ ಹೇಳದೆ ಇರುವಂತ ಸಪ್ಲಿಮೆಂಟರಿ ಬಡ್ಜೆಟ್ ಇದು ಯಾರು ತಂದರೋ ? ಇದು ನಾವು ಒಪ್ಪತಕ್ಕಂಥ ಸಮಾಜವಾದಿ ಬಡ್ಜೆಟ್ ಆಗಲು ಸಾಧ್ಯವಿಲ್ಲ. ಆರ್ಥಿಕ ಮಂತ್ರಿಗಳ ಮನಸ್ಸನ್ನು ನೋಯಿಸಬೇಕೆನ್ನುವ ದೃಷ್ಟಿಯಿಂದ ನಾನು ಈ ಮಾತುಗಳನ್ನು ಹೇಳುತ್ತಿಲ್ಲ. ಈಗ ಮಕ್ಕಳು ಹುಟ್ಟುವಾಗ ಕೆಲವು ಎರಡು ಪೌಂಡು, ಕೆಲವು 11 ಪೌಂಡು ಇರುತ್ತವೆ. ಈ ರೀತಿ ಹುಟ್ಟುವುದಕ್ಕೆ ಕಾರಣವೇನು ? ಆರೋಗ್ಯವಾಗಿದ್ದರೆ ಈ ರೀತಿ 11 ಪೌಂಡು, 2 ಪೌಂಡು ತೂಕದ ಮಕ್ಕಳು ಹುಟ್ಟುತ್ತಿದ್ದವೆ ! ಇದಕ್ಕೆ ಕಾರಣವೇನು ಎಂಬುದು ಗೊತ್ತಿಲ್ಲ. ಇದನ್ನು ನಾವು ಯೋಚನೆ ಮಾಡಬೇಕು, ಯಾರ ಆರೋಗ್ಯವನ್ನು ಸರಿಪಡಿಸುವುದಕ್ಕೆಲಕ್ಷಾಂತರ ರೂಪಾಯಿಗಳನ್ನು ಕೇಳಿದ್ದಾರೋ ಎನ್ನುವುದು ಅರ್ಥವಾಗುತ್ತಿಲ್ಲ. 2 ಪೌಂಡ್ ಮಕ್ಕಳನ್ನು ಬೆಳೆಸಿದರೆ ಅವರು ದೊಡ್ಡವರಾದಮೇಲೆ ಅವರ ಮೇಲೆ ಹೇರತಕ್ಕ 50 ಪೌಂಡ್ ಭಾರವನ್ನು ಹೊರುವುದಕ್ಕಾಗುವುದಿಲ್ಲ. ಈ ರೀತಿ ಮಕ್ಕಳು ಯಾವಾಗ ಅನಾರೋಗ್ಯದಿಂದ ಹುಟ್ಟುತ್ತವೆ ಆಗ ದೇಶವೂ ಅನಾರೋಗ್ಯವಾಗುತ್ತದೆ. ಯಾವಾಗ ದೇಶದಲ್ಲಿ ಹುಟ್ಟತಕ್ಕ ಮಕ್ಕಳು ಆರೋಗ್ಯವಾಗಿ ಹುಟ್ಟುತ್ತಾರೆ ಆವಾಗ ದೇಶವು ಆರೋಗ್ಯವಾಗಿ ಇರುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನಮ್ಮ ಈ ಬಡ್ಜೆಟ್ ನಮ್ಮ ಮುಂದೆ ಬರಬೇಕೆಂದು ನಾನು ಬಯಸುತ್ತೇನೆ. ನಾನು ಕಾರ್ಮಿಕರ ನಡುವೆ ಹುಟ್ಟಿದವನು. ಕಾರ್ಮಿಕರ ಮಧ್ಯೆಯೇ 40 ವರ್ಷಗಳ ಕಾಲ ಬೆಳೆದಂತ ಮನುಷ್ಯ, ಅಷ್ಟುಮಾತ್ರವೇ ಅಲ್ಲ, ರಾಜಕೀಯದಲ್ಲಿಯೂ ಅನೇಕ ವರ್ಷಗಳ ಕಾಲ ಕಳೆದಿದ್ದೇನೆ, ಅನೇಕರ ಭಾಷಣಗಳನ್ನು ಕೇಳಿದ್ದೇನೆ, ಅನೇಕ ಪಕ್ಷಗಳಲ್ಲಿರುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ನಾನು ಖುದ್ದಾಗಿ ನೊಂದವನು. ಆದ್ದರಿಂದ ಸಂಕಟ ಹೆಚ್ಚಾಗಿ ಆಗುತ್ತದೆ. ನನ್ನ ಸಂಕಟವನ್ನು ತಮ್ಮ ಮುಂದೆ ತೋಡಿಕೊಳ್ಳು

ವಾಗ ಒಬ್ಬಬ್ಬರ ಮನಸ್ಸಿಗೆ ನೋವುಂಟಾದರೆ ಅದನ್ನು ತಾವು ಸಮಾಜದ ದೃಷ್ಟಿಯಿಂದ ಸ್ವಾಗತಿಸ ಬೇಕು, ನಾನು ಹೇಳತಕ್ಕಂತ ಒಂದು ಅಂಶ ಈ 76 ಐಟೆಮ್‌ಗಳಲ್ಲಿ ಕಾರ್ಮಿಕರ ಬಗ್ಗೆಯಾಗಲಿ, ಕಾರ್ಮಿಕರ ಅಭಿವೃದ್ಧಿಯ ಬಗ್ಗೆಯಾಗಲಿ ಒಂದು ಅಂಶವೂ ಇಲ್ಲ. 71-72ರ ಬೇಡಿಕೆಯ ಬಗ್ಗೆ ಐಟೆಮ್ ನಂಬರ್ 22ರಲ್ಲಿ Advances and Loans ಬಾಬಿನಲ್ಲಿ 25,95,300 ರೂ. ಇದೆ. ಈ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟರೆ ಮುಂದೆ ಮಾತನಾಡಲು ಅವಕಾಶವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಸಪ್ಲಿಮೆಂಟರಿ ಬಡ್ಜೆಟ್ ಪೇಜ್ ನಂಬರ್ 48 ಡಿಮ್ಯಾಂಡ್ ನಂಬರ್ 54 ರಲ್ಲಿ ನೋಡಿದರೆ ವಿವರಗಳು ಗೊತ್ತಾಗುತ್ತವೆ.

ಶ್ರೀ ಕೆ. ಶ್ರೀರಾಮುಲು.—ತಮಗೆಲ್ಲಾ ಗೊತ್ತಿರಬಹುದು ಬೆಂಗಳೂರು ಜಿಲ್ಲೆಯಲ್ಲಿರುವ ಬೆಂಗಳೂರು ಸಿಟಿಯಲ್ಲಿ ಹರಿಜನರೇ ಹೆಚ್ಚಾಗಿರುವ ಗೋಪಾಲಪುರ ಎಂಬ ಪ್ರದೇಶ ಇದೆ, ಇದರಲ್ಲಿ ರೋಡು ಮಾಡಿದ್ದಾರೆ ಇದು ಯಾವ ರೀತಿ ಇದೆ ಎಂದರೆ ಇದು ಸುಮಾರು 5—6 ಅಡಿಗಳಿರುವ ರೋಡು, ರೋಡು ಪಕ್ಕದಲ್ಲಿ ಎದುರು ಬದಿರಿಗೆ ಮನೆಗಳು ಇರುತ್ತವೆ, ಒಂದು ಮನೆಯಿಂದ ಮೋರಿಗೆ ಉಗಳಿದರೆ ಇನ್ನೊಂದು ಮನೆ ಮುಂದೆ ಹಾರುತ್ತದೆ, ಇಂತಹ ಹರಿಜನರೇ ಇರುವ ಗುಡಿಸಲುಗಳ ಜನರಿಗೆ ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಏನಾದರೂ ಅವಕಾಶ ಕೊಟ್ಟಿದ್ದಾರೆಯೇ ಎಂದು ಕೇಳಬೇಕಾಗಿದೆ.

ಚೇರ್ಮನ್ನರು.—ಇವೆಲ್ಲಾ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಬರುವುದಿಲ್ಲ, ಇಲ್ಲಿ ಕೊಟ್ಟಿರುವ ಬಡ್ಜೆಟ್ಟುಗಳ ಐಟಂಗಳು ಏನಿವೆ ಅವನ್ನು ಯಾವ ರೀತಿ ಖರ್ಚು ಮಾಡಿದ್ದಾರೆ ಅದರ ವಿವರಗಳನ್ನು ಕೊಟ್ಟಿದ್ದಾರೆ, ಇವೆಲ್ಲಾ ಖರ್ಚಾಗಿರುವುದು, ಇದಕ್ಕೆ ಸಭೆ ಮಂಜೂರಾತಿ ಕೊಡಬೇಕು. ಇದರ ಬಗ್ಗೆ ತಾವು ಮಾತನಾಡುವುದು.

ಶ್ರೀ ಕೆ. ಶ್ರೀರಾಮುಲು.—ಖರ್ಚು ಮಾಡಬೇಕಾಗಿರುವುದಕ್ಕೆ ಖರ್ಚು ಮಾಡದೆ ಇತರ ಬಾಬುಗಳಿಗೆ ಏಕೆ ಖರ್ಚು ಮಾಡಿದ್ದಾರೆ ಎಂಬುದನ್ನು ಹೇಳುವಾಗ ಇದನ್ನೂ ಏಕೆ ಮಾಡಬಾರದು ಎಂದು ಸಲಹೆ ಮಾಡುತ್ತಿದ್ದೇನೆ, ಸುಮಾರು ಮೂರನೇ ಒಂದು ಭಾಗದಷ್ಟು ಜನ ಅದರಲ್ಲೂ ಹಿಂದೆ ಬಿದ್ದಿರುವ ಹರಿಜನರ ಗುಡಿಸಲುಗಳು ಹಿಂದೆ 64 ಗುಡಿಸಲುಗಳು ಇದ್ದದ್ದು ಇಂದು ನಗರದಲ್ಲಿ 146 ಗುಡಿಸಲುಗಳಾಗಿವೆ, ಇಂತಹ 144 ಗುಡಿಸಲುಗಳಲ್ಲಿರುವ ಜನಕ್ಕೆ ಏನೂ ಮಾಡಲಿಲ್ಲವೇ? ದಿನೇ ದಿನೇ ಇಂತಹ ಗುಡಿಸಲುಗಳು ಬೆಳೆಯುತ್ತಲೇ ಬರುತ್ತಿವೆ, ಬೆಂಗಳೂರಿಗೆ ಇದರಿಂದ ಪ್ರಾಶಸ್ತ್ಯ ಬರುತ್ತಿದೆ, ಯಾವಾಗಲೂ ಬೆಂಗಳೂರು ಸುಂದರ ನಗರ ಎಂದು ಹೇಳಿಕೊಂಡು ದೊಡ್ಡ ದೊಡ್ಡ ವ್ಯಕ್ತಿಗಳು ಬಂದಾಗ ಲಾಲ್‌ಬಾಗು ಹಾಗೂ ಮೋತಿ ಮಹಲ್‌ಗಳೆಂದು ಅವರಿಗೆ ತೋರಿಸಿಕೊಂಡು ಹೋಗುತ್ತಿದ್ದಾರೆ, ಆದರೆ ಬರೀ ಹರಿಜನರೇ ಇರುವ ಕೊಳಚೆ ಪ್ರದೇಶಗಳ ಕಡೆ ಸರಕಾರದ ಗಮನ ಕೊಡುತ್ತಿಲ್ಲ, ಇವರನ್ನು ಅಭಿವೃದ್ಧಿಗೆ ತರಲು ಯಾವ ರೀತಿ ಯೋಜನೆ ಮಾಡಿ ಖರ್ಚುಮಾಡುತ್ತೀರಿ? ಬೆಂಗಳೂರು ನಗರದಲ್ಲಿ ಬಡಜನರೇ ಹೆಚ್ಚಾಗಿರುವ ಕಾರ್ಮಿಕ ವರ್ಗದವರು ಇದ್ದಾರೆ. ಅದರಲ್ಲೂ ಹರಿಜನರಿಗಾಗಿ ಕಳೆದ 25 ವರ್ಷಗಳಿಂದ ಏನೂ ಅನುಕೂಲಗಳು ಆಗಲಿಲ್ಲ, ಹಿಂದುಳಿದಿರುವ ವರ್ಗಗಳಿಗೆ ಮುಖ್ಯವಾದ ವಸತಿ ನೀರು ಹಾಗೂ ಇನ್ನಿತರ ಸೌಕರ್ಯಗಳನ್ನು ಕೊಡಲು ಬಡ್ಜೆಟ್ಟಿನಲ್ಲಿ ಹೆಚ್ಚು ಅವಕಾಶ ಮಾಡಿಲ್ಲ, ಮುಂದೆ ಬಡ್ಜೆಟ್ಟು ಬರುವಾಗ ನೋಡಬೇಕು, ತಾತ್ಕಾಲಿಕವಾಗಿ ಇಲ್ಲಿ ಬಂದಿರುವ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು ' ಎಂದು ನಮ್ಮ ರಾಷ್ಟ್ರಕವಿ ಕುವೆಂಪುರವರು ಹೇಳಿರುವ ವಾಣಿಯಲ್ಲಿ ನಾನು ನಂಬಿಕೆಯುಳ್ಳವನು. ಪೂಜ್ಯ ಗುರುಗಳಾದ ಶ್ರೀಮಾನ್ ಶಾಂತವೇರಿ ಗೋಪಾಲಗೌಡರು ಬಂದಂತಹ ತೀರ್ಥಹಳ್ಳಿಯಿಂದ ಬರಿದಿರತಕ್ಕ ನಾನು ಪ್ರಥಮ ಬಾರಿಗೆ ಈ ಸನ್ಮಾನ್ಯ ಸಭೆಯಲ್ಲಿ ಮಾತನಾಡಲು ನಿಂತಿದ್ದೇನೆ, ನನ್ನ ನೆನಪು ನನ್ನ ಪೂಜ್ಯ ಗುರುಗಳಾದ ಶ್ರೀ ಗೋಪಾಲಗೌಡ ಶಾಂತವೇರಿಯವರ ಕಡೆಗೆ ನನ್ನ ಮನಸ್ಸು ಹೋಗುತ್ತಿದೆ, ಅವರನ್ನು ಪ್ರಥಮವಾಗಿ ನಮಿಸಿ ನನ್ನ ಎರಡು ಮಾತುಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಸಮಾಜವಾದ ಎಂದು ಸಾರಿಕೊಂಡು ಈ ಬಾರಿ ಚುನಾವಣೆಯಲ್ಲಿ ದಾರಿ ಮಾಡಿಕೊಂಡು ಅಧಿಕಾರದ ಗದ್ದುಗೆಯನ್ನು ಹಿಡಿದುಕೊಂಡು ಏರಿ ಕುಳಿತಿರುವ ಇಂದಿರಾ ಕಾಂಗ್ರೆಸ್ಸು ಅಥವಾ ಆಡಳಿತ ಕಾಂಗ್ರೆಸ್ಸು ಇಂದು ಈ ಸಭೆಯಲ್ಲಿ ಮೂರು ತಿಂಗಳ ಆಯವ್ಯಯ ಪತ್ರವನ್ನು ಸಭೆಯ ಮುಂದೆ ಮಂಡನೆ ಮಾಡಿದೆ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಇದ್ದ ಕಾಂಗ್ರೆಸ್ಸೇ ಇಂದು ಇಂದಿರಾ ಕಾಂಗ್ರೆಸ್ಸು ಹಾಗೂ ಸಿಂಡಿಕೇಟು ಎಂದು ಆಗಿದೆ, ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ, ಒಟ್ಟಿನಲ್ಲಿ ಕಾಂಗ್ರೆಸ್ಸು ಸರಕಾರ ಕಳೆದ 25 ವರ್ಷಗಳಿಂದಲೂ ಬಂದರೂ ಇನ್ನೂ ಬಡತನವನ್ನು ಹೋಗಲಾಡಿಸಲು ಆಗಲಿಲ್ಲ, ದೇಶ

(ಶ್ರೀ ಕೋಣಂದೂರು ಲಿಂಗಪ್ಪ)

ದಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸಲು ಆಗಲಿಲ್ಲ, ಇಂತಹ ಒಂದು ಪರಂಪರೆ ಇಲ್ಲಿ ಬೆಳೆದು ಬಂದಿವೆ, ಈಚೆಗೆ ಒಂದು ಹೊಸ ಹೆಸರನ್ನು ಕೇಳುತ್ತಿದ್ದೇವೆ, ಅದು ಆಡಳಿತ ಕಾಂಗ್ರೆಸ್ಸು, ಸಮಾಜವಾದಿ ಕಾಂಗ್ರೆಸ್ಸು ಎಂದು ಹೇಳಿಕೊಂಡು ಮಾಡುತ್ತಿರುವ ಗರೀಬಿ ಹಠಾವೋ ಎಂದು ಹೇಳುವ ಘೋಷಣೆಗಳಿಂದ ಬಡತನವೇನೂ ಹೋಗಲಿಲ್ಲ ಮತ್ತು ಕಾರ್ಯತಃ ಯಾವುದೇ ರೀತಿಯ ಕಾರ್ಯಕ್ರಮವನ್ನು ಸರಕಾರ ಕೈಗೊಳ್ಳದೆ ಇರತಕ್ಕದ್ದು ನಮಗೆಲ್ಲರಿಗೂ ಗೊತ್ತಿದೆ, ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ನಮ್ಮ ಜನರ ಜೀವನವೇ ಸಾಕ್ಷಿಯಾಗಿದೆ, ನಮ್ಮ ಜನರು ಆರ್ಥಿಕವಾಗಿ ಹಿಂದುಳಿದಿದ್ದಾರೆ. ಮತ್ತು ನಮ್ಮ ಕನ್ನಡ ನಾಡಿನಲ್ಲಿ ಲಕ್ಷೋಪಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆ, ಸಮಾಜವಾದವನ್ನು ತರುತ್ತೇವೆ ಎಂದು ಏನು ಹೇಳುತ್ತಿದ್ದಾರೋ ಅದರಂತೆ ಈ ಆಯವ್ಯಯ ಪತ್ರದಲ್ಲಿ ನಿರುದ್ಯೋಗವನ್ನು ನಿವಾರಣೆ ಮಾಡಲು ಏನೇನೂ ಮಾಡಿಲ್ಲ ಎನ್ನುವುದು ಕಂಡುಬರುತ್ತಿದೆ, ಇಂದು ನಮ್ಮ ದೇಶದಲ್ಲಿ ಎಷ್ಟು ಜನ ತರುಣ ತರುಣಿಯರು ನಿರುದ್ಯೋಗಿಗಳಾಗಿದ್ದಾರೆ. ವಿದ್ಯಾವಂತರನ್ನಾಗಿ ಮಾಡಲು ಅವರ ತಂದೆ ತಾಯಿಗಳು ಎಷ್ಟು ಕಷ್ಟಪಟ್ಟಿದ್ದಾರೆ, ಇಂತಹ ವಿದ್ಯಾವಂತ ನಿರುದ್ಯೋಗಿಗಳಿಗೆ ಯಾವ ರೀತಿ ಉದ್ಯೋಗವನ್ನು ಕೊಟ್ಟು ನಿಮ್ಮ ಸಮಾಜವಾದವನ್ನು ಜಾರಿಗೆ ತರುತ್ತೀರಿ ? ಇಂತಹ ಸಮಾಜವಾದವನ್ನು ಜಾರಿಗೆ ತರುವ ಬಗ್ಗೆ ಪರಿಶೀಲನೆ ಮಾಡಿ ಯೋಜನೆ ಮಾಡಬೇಕು, ಹೀಗೆ ಈ ನಿರುದ್ಯೋಗದ ಸಮಸ್ಯೆಯನ್ನು ಬಿಟ್ಟರೆ ಮುಂದೆ ಇದು ಬೃಹದಾಕಾರವಾಗಿ ಬೆಳೆಯುತ್ತದೆ, ಈಗಾಗಲೇ ಸುಮಾರು 40 ಲಕ್ಷ ಮಂದಿ ರಿಜಿಸ್ಟರು ಮಾಡಿಕೊಂಡಿದ್ದಾರೆ ಎಂದು ತಿಳಿದು ಬರುತ್ತದೆ. ಇಂದು ಈ ನಿರುದ್ಯೋಗವನ್ನು ಹೀಗೆ ಬೆಳೆಯಲು ಬಿಟ್ಟರೆ ಮಹಾತ್ಮ ಗಾಂಧಿಯವರು ಇದ್ದಂತಹ ರಾಜ್ಯದಲ್ಲಿ ಇಂತಹ ಜನರಿಂದ ರಕ್ತ ಕ್ರಾಂತಿಯು ಆಗುವ ಕಾಲ ಬರುವ ಕಾಲ ಇಲ್ಲದೇ ಇಲ್ಲ, ಇಂದು ಜನ ನಿಮ್ಮ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದಾರೆ, ಇಂದು ದೇಶದಲ್ಲಿ ನಿರುದ್ಯೋಗಿಗಳಾಗಿರುವ ಜನ ದಿನೇ ದಿನೇ ಹೆಚ್ಚುತ್ತಿದ್ದಾರೆ. ಇನ್ನೆಷ್ಟು ಕಾಲ ಇವರುಗಳು ಹೊರಗಡೆ ಹೋಗಿ ಇರಬೇಕು ? ಮತ್ತು ನಿಮಗೆಲ್ಲಾ ತಿಳಿದಿರುವಂತೆ ಇಂದು ದೇಶದಲ್ಲಿ ಕಳ್ಳತನ, ದರೋಡೆ, ಲೂಟಿ ಇತ್ಯಾದಿಗಳು ಹೆಚ್ಚಾಗುತ್ತಿವೆ, ಇಂತಹ ಒಂದು ದೊಡ್ಡ ಸಮಸ್ಯೆ ಬಗ್ಗೆ ಸರಿಯಾಗಿ ವಿಚಾರ ಮಾಡಿ ನೋಡಬೇಕಾಗಿದೆ, ದೇಶದಲ್ಲಿರುವ ಬಡತನವ ನಿವಾರಣೆಗೆ ಇಂದು ತಂದಿರುವ ಆಯವ್ಯಯ ಪತ್ರದಲ್ಲಿ ನಮಗೇನೂ ಕಾಣುವುದಿಲ್ಲ, ನನ್ನ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ಮಲೆನಾಡಿನಿಂದ ಬಂದಂತಹವರು. ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದವನು, ಮಲೆನಾಡಿನ ಸಮಸ್ಯೆಯ ಬಗ್ಗೆ ಈ ಸರಕಾರ ಯಾವ ರೀತಿಯೂ ಗಮನ ಕೊಡಲಿಲ್ಲ, ಹಿಂದೆ ಮಲೆನಾಡು ಅಭಿವೃದ್ಧಿ ಸಮಿತಿ ಎಂದು ಮಾಡಿದ್ದರು, ಆ ಸಮಿತಿಯವರು ಕೂಡ ಏನೂ ಮಾಡಲಿಲ್ಲ. ಆದರೆ ಆ ಸಮಿತಿಯಲ್ಲಿ ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಇದ್ದರು. ಇವರು ಕಾಂಗ್ರೆಸ್ಸು ಅಧ್ಯಕ್ಷರಾಗಿದ್ದಾಗ ಶಿವಮೊಗ್ಗಾ ಜಿಲ್ಲೆಗೆ ಬಂದಾಗ ಅವರನ್ನು ಅಂಬಾರಿ ಮೇಲೆ ಕೂರಿಸಿ ಅವರ ಜಂಬೂಸವಾರಿ ಮಾಡಿಸಿದರೇ ಹೊರತು ಅವರು ಮಲೆನಾಡಿನ ಯಾವ ಅಭಿವೃದ್ಧಿ ಕೆಲಸಗಳನ್ನೂ ಮಾಡಲಿಲ್ಲ, ಅಂದು ಅವರನ್ನು ಜಂಬೂಸವಾರಿ ಮಾಡಿಸಿದವರು ನಿಮ್ಮ ಮಂತ್ರಿಮಂಡಲದಲ್ಲಿ ಇದ್ದಾರೆ ಆದರೆ ನಿಜವಾಗಿಯೂ ನೋಡಿದರೆ ನಮ್ಮ ಮಲೆನಾಡಿನ ಅಭಿವೃದ್ಧಿ ಏನೇನೂ ಆಗಲಿಲ್ಲ, ನಮ್ಮ ರಾಜ್ಯದಲ್ಲೇ ಎಂದರೆ ಮಲೆನಾಡಿನ ಮುಖ್ಯ ಜಿಲ್ಲೆಯಾದ ಶಿವಮೊಗ್ಗಾದಲ್ಲೇ ನಮ್ಮ ಕವಿಗಳು ಹುಟ್ಟಿ ಹಾಡಿರುವುದು. "ಮಲೆನಾಡದು ಮಳೆಯ ಬೀಡದು, ಸಿರಿಯ ಚೆಲುವಿನ ಗೂಡದು ಅಲ್ಲಿ ಸಗ್ಗವೇ ಸೂರೆಹೋಗಿದೆ ನಂದನವೆನಾಡೆಲ್ಲವು" ಎಂದಿದ್ದಾರೆ. ಮಲೆನಾಡಿನಲ್ಲಿ ಸಂಚಾರಿ ಮಾರ್ಗಗಳು, ಪಶುವೈದ್ಯಶಾಲೆಗಳು, ಆಸ್ಪತ್ರೆಗಳು ಮತ್ತು ಶಾಲೆಗಳು ಇವುಗಳ ಅನುಕೂಲತೆ ನಮ್ಮ ಭಾಗದಲ್ಲಿ ಸಾಕಷ್ಟು ಇಲ್ಲ. ಹಿಂದೆ ಮಾಡಿಸಿದಂಥ ಅಭಿವೃದ್ಧಿ ಕೆಲಸಗಳನ್ನು ಬಿಟ್ಟರೆ ಅಲ್ಲಿ ಇದುವರೆಗೆ ಯಾರೂ ಕಣ್ಣು ಹಾಕಿಲ್ಲ ಮತ್ತು ಗಮನ ಕೊಟ್ಟಿಲ್ಲ. ಒಂದು ಗ್ರಾಮದಲ್ಲಿ ಒಂದು ಶಾಲೆಯ ಕಟ್ಟಡವನ್ನು ಕಟ್ಟಬೇಕಾದರೆ ಗ್ರಾಮಸ್ಥರು ತಮ್ಮ ವಂತಿಗೆಯನ್ನು ಕೊಡಬೇಕೆಂದು ಸರ್ಕಾರದ ಆಜ್ಞೆ ಇದೆ. ನಮ್ಮ ಮಲೆನಾಡಿನ ಗ್ರಾಮಗಳನ್ನು ತೆಗೆದುಕೊಂಡರೆ, ಊರಿಗೊಂದೇ ಮನೆ ಇರುತ್ತದೆ. ಅವರೂ ಕೂಡ ಬಡವರಿರುತ್ತಾರೆ. ಇಂತಹವರು ವಂತಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅಂತಹ ಪ್ರದೇಶಗಳಲ್ಲಿ ಸರ್ಕಾರದವರೇ ಪೂರ್ತಿ ಹಣವನ್ನು ಖರ್ಚು ಮಾಡಿ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ಮತ್ತು ಪಶುವೈದ್ಯಶಾಲಾ ಕಟ್ಟಡವನ್ನು ಮತ್ತು ಆಸ್ಪತ್ರೆ ಕಟ್ಟಡಗಳನ್ನು ಸಹ ಕಟ್ಟಿಸಿಸುವುದಕ್ಕೆ ಸರ್ಕಾರದವರು ತಮ್ಮ ಸಂಪೂರ್ಣವಾದ ನೆರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಅಭಿವೃದ್ಧಿ ಕೆಲಸಗಳು ಹೆಚ್ಚು ಹೆಚ್ಚು ಆಗಬೇಕಾಗಿದೆ.

ಮಾನ್ಯ ಕಾಗೋಡ ತಿಮ್ಮಪ್ಪನವರು ಮಾತನಾಡುವಾಗ ಭೂಸುಧಾರಣೆಯ ಬಗ್ಗೆ ಹೇಳಿದರು. ಮತ್ತು ಗೇಣಿದಾರರ ಬಗ್ಗೆ ಹೇಳಿದರು. ಅದಕ್ಕೆ ಪೂರಕವಾಗಿ ನಾನು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಭೂಹೀನರ ಸಮಸ್ಯೆ ಎಂಬುದು ನಮ್ಮ ಮಲೆನಾಡಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿಯೇ ಇದೆ. ಭೂಹೀನರು ತುಳಿತಕ್ಕೆ ಸಿಕ್ಕಿ ಪಾತಾಳಕ್ಕೆ ಹೋಗಿದ್ದಾರೆಯೇ ವಿನಃ ಅವರ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಶ್ರೀಮಂತ ವರ್ಗದ ಭೂಮಾಲೀಕರು ಹಿಂದುಳಿದ ಜನರಿಗೆ, ಹರಿಜನ ಗಿರಿಜನರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಯಾವುದೇ ರೀತಿಯ ಉದ್ಧಾರದ ಮಾರ್ಗವನ್ನು ತೋರಿಸದೆ, ತಾವೇ ಮುಂದುವರಿಯುತ್ತಿದ್ದಾರೆ. ಭೂಹೀನರ ಸಮಸ್ಯೆ ಎಂಬುದು ದಾರುಣ ಸಮಸ್ಯೆಯಾಗಿದೆ. ಭೂಹೀನರ ಸಮಸ್ಯೆ ನಮ್ಮ ಮಲೆನಾಡಿನಲ್ಲಿ ಜಾಸ್ತಿ ಇದೆ. ನಮ್ಮ ಸೋಷಿಯಲಿಸ್ಟ್ ಪಾರ್ಟಿಯವರು ಸೇತು ಹಿಮಾಚಲ ಪರ್ಯಂತ ಕಳೆದ ಎರಡು ವರ್ಷಗಳ ಹಿಂದೆ ಭೂಆಕ್ರಮಣ ಚಳುವಳಿಯನ್ನು ನಡೆಸಿದರು. ಆ ಸಮಯದಲ್ಲಿ ಯಾರು ಭೂಹೀನರು ಇದ್ದಾರೆ, ಯಾರು ಕೃಷಿ ಕಾರ್ಮಿಕರು ಇದ್ದಾರೆ, ಯಾರು ಭೂಮಿಯನ್ನೇ ನಂಬಿಕೊಂಡಿದ್ದಾರೆ ಅಂತಹ ರೈತಾಪಿ ಬಡವರ್ಗದ ಜನರು ಸರ್ಕಾರೀ ಜಮೀನನ್ನು ಆಕ್ರಮಿಸಿಕೊಂಡರು. ಅಂತಹ ಜಮೀನನ್ನು ಅವರಿಗೇ ವಹಿಸಿಕೊಡುವ ಬಗ್ಗೆ ಸರ್ಕಾರದವರು ಇದುವರೆಗೆ ಯಾವ ರೀತಿಯ ಕೃಪೆಯನ್ನು ತೋರಿಸಿಲ್ಲ. ಆದರೆ ಇದೇ ಸಮಯದಲ್ಲಿ ಈ ಬಡ ಭೂರಹಿತರ ಹೆಸರಿನಲ್ಲಿ ಅನೇಕ ಜನ ಶ್ರೀಮಂತರು, ಬಂಡವಾಳಷಾಹಿಗಳು ಬೇಕಾದಷ್ಟು ಸರ್ಕಾರಿ ಜಮೀನನ್ನು ಆಕ್ರಮಿಸಿಕೊಂಡು ಲಪಟಾಯಿಸಿದ್ದಾರೆ. ಈ ಭೂಹೀನರ ಸಮಸ್ಯೆಯನ್ನು ಸರ್ಕಾರದವರು ಅದಷ್ಟು ಜಾಗ್ರತೆ ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಪಾರ್ಟಿಯವರು ಭೂ ಆಕ್ರಮಣ ಚಳುವಳಿ ಪ್ರಾರಂಭ ಮಾಡಿದ ಮೇಲೆ, ಯಾವ ರೈತರು ಕೈಯಲ್ಲಿ ಕಸಬು ಮಾಡುತ್ತಾರೆ, ಯಾವ ರೈತರು ಬೆವರು ಸುರಿಸಿ ಕೆಲಸ ಮಾಡುತ್ತಾರೆ. ಎದೆಯಲ್ಲಿ ಧೈರ್ಯ ತುಂಬಿದವರು ಯಾರು ಇದ್ದಾರೆ, ಮೈಯಲ್ಲಿ ದಾರ್ಷ್ಟ್ಯತ್ವ ತುಂಬಿದವರು ಯಾರು ಇದ್ದಾರೆ ಅಂತಹವರು ಭೂಮಿಯನ್ನು ಆಕ್ರಮ ಮಾಡಿಕೊಡಿದ್ದಾರೆ. ಮತ್ತು ಬೇಸಾಯ ಮಾಡುತ್ತಿದ್ದಾರೆ. ಇಂತಹ ನಿಜವಾದ ಮಣ್ಣಿನ ಮಕ್ಕಳು ಏನಿದ್ದಾರೆ, ಅವರಿಗೆ ಅವರು ಆಕ್ರಮಿಸಿಕೊಂಡಿರುವ ಜಮೀನನ್ನು ಅವರ ಹೆಸರಿಗೇ ಖಾತೆ ಮಾಡಿಕೊಡುವ ಕೆಲಸವನ್ನು ಸರ್ಕಾರದವರು ಇನ್ನೂ ಮಾಡಿಲ್ಲ. ಇನ್ನೊಂದು ವಿಷಯವೆಂದರೆ, ಈಗ ಜಮೀನುದಾರರು, ಗೇಣಿದಾರರು ಎಂಬುದಾಗಿ ಏನಿದ್ದಾರೆ, ಅವರ ಜೊತೆಗೆ ತಕರಾರೇ ತಕ್ತೆದಾರರು ಎಂಬುದಾಗಿ ಹೊಸ ವರ್ಗವನ್ನು ಸರ್ಕಾರದವರು ಸೃಷ್ಟಿ ಮಾಡಿದ್ದಾರೆ. ಇದು ಬೇರೆ ಕಡೆ ಇದೆಯೋ ಇಲ್ಲವೋ ಗೊತ್ತಿಲ್ಲ? ಇಂತಹವರಿಗೆ ವರ್ಷಕ್ಕೆ ಎಕರೆಗೆ 600 ರೂಪಾಯಿ ಕೊಡಬೇಕೆಂದು ಸರ್ಕಾರದವರು ಹೇಳುತ್ತಾರೆ.

ಚೇರ್ಮನ್‌ರವರು.—ಅದು ಮೊದಲಿಂದಲೂ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಂತಹವರನ್ನು ಕೂಡಲೇ ಖಾತೇದಾರರನ್ನಾಗಿ ಮಾಡಬೇಕು, ಅವರಿಗೆ ಪ್ರತಿ ವರ್ಷವೂ ಟಿ. ಟಿ. ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಈಗ ಅನೇಕ ಜನ ಶ್ರೀಮಂತರು ಕೂಡ ಭೂಮಿಯನ್ನು ಆಕ್ರಮಣ ಮಾಡಿಕೊಂಡಿದ್ದಾರೆ. ನೀವು ಹೇಳಿವ ಪ್ರಕಾರ ಎಲ್ಲರನ್ನು ಖಾತೇದಾರರನ್ನಾಗಿ ಮಾಡಿದರೆ ಶ್ರೀಮಂತರು ಕೂಡ ಖಾತೇದಾರರಾಗುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಶ್ರೀಮಂತರು ಭೂಮಿಯನ್ನು ಆಕ್ರಮ ಮಾಡಿಕೊಂಡಿದ್ದರೆ ಅಂತಹವರನ್ನು ಅಲ್ಲಿಂದ ಹೊರಗೆಳೆದು, ಭೂಮಿಯನ್ನು ವಾಪಸ್ ಪಡೆದುಕೊಂಡು ಭೂಹೀನರಿಗೆ ಕೊಡಬೇಕು. ಮಣ್ಣಿನಮಕ್ಕಳು ಏನಿದ್ದಾರೆ, ಅಂತಹವರಿಗೆ ಭೂಮಿಯನ್ನು ಮೊದಲು ವಿತರಣೆ ಮಾಡಬೇಕು. ನಮ್ಮ ಪ್ರದೇಶ ವ್ಯವಸಾಯಕ್ಕೆ ಯೋಗ್ಯವಾದಂಥ ಮತ್ತು ಫಲವತ್ತಾದ ಪ್ರದೇಶವಾಗಿದೆ. ಇಂತಹ ಪ್ರದೇಶಕ್ಕೆ ಸರ್ಕಾರದವರು ನೀರಾವರಿ ಸೌಕರ್ಯವನ್ನು ಒದಗಿಸಿಕೊಡಬೇಕು. ಯಾರೋ ಶ್ರೀಮಂತರ ಜಮೀನಿಗೆ ಅಥವಾ ಕಾಂಗ್ರೆಸ್ ಪಕ್ಷದ ಸದಸ್ಯರ ಜಮೀನಿಗೆ ಮಾತ್ರ ಅನುಕೂಲವಾಗುವಂತೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಡದೆ, ನೂರಾರು ಜನ ಬಡ ರೈತರ ಜಮೀನುಗಳಿಗೆ ಅನುಕೂಲವಾಗುವಂತೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಡಬೇಕು. ಈ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಆರ್ಥಿಕ ಮಂತ್ರಿಯವರು ತಮ್ಮ ಭಾಷಣದಲ್ಲಿ ಎನ್. ಜಿ. ಓ. ಬಗ್ಗೆ ಪ್ರಸ್ತಾಪ ಮಾಡಿ ಎನ್. ಜಿ. ಓ. ಗಳಿಗೆ ಸಂಬಳ ಜಾಸ್ತಿ ಮಾಡಿದ್ದರಿಂದ, ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಉಂಟಾಗುವ ಪರಿಣಾಮವನ್ನು ಬಗೆಹರಿಸುವ ಯಾವ ಉಪಾಯವೂ ಇದುವರೆಗೆ ಕಂಡುಬಂದಿಲ್ಲವೆಂದು ಹೇಳಿದ್ದಾರೆ. ಎನ್. ಜಿ. ಓ. ಗಳ ಸಂಬಳದ ಬಗ್ಗೆ ಹೇಳುವುದಾದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನೌಕರರ ವೇತನದಲ್ಲಿ ವ್ಯತ್ಯಾಸವಿಲ್ಲದಂತೆ ಒಂದೇ ರೀತಿಯ ವೇತನವನ್ನು

(ಶ್ರೀ ಕೋಣಂದೂರು ಲಿಂಗಪ್ಪ)

ಅಥವಾ ಸಮಾನ ಸಂಭಾವನೆಯನ್ನು ಕೊಡಬೇಕಾದುದು ಸರ್ಕಾರದ ಮೊದಲನೆಯ ಕರ್ತವ್ಯ. ಇದರಿಂದ ರಾಜ್ಯದಲ್ಲಿ ಲಂಚ ರುಷುವತ್ತುಗಳು ಕಡಿಮೆಯಾಗುತ್ತವೆ. ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ ಎಂದು ಮಾನ್ಯ ಅರ್ಥ ಸಚಿವರು ಕೇಳಿದ್ದಾರೆ? ನಾನು ಈ ಸದನಕ್ಕೆ ಬರುವುದಕ್ಕೆ ಮುಂಚೆ ಶ್ರೀಮಾನ್ ಘೋರ್ಪಡೆಯವರ ಹೆಸರನ್ನು ಕೇಳಿದ್ದೆ. ಅವರು ಅರ್ಥ ಶಾಸ್ತ್ರಜ್ಞರು. ಅವರು ರಾಜಕೀಯಕ್ಕೆ ಬಂದು ಮಂತ್ರಿಗಳಾಗಿ ಕುಳಿತುಕೊಳ್ಳದಿದ್ದರೆ ನಮ್ಮ ನಾಡೆ ಹೆಮ್ಮೆ ಪಡುವಂತಹ ಅರ್ಥ ಶಾಸ್ತ್ರಜ್ಞರಾಗುತ್ತಿದ್ದರು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಇಂದು ಅವರು ದುರದೃಷ್ಟದಿಂದ ಮಂತ್ರಿಗಳಾಗಿದ್ದಾರೆ. ನಾಡಿನ ಹಿರಿಮೆ ಎಂಬುದು ಮುಖ್ಯ. ಆದಾಯ ಗಳಿಸುವ ಉಪಾಯವನ್ನು ಶ್ರೀ ಲೋಹಿಯಾ ಅವರು ಪಾರ್ಲಿಮೆಂಟ್‌ನಲ್ಲಿ ಕಳೆದ ಇಪ್ಪತ್ತು ವರ್ಷಗಳ ಹಿಂದಿನಿಂದ ಹೇಳಿಕೊಂಡು ಬಂದಿದ್ದಾರೆ. ಕಳೆದ ಶಾಸನಸಭೆಯಲ್ಲಿ ನಮ್ಮ ಪೂಜ್ಯ ಗೋಪಾಲ ಗೌಡರು ಕೂಡ ತಿಳಿಸಿದ್ದರು. ಅದು ಏನೆಂದರೆ ವೆಚ್ಚದ ಮೇಲೆ ಮಿತಿ ಹಾಕುವುದು. ವೆಚ್ಚದ ಮೇಲೆ ಮಿತಿ ಹಾಕುವುದು ಎಂದರೆ 1500 ರೂಪಾಯಿಗಳಿಂದ 2000 ರೂಪಾಯಿಗಳ ಒಳಗೆ ವೆಚ್ಚ ಮಾಡತಕ್ಕದ್ದು ಎಂದು ಕಾನೂನು ಮಾಡಿ, ಅದಕ್ಕಿಂತಲೂ ಹೆಚ್ಚು ವೆಚ್ಚ ಮಾಡುವುದಕ್ಕೆ ಯಾರಿಗೂ ಅವಕಾಶ ಕೊಡಬಾರದು. ಆ ರೀತಿ ಮಾಡಿದರೆ ಇಂಡಿಯಾ ದೇಶದಲ್ಲಿ ಎರಡು ಸಾವಿರ ಕೋಟಿ ರೂಪಾಯಿಗಳ ಉಳಿತಾಯವಾಗುತ್ತದೆಂದು ದಿವಂಗತ ಡಾ. ಲೋಹಿಯಾ ಅವರು ಆಗಿನ ಅರ್ಥ ಮಂತ್ರಿಗಳಾಗಿದ್ದ ಶ್ರೀ ಮೊರಾರ್ಜಿ ದೇಸಾಯಿ ಅವರಿಗೆ ಹೇಳಿದ್ದರು. ಅದರ ಬಗ್ಗೆ ಅಂಕಿಅಂಶಗಳನ್ನು ಸಹ ಕೊಟ್ಟಿದ್ದರು. ಈ ರೀತಿ ಮಾಡಿದರೆ ನಮ್ಮ ರಾಜ್ಯದಲ್ಲಿ ಎಷ್ಟು ಉಳಿತಾಯವಾಗುತ್ತದೆಂಬುದನ್ನು ಮಾನ್ಯ ಆರ್ಥಿಕ ಮಂತ್ರಿಯವರು ಪರಿಶೀಲನೆ ಮಾಡಬೇಕು. ಆ ರೀತಿ ಉಳಿತಾಯದಿಂದ ಬರುವ ಹಣದಲ್ಲಿ ಅಭಿವೃದ್ಧಿ ಕೆಲಸಗಳನ್ನು ಲಾಗೂ ಮಾಡುವುದಕ್ಕೆ ಬರುತ್ತದೆ.

ಕನ್ನಡದ ಅಭಿವೃದ್ಧಿ ಬಗ್ಗೆ ಒಂದು ಕಾಸನ್ನೂ ಕೂಡ ಖರ್ಚು ಮಾಡುವ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ತಮ್ಮ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಕಾಣಿಸಿಲ್ಲ. ನ್ಯಾಯಾಲಯಗಳಲ್ಲಿರುವ ಕಾನೂನು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡುವುದಕ್ಕೆ ಸ್ವಲ್ಪ ಹಣವನ್ನು ಸರ್ಕಾರದವರು ಖರ್ಚು ಮಾಡಬೇಕು. ಈ ಬಗ್ಗೆ ಮತ್ತೊಂದು ಸಲ ಮಾತನಾಡುತ್ತೇನೆ. ಇದುವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

†ಶ್ರೀ ಎ. ಎಂ. ಸೂರ್ಯನಾರಾಯಣಗೌಡ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ತಂದಿರತಕ್ಕ ಬಡೆಟ್‌ನಲ್ಲಿ ಒಳ್ಳೆಯ ತಜ್ಞರು ಮತ್ತು ಆರ್ಥಿಕ ವಿಷಯದಲ್ಲಿ ಅನುಭವ ಪಡೆದಿರತಕ್ಕಂಥವರು ಪ್ರೋಗ್ರೆಸ್‌ನಲ್ಲಿ ನಂಬಿಕೆ ಇರತಕ್ಕಂಥವರು ಆದ ಮಾನ್ಯ ಹಣಕಾಸಿನ ಮಂತ್ರಿಗಳು ಎಲ್ಲಾ ರೀತಿಯಿಂದಲೂ ಅದನ್ನು ವಿಚಾರಮಾಡಿ ನಮ್ಮ ಮುಂದೆ ಈ ಬಡ್ಜೆಟ್ಟನ್ನು ಇಟ್ಟಿದ್ದಾರೆ. ಈ ಬಡ್ಜೆಟ್ಟಿನಲ್ಲಿ ಆದಷ್ಟು ಎಲ್ಲಾ ವಿಚಾರಗಳನ್ನು ವಿಚಾರಮಾಡಿ ಸರಿಯಾದ ರೀತಿಯಲ್ಲಿ ಮಂಡಿಸಿದ್ದಾರೆ. ಇದನ್ನು ನಾವು ಸ್ವಾಗತಿಸಬೇಕಾಗಿದೆ. ಈ ಬಡ್ಜೆಟ್ಟನ್ನು ಸ್ವಾಗತಿಸುವುದರಲ್ಲಿ ಯಾವ ಅನುಮಾನವೂ ಇಲ್ಲ. ಅಧಿಕಾರ ವರ್ಗದವರು 25 ವರ್ಷಗಳಿಂದ ಯಾವ ರೀತಿಯಲ್ಲಿದ್ದರೋ ಆ ರೀತಿ ಇರದೆ ತಮ್ಮ ಮನೋಭಾವನೆಯನ್ನು ಬದಲಾವಣೆ ಮಾಡಿಕೊಳ್ಳಬೇಕು. ಈ ಬಡ್ಜೆಟ್ಟನ್ನು ಜನಗಳೂ ಸಹ ಸ್ವಾಗತಿಸುತ್ತಾರೆ. ನಮ್ಮ ಪಕ್ಷದ ಎಲ್ಲಾ ಸದಸ್ಯರುಗಳೂ ಕೂಡ, ಮಂತ್ರಿಗಳಾಗಿದ್ದಂತಹವರು ಮತ್ತು ಅಧಿಕಾರಿಗಳೂ ಈ ಸಮಾಜವಾದಕ್ಕೆ ಹೊಂದಿಕೊಂಡು ಹೋಗಲು ಪ್ರಯತ್ನ ಮಾಡಬೇಕು. ಈ ದಿಸೆಯಲ್ಲಿ ಅವರು ಸಹಕರಿಸದಿದ್ದರೆ ಅವರು ತಮ್ಮ ಅಧಿಕಾರವನ್ನು ಬಿಟ್ಟು ಯುವಕ ಅಧಿಕಾರಿಗಳಿಗೆ ಅವಕಾಶವನ್ನು ಮಾಡಿಕೊಡುವುದರ ಮೂಲಕ ಸಮಾಜವಾದದ ನೀತಿಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆ. ಜನಗಳ ಮತ್ತು ಸರ್ಕಾರದ ಮಧ್ಯ ಇರತಕ್ಕ ಅಧಿಕಾರ ವರ್ಗದವರು ಹೆಚ್ಚು ಪಾತ್ರ ವಹಿಸಿದರೆ ಮಾತ್ರ ಸಮಾಜವಾದದ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆ. ಆದರೆ ಅಧಿಕಾರ ಕೈಯಲ್ಲಿರುವ ಹಾಗೂ ಅಧಿಕಾರ ಚಲಾಯಿಸುವ ಅಧಿಕಾರಿಗಳು ಸಮಾಜವಾದದೊಡನೆ ಹೊಂದಿಕೊಂಡು ಹೋಗದಿದ್ದರೆ ಸಮಾಜಕ್ಕೂ ಸರ್ಕಾರಕ್ಕೂ ಅಂತಹವರಿಂದ ಕೆಟ್ಟ ಹೆಸರು ಬರುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದ್ದರಿಂದ ಈ ಅಧಿಕಾರವರ್ಗದವರು ತಮ್ಮ ಹಳೆಯ ಮನೋಭಾವವನ್ನು ಬದಲಾಯಿಸಿಕೊಂಡು ಈ ಹೊಸ ಯುಗ ಏನು ಪ್ರಾರಂಭವಾಗಿದೆ, ಯಾವ ಒಂದು ಸಮಾಜವಾದವನ್ನು ನಾವು ತರುತ್ತೇವೆ

ಎಂದು ಕಂಕಣ ಬದ್ಧರಾಗಿ ನಿಂತಿದ್ದೇವೆಯೋ ಅದನ್ನು ಅಧಿಕಾರ ವರ್ಗ ತುಂಬಾ ಗಾಢವಾಗಿ ಯೋಚನೆಮಾಡಿ ಸಮಾಜವಾದಕ್ಕೆ ಹೊಂದಿಕೊಂಡು ಹೋಗತಕ್ಕಂತಹ ಮನೋಭಾವವನ್ನು ಅವರು ಇನ್ನು ಮುಂದೆಯಾದರೂ ಬೆಳೆಸಿಕೊಳ್ಳಬೇಕು ಎಂದು ಈ ಸಭೆಯ ಮೂಲಕ ಅಧಿಕಾರ ವರ್ಗದವರಿಗೆ ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ವಿಚಾರಗಳನ್ನು ಇಲ್ಲಿ ವಿಚಾರ ಮಾಡಬಯಸುತ್ತೇನೆ. ಎರಡು ಮೂರು ದಿವಸಗಳ ಹಿಂದೆ ನಮ್ಮ ಸರ್ಕಾರಿ ರಚನೆಯಾಗುವುದು ತೀರ್ಮಾನವಾಗಿದ್ದು ನಮ್ಮ ಪಕ್ಷ ಬಹುಮತ ಪಡೆದು ಬಂದಿದೆ. ನಮ್ಮ ಪಕ್ಷದ ಕೆಲವರು ಮಂತ್ರಿಗಳಿಗೆ ರೂಮುಗಳನ್ನು ಕೊಡುವುದಕ್ಕೂ ಸಹ ತೊಂದರೆಯಾಗಿತ್ತು. ರೂಮುಗಳನ್ನು ಹೋಗಿ ನೋಡಿದರೆ ಅಲ್ಲಿ ಕುರ್ಚಿಗಳೂ ಸಹ ಇರಲಿಲ್ಲ, ಟೇಬಲ್ ಮತ್ತು ಬರೆಯುವುದಕ್ಕೆ ಲೇಖಣಿಯೂ ಸಹ ಇರಲಿಲ್ಲ. ಈ ತರಹ ಅವ್ಯವಸ್ಥೆ ಮಂತ್ರಿಗಳಿಗೆ ಆದದ್ದು, ಜವಾಬ್ದಾರಿ ಹೊತ್ತಿದ್ದವರಿಗೂ ಗೊತ್ತಿದೆ. ಹಿಂದೆ ಹೇಗೆ ಇತ್ತೋ ಅದೇ ರೀತಿ ನೋಡದೆ ಇದ್ದುದು ತಪ್ಪು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರಿಗೆ ಸರ್ಕಾರ ರಚನೆಯಾಗುತ್ತದೆ ಮಂತ್ರಿಗಳು ಬರುತ್ತಾರೆ ಎಂಬುದು ಗೊತ್ತಿದ್ದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರಿಯಿಂದ ನೋಡಲಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಕನ್ನಡ ಭಾಷೆ ನಮ್ಮ ಸರ್ಕಾರಿ ಭಾಷೆಯಾಗಬೇಕು, ಎಲ್ಲಾ ವಿಧದಲ್ಲೂ ಎಲ್ಲಾ ಹಂತದಲ್ಲೂ ಸಹ ಕನ್ನಡದಲ್ಲಿ ವ್ಯವಹಾರ ಮಾಡತಕ್ಕ ಜವಾಬ್ದಾರಿಯನ್ನು ನಮ್ಮ ಸರ್ಕಾರ ತಳೆದಿದೆ. ಬೇರೆ ಪರದೇಶಗಳಲ್ಲಿ ಅವರವರ ಭಾಷೆಯಲ್ಲಿ ಕೋರ್ಟುಗಳಲ್ಲೂ ವ್ಯವಹಾರ ಮಾಡತಕ್ಕಂಥ ಒಂದು ರೂಢಿಯಾಗಿದೆ. ಆದರೆ ನಮ್ಮ ದೇಶದಲ್ಲಿ ನಾವು ಇದರ ಬಗ್ಗೆ ಯಾವ ಒಂದು ಕಾರ್ಯಕ್ರಮವನ್ನು ಕೈಗೊಳ್ಳದಿರುವುದು ಸರಿಯಾದುದಲ್ಲ. ನಮ್ಮ ಹೈಕೋರ್ಟಿನಲ್ಲೂ ಸಹ ಕನ್ನಡದಲ್ಲಿ ಕೇಸುಗಳನ್ನು ವಿಚಾರಮಾಡತಕ್ಕ ಒಂದು ನಿರ್ಧಾರ ತೆಗೆದುಕೊಂಡು ಆ ರೀತಿ ಮಾಡಬೇಕಾಗಿದೆ. ಇನ್ನು ಎರಡು ಮೂರು ವರ್ಷಗಳಲ್ಲಿ ನಾವು ಈ ದಾರಿಯಲ್ಲಿ ಹೋಗದಿದ್ದರೆ ನಾವು ಯಾವ ಕನ್ನಡ ರಾಜ್ಯ ಎಂದು ಹೇಳುತ್ತಿದ್ದೇವೋ ಅದು ಇಲ್ಲದಂತಾಗುತ್ತದೆ. ಕೇರಳದಲ್ಲಿ ಮಲೆಯಾಳಂ ಇದೆ, ತಮಿಳುನಾಡಿನಲ್ಲಿ ತಮಿಳು, ಆಂಧ್ರದಲ್ಲಿ ತೆಲುಗು ಮತ್ತು ಮಹಾರಾಷ್ಟ್ರದಲ್ಲಿ ಮರಾಠಿ ಇದೆ. ಆದರೆ ನಮ್ಮ ದೇಶದಲ್ಲಿ ನೂರಕ್ಕೆ 80 ಜನ ಇಂಗ್ಲಿಷ್ ಭಾಷೆಯನ್ನು ಆಶ್ರಯಿಸತಕ್ಕ ಮನೋಭಾವ ಇರುವುದನ್ನು ನೋಡಿದರೆ ತುಂಬಾ ನಾಚಿಕೆಯಾಗುತ್ತದೆ. ಕೋರ್ಟು ಮೊದಲಾಗಿ ಇತರ ಎಲ್ಲಾ ಆಫೀಸುಗಳಲ್ಲೂ ಕನ್ನಡದಲ್ಲಿ ವ್ಯವಹಾರ ಮಾಡತಕ್ಕ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಈ ರೀತಿ ನಾವು ಜನತೆಗೆ ವಾಗ್ದಾನ ಮಾಡಿದ್ದೇವೆ. ಇದನ್ನು ಪೂರೈಕೆ ಮಾಡಲು ಬೇಕಾದಂತಹ ಒಂದು ನಿರ್ಧಾರವನ್ನು ಮಾಡಬೇಕು. ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಹಳ್ಳಿಗಾಡಿನ ಜನಗಳ ಸ್ಥಿತಿ ಕುಗ್ಗಿದೆಯೇ ಹೊರತು ಅವರು ಉತ್ತಮವಾದ ರೀತಿಯಲ್ಲಿ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಇವೊತ್ತು ನಮ್ಮ ದೇಶದಲ್ಲಿ ನೂರಕ್ಕೆ 80 ಜನ ಇಲ್ಲದಿರುವವರು, ನೂರಕ್ಕೆ 20 ಜನ ಇರುವವರು ಇದ್ದಾರೆ, ಇಲ್ಲದೆ ಇರತಕ್ಕಂತವರ ದೃಷ್ಟಿಯನ್ನು ಎಲ್ಲರೂ ಇಟ್ಟುಕೊಂಡು ನಮ್ಮ ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು ಎನ್ನುವ ವಿಚಾರದಲ್ಲಿ ನಮ್ಮ ಎಲ್ಲಾ ಸದಸ್ಯರು ಸರ್ಕಾರದವರ ಜೊತೆಯಲ್ಲಿ ಸಹಕರಿಸುವುದರಲ್ಲಿ ಯಾವ ತರಹದ ಭಿನ್ನಾಭಿಪ್ರಾಯವಿಲ್ಲ. ಸಮಾಜವಾದದ ಬಗ್ಗೆ ನಂಬಿಕೆ ಇರತಕ್ಕ ಎಲ್ಲ ಜನರು ಸಹಕಾರವನ್ನು ನೀಡುತ್ತಾರೆ ಎಂದು ನಾನು ನಂಬಿದ್ದೇನೆ. ನೂರಕ್ಕೆ 20 ಜನ ಸ್ವಲ್ಪ ಕಡೆಗಾಣಿಸಬಹುದು ; ಹರಿಜನರು, ಹಳ್ಳಿಗಳಲ್ಲಿ ಕಷ್ಟದಿಂದ ಜೀವನ ಮಾಡತಕ್ಕವರು ಈ ಎರಡು ವರ್ಗದ ವಿಷಯಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಅಲ್ಲಿರತಕ್ಕವರ ಬಗ್ಗೆ ನಾವು ಮಂದಗಾಮಿತನವನ್ನು ಅನುಸರಿಸಿದರೆ ಸಾಧ್ಯವಾಗುವುದಿಲ್ಲ. ನಾವು ಜನಕ್ಕೆ ಏನು ವಾಗ್ದಾನಮಾಡಿದ್ದೇವೋ ಅದರ ಬಗ್ಗೆ ಆ ಎಲ್ಲ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾವು ಎಲ್ಲರ ಸಹಕಾರವನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಅದಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ಅಳವಡಿಸಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು). —ಸನ್ಮಾನ್ಯ ಸಭಾಪತಿಗಳೇ, ಮತ್ತು ಮುಂದಿನ ನಮ್ಮ ದೇಶದ ಆಡಳಿತ ಸೂತ್ರವನ್ನು ಈಗತಾನೇ ವಹಿಸಿಕೊಂಡಿರತಕ್ಕ ಪ್ರಧಾನಮಂತ್ರಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಪ್ರಮಾಣ ಹೊಂದಿದ ಆಡಳಿತ ಸೂತ್ರವನ್ನು ಹೊಂದಿರತಕ್ಕ ಸನ್ಮಾನ್ಯ ಮುಖ್ಯಮಂತ್ರಿಗಳೇ ಹಾಗೂ ಆರ್ಥಿಕ ತಜ್ಞರು ಮತ್ತು ಒಳ್ಳೆಯ ಅನುಭವವುಳ್ಳವರಾದ ಮತ್ತು ರಾಜಮನೆತನದಲ್ಲಿ ಹುಟ್ಟಿಕುಬೇರರ ರೀತಿಯಲ್ಲಿ ಇರತಕ್ಕ ಸನ್ಮಾನ್ಯ ಘೋರ್ಪಡೆಯವರು ಆರ್ಥಿಕ ಮಂತ್ರಿಗಳಾಗಿ ಈ ದಿವಸ ಮೂರು ತಿಂಗಳ ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ. ಅದು ಬಹಳ ಸಂತೋಷವಾದ ಸಂಗತಿ. ಮಾನ್ಯ ಮುಖ್ಯಮಂತ್ರಿಗಳು ಹೊಸ ರಕ್ತಕ್ಕೆ ತಮ್ಮ ಮಂತ್ರಿಮಂಡಲ

(ಶ್ರೀ ಟಿ. ಎಂ. ಮಂಜುನಾಥ್)

ದಲ್ಲಿ ಹೆಚ್ಚಿನ ಅವಕಾಶ ಕೊಡುತ್ತೇವೆಂದು ಹೇಳಿದ್ದರು. ಅದೇ ರೀತಿ ಮುಖ್ಯಮಂತ್ರಿಗಳು ಸ್ವಲ್ಪ ಮಟ್ಟಿನ ಹಳೆಯ ರಕ್ತದೊಂದಿಗೆ ಹೊಸ ರಕ್ತವನ್ನು ಕೂಡಿಸಿ ಮಂತ್ರಿಮಂಡಲವನ್ನು ರಚಿಸಿಕೊಂಡು ಆಡಳಿತವನ್ನು ನಡೆಸುವುದಕ್ಕೆ ಪ್ರಾರಂಭಮಾಡಿದ್ದಾರೆ. ಅದರಲ್ಲಿ ನಮ್ಮ ಹಿರಿಯರಾದ ಶ್ರೀ ಸಿದ್ಧ ವೀರಪ್ಪನವರು ಇರುವುದು ಬಹಳ ಸಂತೋಷವಾದ ಸಂಗತಿ. ಆಡಳಿತ ಪಕ್ಷದವರು ಜನತೆಗೆ ಅಭಿವೃದ್ಧಿಕಾರ್ಯಗಳನ್ನು ಮಾಡುತ್ತೇವೆಂಬ ಯಾವ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರೋ ಮತ್ತು ಜನತೆ ಏನು ನಿರೀಕ್ಷೆ ಮಾಡಿದರೋ ಅದನ್ನು ಕಾರ್ಯಗತ ಮಾಡಲು ಈಗ ಅರ್ಥಿಕ ಮಂತ್ರಿಗಳು ಹೆಚ್ಚಿನ ಬೇಡಿಕೆಯನ್ನು ಕೆಲವಾರು ಅಂಶಗಳಲ್ಲಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ಮೊದಲನೆಯದಾಗಿ ಕ್ಷಾಮ ಪರಿಹಾರಕ್ಕೋಸ್ಕರ ಹೆಚ್ಚಿನ ಬೇಡಿಕೆಯನ್ನು ಇಟ್ಟಿದ್ದಾರೆ, ಸಾಮಾನ್ಯವಾಗಿ ತಾಲ್ಲೂಕು ಮಟ್ಟದಲ್ಲಿ ಕ್ಷಾಮ ಪರಿಹಾರ ಕಾಮಗಾರಿಗಳು ನಡೆಯಬೇಕಾದರೆ ಸ್ಥಳದ ಸನ್ನಿವೇಶಗಳನ್ನು ಅಲ್ಲಿರುವ ಕೊರತೆಗಳನ್ನು ತಿಳಿದು ಅನುಭವ ಇರತಕ್ಕ ಯಾವುದೇ ಒಂದು ಆಡಳಿತ ಕ್ರಮವಿರತಕ್ಕ ಅಭಿವೃದ್ಧಿಮಂಡಳಿಗಳಿಗೆ ಈ ಒಂದು ಅವಕಾಶವನ್ನು ಹಿಂದೆ ಕೊಡುತ್ತಾ ಬಂದಿದ್ದರು. ಆದರೆ ರಾಷ್ಟ್ರಪತಿ ಆಳ್ವಿಕೆ ಬಂದಮೇಲೆ ಕೇವಲ ರಾಜ್ಯಪಾಲರ ಆಳ್ವಿಕೆಯಲ್ಲಿ ಈ ಕ್ರಮವನ್ನು ತೆಗೆದುಹಾಕಿ ಲೋಕೋಪಯೋಗಿ ಇಲಾಖೆಗೆ ಈ ಒಂದು ಕಾರ್ಯಕ್ರಮವನ್ನು ಮಾಡತಕ್ಕಂತ ಅವಕಾಶವನ್ನು ಕೊಟ್ಟರು. ಆದ್ದರಿಂದ ಅವರು ಮಾಡಿರತಕ್ಕ ವೆಚ್ಚ ಸರಿಯಾದ ರೀತಿಯಲ್ಲಿಲ್ಲ. ಕೆಲಸ ಕಾರ್ಯಗಳನ್ನು ಮಾಡತಕ್ಕ ಕೂಲಿಗಾರರಿಂದ, ದೀನದಲಿತರಿಂದ ಒಳ್ಳೆಯ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಿಸಬೇಕು. ಈಬಗ್ಗೆ ನನ್ನ ಒಂದು ಅಭಿಮತವನ್ನು ಹೇಳುವುದಾದರೆ ಇಂತಹ ಕೆಲಸಕಾರ್ಯಗಳನ್ನು ಮಾಡಿಸಬೇಕಾದರೆ ಯಾರು ದಿನನಿತ್ಯ ಜೀವನದಲ್ಲಿ ಅಲ್ಲಿಯ ಸಂಪರ್ಕವನ್ನಿಟ್ಟುಕೊಂಡಿರತಕ್ಕ ಆಡಳಿತ ಕ್ರಮವನ್ನು ಇಟ್ಟುಕೊಂಡಿರುತ್ತಾರೋ ಅಂತಹ ಅಭಿವೃದ್ಧಿಮಂಡಳಿಗಳಿಗೆ ಈ ಒಂದು ಅವಕಾಶವನ್ನು ಕೊಟ್ಟು ಅವರ ಮುಖಾಂತರ ಈ ಕೆಲಸಕಾರ್ಯಗಳನ್ನು ಮಾಡಿದರೆ ಕ್ಷೇಮ ಇದೆ. ಎಲ್ಲೆಲ್ಲಿ ಕ್ಷಾಮವಿದೆ ಎಲ್ಲೆಲ್ಲಿ ಜನ ಕೆಲಸಕಾರ್ಯಗಳಿಲ್ಲದೆ ಬಳಲುತ್ತಿದ್ದಾರೆ ಅಂತಹ ಕಡೆ ಅಭಿವೃದ್ಧಿಕಾಮಗಾರಿಗಳನ್ನು ಮಾಡಿಸಿದರೆ ರೈತರಿಗೆ ಅನುಕೂಲ ಮಾಡಿ ಕೊಟ್ಟಹಾಗಾಗುತ್ತದೆ. ಎರಡನೆಯದಾಗಿ ನಮ್ಮ ಹಿಂದೆ ಇದ್ದಂತಹ ರಾಜ್ಯಪಾಲರು ನಮ್ಮ ಪ್ರಧಾನ ಮಂತ್ರಿಯವರು ಹೇಳಿರುವ ಪ್ರಕಾರ ಎಷ್ಟು ಹಣವನ್ನು ಬೇಕಾದರೂ ಕ್ಷಾಮ ಪರಿಹಾರ ನಿಧಿಗೆ ಕೊಡುತ್ತೇವೆಂದು ಹೇಳಿದ್ದರು. ಆ ಸಂದೇಶದ ಪ್ರಕಾರ ಕೆಲವು ತಾಲ್ಲೂಕುಗಳಲ್ಲಿ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದರೂ, ಅವಕ್ಕೆ ಬೇಕಾಗುವ ಹಣವನ್ನು ಕೊಟ್ಟಿಲ್ಲ. ಆದ್ದರಿಂದ ನಾನು ಅರ್ಥಿಕ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಎಲ್ಲೆಲ್ಲಿ ಅಂತಹ ಅಡಚಣೆಗಳು ಆಗಿವೆ ಮತ್ತು ಹಣವನ್ನು ಕೊಟ್ಟಿಲ್ಲ, ಅಂತಹ ಕಡೆ ಹಣವನ್ನು ಕೊಡಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಈ ಭೂ ವಿವರಣೆಗಾಗಿ ಎಲ್ಲಾ ಕಡೆಯೂ ಒಂದು ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಕಮಿಟಿ ಎಂದು ಮಾಡಿದ್ದರು. ಅದರ ಮುಖಾಂತರ ಬಡವರಿಗೆ, ಅದರಲ್ಲೂ ಹರಿಜನರಿಗೆ ಭೂಮಿಯನ್ನು ವಿತರಣೆ ಮಾಡುತ್ತಿದ್ದರು. ಆ ಕಮಿಟಿಗಳಲ್ಲಿ ಆಯಾ ಕ್ಷೇತ್ರದ ಎಂ. ಎಲ್.ಎ.ಗಳು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಸದಸ್ಯರು ಎಲ್ಲಾ ಇದ್ದುದರಿಂದ ಯಾವ ಜನರು ನಿಜವಾಗಿಯೂ ಬಡವರಾಗಿದ್ದಾರೆ, ನಿರ್ಗತಿಕರಾಗಿದ್ದಾರೆ ಅದನ್ನು ನೋಡಿಕೊಂಡು ಅಂಥವರಿಗೆ ಹಂಚಲು ಅನುಕೂಲವಾಗುತ್ತಿತ್ತು. ಆದರೆ ರಾಜ್ಯಪಾಲರು ಬಂದಮೇಲೆ ಆ ಕಮಿಟಿಯನ್ನೇ ತೆಗೆದುಹಾಕಿಬಿಟ್ಟು, ಆ ಕೆಲಸವನ್ನು ನೇರವಾಗಿ ಅಧಿಕಾರಿಗಳೇ ಹಂಚಬೇಕೆಂದು ವ್ಯವಸ್ಥೆ ಮಾಡಿದರು. ಇದರಿಂದ ಯಾವ ಒಂದು ಮೂಲ ಉದ್ದೇಶವನ್ನು ಇಟ್ಟುಕೊಂಡು ಆ ಕಮಿಟಿಯನ್ನು ಮಾಡಿದ್ದರೋ, ಆ ಮೂಲ ಉದ್ದೇಶವೇ ಇಲ್ಲದಂತಾಗಿ ಯಾರು ಬಡ ಜನರಿದ್ದಾರೆ, ಯಾರು ಬಡ ಹರಿಜನರಿದ್ದಾರೆ, ಅವರಿಗೆ ಅದರ ಅನುಕೂಲವನ್ನು ಪಡೆಯಲು ಸಾಧ್ಯವಿದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಅಲ್ಲದೆ ಅಧಿಕಾರಿಗಳಿಗೆ ಅಲ್ಲಿ ಯಾರು ಭೂಹೀನರು ಇದ್ದಾರೆ, ಯಾರು ಬಡವರು ಇದ್ದಾರೆಂಬುದನ್ನು ಕಂಡು ಹಿಡಿದು ಈ ಕಾರ್ಯವನ್ನು ಮಾಡಲಾಗುತ್ತದೆಯೇ ? ಇದರಿಂದ ಹರಿಜನರಿಗಂತೂ ಬಹಳ ಅನ್ಯಾಯವಾಗಿದೆ.

ಇನ್ನೊಂದು ವಿಚಾರವೇನೆಂದರೆ, ಇವತ್ತು ತಾಲ್ಲೂಕು ಕಚೇರಿಗಳಲ್ಲಿ ದೀನದಲಿತರು ಪಡುವ ಗೋಳನ್ನು ನೋಡಿದರೆ, ನರಕ ಅದಕ್ಕಿಂತಲೂ ಉತ್ತಮವೆಂದು ಕಾಣುತ್ತದೆ. ಏಕೆಂದರೆ, ಅವರು ಪಡುವ ಅಲ್ಲಿ ಕಷ್ಟ ಅಷ್ಟಿಷ್ಟಲ್ಲ. ಅವರು ಹೇಳುತ್ತಿದ್ದಾರೇನೆಂದರೆ, ಇವತ್ತು ಆರಿಸಿ ಬಂದಿರುವಂತಹ ಎಂ.ಎಲ್.ಎ.ಗಳು ತಾಲ್ಲೂಕು ಆಫೀಸಿನಿಂದ ನೇರವಾಗಿ ಸಹಾಯ ಪಡೆಯುವ ಒಂದು ವಾತಾವರಣವನ್ನು ಅಲ್ಲಿ ಉಂಟುಮಾಡಿಕೊಟ್ಟರೆ, ನಮ್ಮಂತಹ ಎಂ. ಎಲ್.ಎ.ಗಳು ಆರಿಸಿ ಇಲ್ಲಿ ಬಂದಿರುವುದಕೆ

ಸಾರ್ಥಕವಾಗುತ್ತದೆಎಂದು. ಇದನ್ನು ಮಾನ್ಯ ಮಂತ್ರಿಯವರು ಗಮನಕ್ಕೆ ತೆಗೆದುಕೊಂಡು, ಬಡ ಜನರಿಗೆ ಹಾಗೂ ಹರಿಜನರಿಗೆ ಅಲ್ಲಿ ದೊರೆಯುವಂತಹ ಅನುಕೂಲಗಳನ್ನು ಸರಿಯಾದ ರೀತಿಯಲ್ಲಿ ದೊರಕುವಂತೆ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಮತ್ತೊಂದು ವಿಚಾರವೇನೆಂದರೆ ಫಾರೆಸ್ಟ್ ಇಲಾಖೆಗೆ ಹೆಚ್ಚುವರಿ ಬೇಡಿಕೆಯನ್ನು ಕೇಳಿದ್ದಾರೆ. ಇವತ್ತು ಹರಿಜನರಿಗೆ ವ್ಯವಸಾಯ ಕ್ಕೋಸ್ಕರ ಭೂಮಿಯನ್ನು ಹಂಚುತ್ತಿದ್ದಾರೆ. ಏನೂ ಬೆಳೆ ತೆಗೆಯಲಿಕ್ಕೆ ಸಾಧ್ಯವಾಗದಂತಹ ಭೂಮಿಯನ್ನು ಹಂಚಿದ್ದಾರೆ. ಇವತ್ತು ಅಂತಹ ಕಷ್ಟದಲ್ಲಿ ಯಾರು ಇದ್ದಾರೆ, ಅವರಿಗೆ ವ್ಯವಸಾಯಕ್ಕೆಯೋಗ್ಯವಾದ ಜಮೀನನ್ನು ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ, ಈ ಬೇಡಿಕೆಯನ್ನು ನಾವು ಮಂಜೂರು ಮಾಡಬೇಕಾದರೆ, ಅಲ್ಲಿರುವ ಪರಿಸ್ಥಿತಿಯನ್ನು ಕೂಡ ಯೋಚನೆ ಮಾಡಬೇಕಾದುದು ನಮ್ಮ ಕರ್ತವ್ಯ

ಇನ್ನು ಹರಿಜನರ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಇಡೀ ದೇಶಾದ್ಯಂತ ಲಕ್ಷಾಂತರ ರೂಪಾಯಿಗಳನ್ನು ಹಂಚಿದ್ದಾರೆ. ಆದರೆ ನಮ್ಮ ದುರ್ದೈವದಿಂದ ನಮ್ಮ ತಾಲ್ಲೂಕಿನಲ್ಲಿ ಒಂದು ಲಕ್ಷ ರೂಪಾಯಿ ಕೂಡ ಹಂಚಿಲ್ಲ. ಇವೊತ್ತಿನ ದಿವಸ ಅಲ್ಲಿನ ಹರಿಜನರು ತಮ್ಮ ಮಕ್ಕಳನು 15—20 ರೂಪಾಯಿಗಳಿಗೆ ಗಿರವಿ ಇಟ್ಟು ಗೃಹನಿರ್ಮಾಣ ಸಹಕಾರಸಂಘಕ್ಕೆ ಷೇರನ್ನು ಕಟ್ಟಿದ್ದಾರೆ. ಪಡಬಾರದ ಕಷ್ಟಗಳನ್ನು ಪಡುತ್ತಿದ್ದಾರೆ. ಇದನ್ನು ನೋಡಿದರೆ, ಹರಿಜನರಿಗೆ ಈ ಯೋಜನೆಗಳಿಂದ ಎಷ್ಟು ಉಪಯೋಗವಾಗುತ್ತಿದೆ ಎಂಬುದನ್ನು ಯೋಚನೆ ಮಾಡಬಹುದು. ಇವೊತ್ತಿನ ದಿವಸ ನಾನು ಈ ಮಂತ್ರಿಮಂಡಲದ ಮೇಲೆ ನೇರವಾದ ಆರೋಪಣೆ ಮಾಡುತ್ತಿಲ್ಲ; ಆದರೆ ಬಡ ಜನರಿಗೆ ಆಗುವಂತಹ ಅನ್ಯಾಯಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದನ್ನು ನಮ್ಮ ನೂತನ ಸರ್ಕಾರದವರು ಯೋಚನೆ ಮಾಡಬೇಕಾದುದು ಬಹಳ ಮುಖ್ಯವಾದುದು. ಇವತ್ತು ವಿರೋಧ ಪಕ್ಷದಲ್ಲಿದ್ದವರು, ನಾಳೆ ಆಡಳಿತ ಪಕ್ಷದಲ್ಲಿ ಇರಬಹುದು; ಆದರೆ ಮುಖ್ಯವಾಗಿ ಮಾಡಬೇಕಾದ ಕಾರ್ಯವೆಂದರೆ, ಇಂತಹ ಅನ್ಯಾಯಗಳನ್ನು ತಪ್ಪಿಸಲು ಸರ್ಕಾರದವರು ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈಗಿನ ಆಡಳಿತ ಪಕ್ಷದವರು ವಿರೋಧ ಪಕ್ಷದಲ್ಲಿರುವಾಗ ಏನೊಂದು ಬಡ ಜನರ ಕಷ್ಟಗಳಿಗಾಗಿ ಹೋರಾಡಿದ್ದಾರೆ, ಅವುಗಳನ್ನು ಇವರು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಬೇಕು ಮತ್ತು ಅವರಿಗೆ ತರುವಶಕ್ತಿ ಇದೆಯೆಂದು ನಾನಾದರೂ ಭಾವಿಸಿದ್ದೇವೆ. ಏಕೆಂದರೆ, ಸಮಾಜವಾದದಲ್ಲಿ ನಂಬಿಕೆ ಇರತಕ್ಕಂತಹ ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಇವರು ಇಂದು ಆಡಳಿತಕ್ಕೆ ಬಂದಿದ್ದಾರೆ. ಆದ್ದರಿಂದ ಇವರಿಗೆ ಇದನ್ನು ಜಾರಿಗೆ ತರಲು ಯಾವ ತೊಂದರೆಯೂ ಇರಲಾರದು. ರಾಜ್ಯಾದ್ಯಂತ ಯಾವ ಜನತೆಯು ಇವೊತ್ತಿನ ದಿವಸ ಮತ ಕೊಟ್ಟು ಆಡಳಿತವನ್ನು ನಡೆಸುವುದಕ್ಕೆ ಕಳಿಸಿದ್ದಾರೋ, ಅವರು ನಿಮ್ಮ ಕಾರ್ಯಾಚಟುವಟಿಕೆಗಳನ್ನು ಹೆಜ್ಜೆ ಹೆಜ್ಜೆಗೂ ಕಾಯುತ್ತಿದ್ದಾರೆ. ಅವರಾದರೂ ಏತಕ್ಕೋಸ್ಕರ ನಿಮಗೆ ಮತವನ್ನು ಕೊಟ್ಟು ಇಲ್ಲಿ ಕಳಿಸಿದ್ದಾರೆ? ಇವರು ನಮ್ಮನ್ನು ಉದ್ಧಾರ ಮಾಡುತ್ತಾರೆ, ನಮ್ಮ ಸಮಾಜದ ಸುಧಾರಣೆ ಮಾಡುತ್ತಾರೆಂಬ ಒಂದು ಅಭಿಪ್ರಾಯದಿಂದ ಎಲ್ಲರ ಮತವನ್ನು ಕೊಟ್ಟು ನಿಮ್ಮನ್ನು ಇಲ್ಲಿಗೆ ಕಳಿಸಿದ್ದಾರೆ. ಅದನ್ನು ತಾವೆಲ್ಲರೂ ಯೋಚನೆ ಮಾಡಿಕೊಂಡು ಮುಂದುವರಿದು, ರಾಜ್ಯದ ಜನತೆಯ ಕಷ್ಟಗಳನ್ನು ಪರಿಹಾರ ಮಾಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ನಾನು ಈ ಸಪ್ಲಿಮೆಂಟರಿ ಡಿಮಾಂಡಿನ ಮೇಲೆ ಕೆಲವು ವಿಚಾರಗಳನ್ನು ತಮ್ಮ ಮುಖಾಂತರ ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊದಲನೇಯದಾಗಿ ಡಿಮ್ಯಾಂಡ್ ನಂ. 9 ರಲ್ಲಿ ಪ್ರಿಂಟಿಂಗ್ ಮತ್ತು ಇಲೆಕ್ಟೊರಲ್ ರೋಲ್ಸ ತಯಾರು ಮಾಡುವುದಕ್ಕೆ 2,25,000 ರೂಪಾಯಿಯನ್ನು ಕೇಳಿದ್ದಾರೆ. ಆದರೆ ಇದರ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಮೊನ್ನೆ ಸಾರ್ವತ್ರಿಕ ವಿದಾನ ಸಭೆ ಚುನಾವಣೆ ಸಮಯದಲ್ಲಿ ಮತದಾರರಪಟ್ಟಿ ಏನು ತಯಾರು ಮಾಡಿದ್ದರು. ಅದರಲ್ಲಿ 100ಕ್ಕೆ 25 ಮಂದಿ ಊರಲ್ಲಿ ಇರಲಿಲ್ಲ ಎಂದು ಬರೆಯಲಾಗಿದೆ ಆದರೆ ನಿಜವಾಗಿ ಹಾಗಿಲ್ಲ. ಇದರಿಂದ ಅವರ ಮತದಾನದ ಹಕ್ಕು ನಷ್ಟವಾಗಿ ಹೋಗಿದೆ ಅದಲ್ಲದೆ ಈ ಪಟ್ಟಿಯು ಬೇರೆ ಕೆಲವು ದೋಷಗಳಿಂದ ಕೂಡಿದ್ದಾಗಿದೆ. ಸರ್ಕಾರದವರು ಇಷ್ಟು ಹಣವನ್ನು ಖರ್ಚುಮಾಡಿದರೂ ಕೂಡ ಸರಿಯಾದ ಮತದಾರರ ಪಟ್ಟಿ ತಯಾರು ಮಾಡಿಲ್ಲ. ಅದು ಒಂದು ದೊಡ್ಡ "ಕ್ರಿಮಿನಲ್ ವೇಸ್ಟ್" ಎಂದು ನಾನು ಹೇಳಬಯಸುತ್ತೇನೆ. ಇನ್ನು ಮುಂದಾದರು ಕೂಡ ಸ್ವಲ್ಪ ಹೆಚ್ಚು ಖರ್ಚಾದರೂ ಪರವಾಗಿಲ್ಲ; ಮತದಾರರ ಪಟ್ಟಿ ಮಾತ್ರ ಬಹಳ ಕ್ರಮವಾಗಿದ್ದುಕೊಂಡು ಯಾವ ಮನುಷ್ಯನ ಮತವು ಕೂಡ ಪೋಲಾಗದಂತೆ ಏರ್ಪಾಡ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕ ಬೋರ್ಡ್ ಚುನಾವಣೆ ಕೂಡ ಹತ್ತಿರ ಬರುತ್ತಾ ಇದೆ. ಆದ್ದರಿಂದ ಒಂದು ಶುದ್ಧವಾದ ಮತದಾರ ಪಟ್ಟಿಯನ್ನು ಮಾಡುವುದು ಒಳ್ಳೆಯದು ಎಂದು ಸೂಚನೆಯನ್ನು ಕೊಡಬಯಸುತ್ತೇನೆ.

(ಶ್ರೀ ಪಿ. ಎಂ. ಭಾಂಗಿ)

ಇನ್ನು ಲ್ಯಾಂಡ್ ರೀಫಾರ್ಮ್ಸ್ ಕಾನೂನಿನ 66ನೇ ಕಾಲಂ ಪ್ರಕಾರ ಭೂ ಮಾಲಿಕರು ಡಿಕ್ಲೆರೇಷನ್ ಕೊಡುವ ಬಗ್ಗೆ ಗೆಜೆಟ್ ನೋಟಿಫೀಕೇಶನ್ ಪ್ರಕಟಿಸಿದ್ದಾರೆ. ಅನಂತರ ಭೂ ಮಾಲಿಕರು ತಮ್ಮ ಹಿಡುವಳಿ ಬಗ್ಗೆ ಡಿಕ್ಲೇರೇಶನ್ ಕೊಟ್ಟರು. ತದನಂತರ ತಹಸೀಲ್ದಾರರು ಸೀಲಿಂಗ್ ಫಿಕ್ಸ್ ಮಾಡಿ ಸರ್ಪ್ಲಸ್ ಏರಿಯಾ ಡಿಕ್ಲೇರ್ ಮಾಡಿದ್ದಾರೆ. ಆದರೆ ಸರ್‌ಪ್ಲಸ್ ಏರಿಯಯದ ಬಗ್ಗೆ ಕೊಡಬೇಕಾದಂತಹ ಪರಿಹಾರಧನದ ಬಗ್ಗೆ ಈ ಬಜೆಟ್ಟಿನಲ್ಲಿ ಯಾವ ಒಂದು ವ್ಯವಸ್ಥೆಯನ್ನು ಮಾಡಿಲ್ಲ. ಆದ್ದರಿಂದ ಈ ಸರ್‌ಪ್ಲಸ್ ಇರುವ ಜಮೀನನ್ನು ಹಂಚುವ ಕೆಲಸ ತಡೆದು ನಿಂತಿದೆ. ಆದ್ದರಿಂದ ಸರಕಾರದವರು ಆ ಪರಿಹಾರ ಧನ ಕೊಡುವ ಬಗ್ಗೆ ಒಂದು ತೀವ್ರ ಏರ್ಪಾಟನ್ನು ಮಾಡಿ ಉಳುವವನೇ ಭೂಮಿಯ ಒಡೆಯನಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ಭೂ ಸುಧಾರಣೆ ಕಾಯದೆ 44ನೇ ಕಲಮಿನ ಪ್ರಕಾರ ನೋಟಿಫಿಕೆಷನ್ ಮಾಡಿದರೆ "ಟಿಲ್ಲರ್ಸ್ ಆಫ್ ದಿ ಸಾಯಿಲ್ ವಿಲ್‌ಬಿದಿ ಓನರ್ಸ್ ಆಫ್ ದಿ ಲ್ಯಾಂಡ್ ಆಗುತ್ತಾರೆ. ಮುಂದೆ ನಮ್ಮ ಸಮಾಜದಲ್ಲಿ ಗೇಣಿದಾರರಾಗಿ ಇರುವಂತಹ ಜನರು ಅದರ ಮಾಲೀಕರಾಗುತ್ತಾರೆ. ಆದ್ದರಿಂದ ಆ 44ನೇ ಕಲಮಿನ ಪ್ರಕಾರ ಸರ್ಕಾರ್ ಗೆಜೆಟ್ ಪ್ರಕಟನೆಮಾಡಬೇಕು. ಮತ್ತು ಭೂಮಾಲಿಕರಿಗೆ ಇದರ ಪರಿಹಾರ ಧನವನ್ನು ಕೊಡಬೇಕು. ಈ ಬಾಬಿನ ಬಗ್ಗೆ ಬಜೆಟ್ಟಿನಲ್ಲಿ ಬೇಕಾದ ಹಣವನ್ನು ಒದಗಿಸುವಂತಹ ಏರ್ಪಾಡು ಮಾಡಬೇಕೆಂದು ಮಾನ್ಯ ಅರ್ಥಸಚಿವರಿಗೆ ಸೂಚಿಸುತ್ತೇನೆ.

ಅದೇ ಪ್ರಕಾರ ಅಡ್ಮಿನಿಷ್ಟ್ರೇಶನ್ ಆಫ್ ಜಸ್ಟೀಸ್ ಬಗ್ಗೆ ನನ್ನ ವಿಚಾರ ಹೇಳುತ್ತೇನೆ. ನ್ಯಾಯವೆಂಬುದು ಬಾಗಿಲಿನಲ್ಲಿ ದೊರೆಯಬೇಕು. ಜಸ್ಟೀಸ್ ದೂರದಲ್ಲಿ ದೊರೆತರೆ ಲಿಟಿಗಂಟಿನ್ನ ವಿಪರೀತವಾಗಿ ತ್ರಾಸಾಗುತ್ತದೆ. ಆದ್ದರಿಂದ ಈ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟುಗಳನ್ನು ನೇಮಕ ಮಾಡಬೇಕು. ಆ ಬಗ್ಗೆ ಎಷ್ಟು ಖರ್ಚಾಗುತ್ತದೋ ಅಷ್ಟು ಖರ್ಚನ್ನು ಅರ್ಥ ಮಂತ್ರಿಗಳು ಮಂಜೂರು ಮಾಡಬೇಕೆಂದು ಪ್ರಾರ್ಥನೆ.

ಎರಡನೇಯದಾಗಿ ಈ ರಾಜ್ಯದಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟರುಗಳಿಗೆ ವಾಸಿಸಲು ಸರ್ಕಾರಿ ಕಟ್ಟಡಗಳಿಲ್ಲ. ಅವರು ಖಾಸಗಿ ಮನೆಮಾಲಿಕರ ಮನೆ ಬಾಡಿಗೆಯಿಂದ ತೆಗೆದು ಕೊಳ್ಳಬೇಕಾಗುತ್ತದೆ. ಆಯಾ ಮಾಲಿಕರ ವ್ಯಾಜ್ಯಗಳು ಕೋರ್ಟಿನಲ್ಲಿ ಇರುವುದರಿಂದ ಆಯಾ ಮುನ್ಸೀಫ್‌ರಿಗೆ ನ್ಯಾಯ ನಿರ್ಣಯ, ಮಾಡುವಲ್ಲಿ ತೊಂದರೆ ಉಂಟಾಗುತ್ತದೆ. ಆದ್ದರಿಂದ ಸರ್ಕಾರದ ಪರವಾಗಿ ಅವರಿಗೆ ವಸತಿ ಸೌಕರ್ಯಕ್ಕಾಗಿ ಸೂಕ್ತ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ಆ ಪ್ರಕಾರ ಎಷ್ಟು ಖರ್ಚಾಗುತ್ತದೋ ಅಷ್ಟನ್ನ ಸರ್ಕಾರದವರು ವೆಚ್ಚಮಾಡಬೇಕು. ಆ ಬಗ್ಗೆ ಬಡ್ಜೆಟ್ಟಿನಲ್ಲಿ ತಕ್ಕ ಹಣವನ್ನು ಒದಗಿಸಬೇಕೆಂದು ನಾನು ಎರಡನೆ ಸೂಚನೆಯನ್ನು ಮಾಡುತ್ತೇನೆ. ಕೊನೆಯದಾಗಿ ಇವತ್ತಿನ ದಿವಸ ಸರ್ಕಾರದವರು ವೋಟ ಆನ್ ಅಕೌಂಟ್ ಮತ್ತು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಏನಿಟ್ಟಿದ್ದಾರೋ ಅದಕ್ಕೆ ನಾನು ತುಂಬಾ ಬೆಂಬಲವನ್ನು ನೀಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ ಮತ್ತು ನನ್ನ ಬಂಧುಗಳೇ, ಈ ದಿವಸ ಸಪ್ಲಿಮೆಂಟರಿ ಡಿಮ್ಯಾಂಡ್ ಮತ್ತು ವೋಟ್ ಆನ್ ಅಕೌಂಟ್ ಈ ವಿಚಾರಗಳ ಮೇಲೆ ಚರ್ಚೆ ನಡೆದಿದೆ. ನಾನು ಅದರ ಮೇಲೆ ಹೆಚ್ಚಿಗೆ ಚರ್ಚೆಮಾಡುವುದಕ್ಕೆ ಹೋಗದೆ ನನಗೆ ತಿಳಿದಿರುವ ಒಂದೆರಡು ಸಲಹೆಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬಂದು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ. ಈ ಡಿಮ್ಯಾಂಡಿನಲ್ಲಿ ಎಲ್ಲಾ ಇಲಾಖೆಗಳಿಗೂ ಹಣವನ್ನು ಹಂಚಿಕೆ ಮಾಡಿದ್ದಾರೆ. ಹಣವನ್ನೇನೋ ಒದಗಿಸಲಾಗಿದೆ. ಆದರೆ ಅದರ ವಿಲೇವಾರಿ ಮಾತ್ರ ಕಾಣುತ್ತಾ ಇಲ್ಲ. ಇರ್ರಿಗೇಷನ್‌ಕ್ರಾಪ್ಸ್‌ನಲ್ಲಿ ಕಮರ್ಷಿಯಲ್ ಕ್ರಾಪ್ಸ್ ಮತ್ತು ನಾನ್ ಕಮರ್ಷಿಯಲ್ ಕ್ರಾಪ್ಸ್ ಎಂಬುದಾಗಿ ಎರಡು ಭಾಗಗಳಾಗಿವಿಂಗಡಿಸಿದ್ದಾರೆ. ಮೊದಲು ಮೈನರ್ ಇರ್ರಿಗೇಷನ್ ಮತ್ತು ಮೇಜರ್ ಇರ್ರಿಗೇಷನ್ ಎಂಬುದಾಗಿ ಎರಡು ಭಾಗಗಳಿದ್ದುವು. ಈಗ ಯಾವರೀತಿ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಆದರೆ ಕೇವಲ ಮೇಜರ್ ಇರ್ರಿಗೇಷನ್ ಬಗ್ಗೆ ಅನೇಕ ಯೋಜನೆಗಳನ್ನು ಮಾಡಿದ್ದಾರೆ. ನಮ್ಮ ದೇಶ ಹೆಚ್ಚು ಗುಡ್ಡಗಾಡು ಪ್ರದೇಶಗಳಿಂದ ಕೂಡಿದ್ದು. ಆದ್ದರಿಂದ ಹೆಚ್ಚಿಗೆ ಮೈನರ್ ಇರ್ರಿಗೇಷನ್ ಕಡೆಗೇ ಸರ್ಕಾರದವರು ಗಮನಕೊಟ್ಟು ಹೆಚ್ಚು ಜನರಿಗೆ ಈ ಒಂದು ಸೌಲಭ್ಯವನ್ನು ಕಲ್ಪಿಸಿಕೊಡಬೇಕು. ಸಾಮಾನ್ಯವಾಗಿ ಒಂದು ದೊಡ್ಡ ಪ್ರಾಜೆಕ್ಟನ್ನು ಕಟ್ಟಿದರೆ ಹೆಚ್ಚಿಗೆ ಸಬ್‌ವೆನ್‌ಷನ್ ಬರುತ್ತದೆ. ಹಿಂದೆ ಪಾಳೆಯಗಾರರ ಕಾಲದಲ್ಲಿ. ರಾಜಮಹಾರಾಜರ ಕಾಲದಲ್ಲಿ ಕಟ್ಟಿದ್ದಂಥ ಅನೇಕ ಕೆರೆಗಳು ನಾದುರಸ್ತಾಗಿಯೇ ಉಳಿದಿವೆ, ಮೈನರ್ ಇರ್ರಿಗೇಷನ್ ಹೆಡ್‌ನಲ್ಲಿ ಕೇವಲ 5–10–15–20 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಆ ಕೆರೆಗಳ ದುರಸ್ತುಮಾಡಿದರೆ ನೂರಾರು ಎಕರೆಗಳಷ್ಟು ಜಮೀನು ಮಾಡಲು ಸೌಲಭ್ಯ ಸಿಕ್ಕಿ

ಹೆಚ್ಚಿಗೆ ಪ್ರಯೋಜನವಾಗುತ್ತದೆ. ಆ ರೀತಿ ಮಾಡದೆ ಹೆಚ್ಚಿಗೆ ಮೇಜರ್ ಇರ್ರಿಗೇಷನ್ನಿಗೇ ಪ್ರಾಶಸ್ತ್ಯ ಕೊಟ್ಟರೆ ಕೇವಲ ಕೆಲವೇ ಭಾಗದಲ್ಲಿ ಮಾತ್ರ ಸೌಕರ್ಯ ಪಡೆಯಬಹುದು. ಈ ಬಗ್ಗೆ ದೇಶದ ಎಲ್ಲಾ ಭಾಗಗಳಲ್ಲಿಯೂ ಸೌಕರ್ಯ ಪಡೆಯುವುದಕ್ಕೆ ಸಾಧ್ಯವಾಗುವಂತೆ ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಸಣ್ಣಸಣ್ಣ ಹಿಡುವಳಿದಾರರಿಗೆ ಮೈನರ್ ಇರ್ರಿಗೇಷನಿನಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡುವ ಉದ್ದೇಶದಿಂದ ಹೆಚ್ಚಿನ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮತ್ತೆ ಕೆಲವು ಕ್ಯಾಚ್‌ಮೆಂಟ್ ಏರಿಯಾಗಳಿವೆ. ಅಂತಹ ಪ್ರದೇಶಗಳಲ್ಲಿ ಹೆಚ್ಚಿಗೆ ನೀರಾವರಿ ಸೌಲಭ್ಯಗಳನ್ನು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಅಂತಹ ಪ್ರದೇಶಗಳಲ್ಲಿ ಮೈನರ್ ಇರ್ರಿಗೇಷನ್ ಸಾಧ್ಯ. ಆದರೆ ಅಲ್ಲಿ ಮಾತ್ರ ಹೊಸದಾಗಿ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲದಿದ್ದರೂ 10-12 ಎಕರೆಗಳಷ್ಟು ಸಣ್ಣಸಣ್ಣ ಪಿಕಪ್‌ಗಳನ್ನು ಮತ್ತು ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆಮಾಡುತ್ತೇನೆ. ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಸರ್ಕಾರದವರು ಪ್ರಪ್ರಥಮವಾಗಿ ಕೊಡಬೇಕು.

ಇನ್ನು ಸಾರಿಗೆ ವಿಷಯದಲ್ಲಿ ಹೇಳುವುದಾದರೆ, ಈ ವಿಚಾರದಲ್ಲಿ ಹೆಚ್ಚು ಅಭಿವೃದ್ಧಿಯಾಗುತ್ತಿರುವುದು ಕೇವಲ ನ್ಯಾಷನಲ್ ಹೈವೇ, ಸ್ಟೇಟ್ ಫಂಡ್ ರೋಡ್ ಮತ್ತು ಇಂಟರ್ ವಿಲೇಜ್ ಕಮ್ಯೂನಿಕೇಷನ್ ರೋಡ್‌ಗಳ ಕಡೆ ಹೆಚ್ಚಿಗೆ ಗಮನ ಕೊಡುತ್ತಿಲ್ಲ ಎಂದರೆ ಅದೇನೂ ತಪ್ಪಾಗಲಾರದು. ಆದರೆ ವಿ. ಪಿ. ರೋಡ್‌ಗಳಲ್ಲಿ ಸಾರಿಗೆ ಸೌಕರ್ಯ ಏನೇನೂ ಚೆನ್ನಾಗಿಲ್ಲ. ಕ್ಷಾಮ ಬಂದರೆ ಕ್ಷಾಮ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆಂದು ಬಾಯಲ್ಲಿ ಹೇಳುತ್ತಾರೆ. ಆದರೆ ಅಂತಹ ಕಾಮಗಾರಿ ಕೆಲಸಗಳು ಏನೇನೂ ಆಗಿಲ್ಲ. ಕೇವಲ ಸಣ್ಣಸಣ್ಣ ಕೆರೆಗಳ ರಿಪೇರಿ ಕಾಮಗಾರಿಗಳನ್ನೇ ಮಾಡಿಲ್ಲ. ಇದರಿಂದ ರೈತರು ಬೇಸತ್ತು ಸರಿಯಾಗಿ ವ್ಯವಸಾಯವನ್ನು ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ನ್ಯಾಷನಲ್ ಹೈವೇಗೆ ಕೊಡುವಷ್ಟು ಆದ್ಯತೆಯನ್ನು ಇಂಟರ್ ವಿಲೇಜ್ ಕಮ್ಯೂನಿಕೇಷನ್ಸ್ ಬಗ್ಗೆಯೂ ಹೆಚ್ಚಿನ ಆದ್ಯತೆ ಕೊಟ್ಟು ಅದಕ್ಕೆ ಪ್ರತ್ಯೇಕವಾಗಿ ಹೆಚ್ಚಿನ ಹಣವನ್ನು ಒದಗಿಸಬೇಕು. ಈಗ ಲೋಕೋಪಯೋಗಿ ಇಲಾಖೆಗೆ ಇಂಟರ್ ವಿಲೇಜ್ ಕಮ್ಯೂನಿಕೇಷನ್ ರೋಡ್ಸ್ ವಿಚಾರದಲ್ಲಿ ಅಭಿವೃದ್ಧಿಮಾಡಲು ಹೆಚ್ಚಿನ ಹಣವನ್ನು ಕೊಡುತ್ತಿದ್ದಾರೆ. ಈಗ I V C ರೋಡುಗಳನ್ನು ತಾಲ್ಲೂಕ್ ಬೋರ್ಡ್‌ಗೆ ವಹಿಸಿ ಕೊಟ್ಟಿದ್ದಾರೆ ಆದರೆ ಹಣವನ್ನು ಮಾತ್ರ ಕೊಟ್ಟಿಲ್ಲ. ಪಿ. ಡಬ್ಲ್ಯು. ಡಿ.ಗೆ I. V. C. ಗಾಗಿ ಕೊಡುತ್ತಿದ್ದ ಹಣವನ್ನು ತಾಲ್ಲೂಕ್ ಬೋರ್ಡಿಗೆ ಕೊಟ್ಟರೆ ಅದನ್ನು ದುರಸ್ತಿ ಮಾಡಲು ಸಾಧ್ಯ. ನ್ಯಾಷನಲ್ ಹೈವೇಗೋಸ್ಕರವಾಗಿಯೂ ಪಿ. ಡಬ್ಲ್ಯು. ಡಿ. ಅವರಿಗೆ ಹಣವನ್ನು ಕೊಟ್ಟಿದ್ದಾರೆ. ಏನಾದರೂ ತಾಲ್ಲೂಕಿನಲ್ಲಿ ರಸ್ತೆಗಳ ಕಾಮಗಾರಿಯಾಗಬೇಕಾಗಿದ್ದರೆ ತಾಲ್ಲೂಕು ಬೋರ್ಡ್ ಅಧ್ಯಕ್ಷರನ್ನು ತೋರಿಸುತ್ತಾರೆ. ಅವರ ಬಡ್ಜೆಟ್ ಕೇವಲ ಒಂದು ಲಕ್ಷ ಅಥವಾ ಐವತ್ತು ಸಾವಿರ. ಅವರ ಒಟ್ಟು ಬಡ್ಜೆಟ್ಟನ್ನೆಲ್ಲಾ ಲೆಕ್ಕ ಹಾಕಿದರೆ ಕೇವಲ ಇಂಟರ್ ವಿಲೇಜ್ ಕಮ್ಯೂನಿಕೇಷನ್ ರೋಡ್‌ಗಳನ್ನು ಮೇಂಟೇನ್ ಮಾಡುವುದಕ್ಕೇ ಸಾಕಷ್ಟು ಹಣವಿರುವುದಿಲ್ಲ. ಆದ್ದರಿಂದ ಬಡ್ಜೆಟ್ಟಿನಿಂದ ಯಾರಿಗೇ ಆಗಲಿ, ಅಥವಾ ಯಾವ ಇಲಾಖೆಗೇ ಇಂತಹ ಕಾಮಗಾರಿಗಳ ಬಗ್ಗೆ ಹಣವನ್ನು ಒದಗಿಸಿದರೆ, ಆಯಾ ಇಲಾಖೆಯವರು ಸರಿಯಾಗಿ ಕೆಲಸ ಮಾಡುವುದಕ್ಕೆ ಸಹಾಯವಾಗುತ್ತದೆ. ಮತ್ತು ಆಯಾ ಇಲಾಖೆಗಳಿಗೆ ಕಾಲಕ್ಕೆ ಸರಿಯಾಗಿ ವರ್ಗಾವಣೆ ಮಾಡಬೇಕು. ಆ ರೀತಿ ಮಾಡದೆ ಕೇವಲ ಪೇಪರ್ ಟ್ರಾನ್ಸ್‌ಫರ್ಸ್ ಆದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸುಮ್ಮನೆ ಅಧ್ವಾನವಾಗುತ್ತದೆ. ನಾನು ಅನೇಕಸಾರಿ ತಾಲ್ಲೂಕು ಬೋರ್ಡ್ ಅಧ್ಯಕ್ಷರುಗಳ ಸೆಮಿನಾರ್‌ಗಳಲ್ಲಿ ಈ ವಿಷಯವನ್ನು ಚರ್ಚೆಮಾಡಿದ್ದಾಗ್ಯೂ ಇದುವರೆಗೂ ಯಾವ ಒಂದು ಕಾರ್ಯವೂ ಕಾರ್ಯಗತವಾಗಲಿಲ್ಲ. ನಾವು 25 ವರ್ಷಗಳಿಂದಲೂ ಪ್ರಜಾಪ್ರಭುತ್ವವನ್ನು ಕಟ್ಟಿ ಆಳುತ್ತಾ ಇದ್ದೇವೆ. ಆದರೆ ಯಾವ ಒಂದು ಸೌಕರ್ಯವೂ ಹಳ್ಳಿಗಾಡಿನವರಿಗೆ ದೊರೆಯದೆ ಅವರು ಅನೇಕ ಕಷ್ಟಗಳನ್ನು ಪಡುತ್ತಿದ್ದಾರೆ. ಬಡ ರೈತರಿಗೆ ಯಾವ ವಿಧವಾದ ಸೌಲಭ್ಯವೂ ಒದಗಿಲ್ಲ. ಆದ್ದರಿಂದ ನೀವು ಯಾವ್ಯಾವ ಐಟಂಗೆ ಬಡ್ಜೆಟ್ಟಿನಲ್ಲಿ ಹಣವನ್ನು ಮೀಸಲಾಗಿಡುತ್ತೀರೋ ಅದನ್ನು ಸರಿಯಾಗಿ ವಿಲೇವಾರಿ ಮಾಡಬೇಕು. ಹಿಂದೆ ಆಗಿರತಕ್ಕ ಅನ್ಯಾಯಗಳ ಬಗ್ಗೆ ಹೊಸಬರಾಗಿ ಬಂದಿರುವವರು ಮೇಲೆ ಯಾವ ಒಂದು ಆಕ್ಷೇಪಣೆಯನ್ನು ಎತ್ತುವುದಕ್ಕಾಗುವುದಿಲ್ಲ. ಇನ್ನು ಮುಂದಾದರೂ ಹೊಸದಾಗಿ ಬಂದಿರತಕ್ಕ ಮಂತ್ರಿಗಳು ಈ ವಿಚಾರಗಳ ಕಡೆಗೆ ಹೆಚ್ಚಿನ ಲಕ್ಷ್ಯವಿಡಬೇಕು. ಇದುವರೆಗೂ ಆಗಿರತಕ್ಕ ಅನ್ಯಾಯಗಳು ಜಾಗ್ರತೆಯಾಗಿ ಸರಿಹೋಗಲಿ ಎಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

(ಶ್ರೀ ಎಚ್. ಜಿ. ಚನ್ನಪ್ಪ)

ಇನ್ನು ಅಗ್ರಿಕಲ್‌ಚರಲ್ ವಿಷಯ. ಈ ಬಾಬಿನಲ್ಲಿ ಹಣವನ್ನು ಯಥೇಚ್ಛವಾಗಿ ಕೇಳಿದ್ದಾರೆ. ವ್ಯವಸಾಯದಲ್ಲಿ ಏನಾದರೂ ಅಭಿವೃದ್ಧಿಯಾಗಿದೆಯೇ ಎಂಬುದಾಗಿ ಕೇಳಿದರೆ ಬರೀ ಸೆಮಿನಾರ್ಸ್ ಆಗುತ್ತಿವೆ. ಆ ಸೆಮಿನಾರ್‌ಗಳಲ್ಲಿ ಆ ಸ್ಕೀಮು, ಈ ಸ್ಕೀಮು ಆಗಬೇಕು ಎಂಬುದಾಗಿ ಹೇಳಿ ಅದಕ್ಕೆ ಇಷ್ಟು, ಇದಕ್ಕೆ ಅಷ್ಟು ಎಂಬುದಾಗಿ ಹಣವನ್ನು ಒದಗಿಸಿಕೊಂಡರೂ ಯಾವ ಯೋಜನೆಗಳೂ ಸಹ ಕಾರ್ಯಗತವಾಗಿಲ್ಲ. ಸ್ವಾತಂತ್ರ್ಯ ಬಂದ ಹೊಸದರಲ್ಲಿ ಮುಂಚೆ ಇಂತಹ ಸೆಮಿನಾರ್‌ಗಳಲ್ಲಿ ಏನಾದರೂ ಚರ್ಚೆಯಾದರೆ ಅವುಗಳಿಂದ ಸ್ವಲ್ಪಮಟ್ಟಿಗೆ ಪ್ರತಿಫಲ ಜನರಿಗೆ ಸಿಗುತ್ತಿತ್ತು. ಈಗ ಅಂಥಾದ್ದೇನೂ ಇಲ್ಲ. ಇದರಿಂದ ತಾಲ್ಲೂಕುಗಳಲ್ಲಿ ಮತ್ತು ಹೋಬಳಿಗಳಲ್ಲಿ ರೈತರಿಗೆ ಏನೂ ಪ್ರಯೋಜನವಾಗುತ್ತಿರಲಿಲ್ಲ. ಅದಕ್ಕಾಗಿ ರಿಫ್ರೆಷ್‌ಮೆಂಟ್ ಕೋರ್ಸುಗಳನ್ನು ವ್ಯವಸಾಯದ ಬಗ್ಗೆ ಹೆಚ್ಚಿಗೆ ಮಾಡಬೇಕು. ರೈತರಿಗೆ ಆಹಾರಪದಾರ್ಥಗಳನ್ನು ಯಾವ ರೀತಿ ಬೆಳೆಯಬೇಕು, ವ್ಯವಸಾಯವನ್ನು ಯಾವರೀತಿ ಮಾಡಬೇಕೆಂಬ ಬಗ್ಗೆ ತಕ್ಕ ತಿಳುವಳಿಕೆಗಳನ್ನು ಕೊಡತಕ್ಕ ವ್ಯವಸ್ಥೆ ಕೂಡಲೇ ಆಗಬೇಕು. ಶಕ್ತಿವಾನ್ ಮುಸುಕಿನ ಜೋಳ ಮತ್ತು ಸಜ್ಜೆ ಇತ್ಯಾದಿ ಬೆಳೆಗಳನ್ನು ಬೆಳೆಯಲು ತಕ್ಕ ಆರ್ಥಿಕ ಸಹಾಯವನ್ನು ಒದಗಿಸಿಕೊಡಬೇಕು. ಆ ಸೌಕರ್ಯ ನಮ್ಮ ರೈತರಿಗೆ ದೊರೆಯುತ್ತಾ ಇಲ್ಲ. ವ್ಯಥಾ ಅನ್ಯಾಯವಾಗಿ ಖರ್ಚುಮಾಡುವುದಕ್ಕೆ ಬದಲು ಅದನ್ನು ನಿಲ್ಲಿಸಿ ಬಡ ರೈತರಿಗೆ ಈ ಮೂಲಕ ಸಹಾಯಮಾಡಬೇಕು. ನುರಿತ ರೈತರನ್ನೊಳಗೊಂಡಂಥ ಒಂದು ಸಮಿತಿಯನ್ನು ಮಾಡಿ, ರೈತರು ಬೆಳೆಯುವಂಥ ಪದಾರ್ಥಗಳಿಗೆ ಒಂದು ಸ್ಟಾಂಡರ್ಡ್ ರೇಟನ್ನು ನಿಗದಿಮಾಡಬೇಕು. ಇಲ್ಲದಿದ್ದರೆ ಆಹಾರದ ಸಮಸ್ಯೆ ಬಗೆಹರಿಯುವುದಿಲ್ಲ. ಪರದೇಶಗಳೊಡನೆ ಭಿಕ್ಷೆ ಬೇಡುವುದು ತಪ್ಪುವುದಿಲ್ಲ. ರೈತನಾದವನಿಗೆ ಮುಸುಕಿನ ಜೋಳಕ್ಕೆ ಹೆಚ್ಚಿಗೆ ಬೆಲೆ ಇದ್ದಾಗ ಜನಗಳು ಯಾವರಿಸರು ಇಲ್ಲದೇ ತಾವಾಗಿಯೇ ಮುಸಿಕಿನ ಜೋಳವನ್ನು ಮಳೆ ನೀರಿನಲ್ಲಿಯೂ ಕೂಡ ಬೆಳೆದರು ಕಾರಣ ಹೆಚ್ಚಿಗೆ ಹಣ ಪಡೆಯಬಹುದೆಂಬ ಉದ್ದೇಶ್ಯದಿಂದ ರಾಗಿ ಆದರೆ ಒಂದು ಪಲ್ಲ ಆಗುವ ಕಡೆ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯಬಹುದು ಎಂದು ಬೆಳೆದರು. ಜೋಳದ ಬೆಲೆ ಕ್ವಿಂಟಾಲಿಗೆ 25ರಿಂದ 30—40 ರೂಪಾಯಿಗಳಾಯಿತು. ಹೀಗಾದುದರಿಂದ ಜೋಳವನ್ನು ಬೆಳೆಯುವುದನ್ನೇ ಬಿಟ್ಟರು. ಅದರಿಂದ ಆಹಾರ ಅಭಾವ ಜಾಸ್ತಿಯಾಗಿದೆ. ಆದುದರಿಂದ ಆಹಾರ ಧಾನ್ಯಗಳ ಬೆಲೆಯನ್ನು ನಿಗದಿ ಮಾಡದಿದ್ದರೆ ರೈತನ ಸ್ಥಿತಿ ಬಹಳ ಕಷ್ಟವಾಗುತ್ತದೆ. ಆದುದರಿಂದ ಸೆಮಿನಾರುಗಳನ್ನು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇಂಥಹ ಸೆಮಿನಾರುಗಳನ್ನು ಮಾಡುವುದನ್ನು ಕಡಿಮೆ ಮಾಡಿ ಅದಕ್ಕೆ ಖರ್ಚಾಗುವ ಹಣವನ್ನು ರೈತನಿಗೆ ಒಂದು ಗೊತ್ತಾದ ಬೆಲೆಯನ್ನು ಕೊಡುವುದರ ಮೂಲಕ ಸಹಾಯ ಮಾಡಿ, ಉದಾಹರಣೆಗೆ:—ಒಂದು ಎಕರೆಗೆ ಮುಸುಕಿನ ಜೋಳ ಬೆಳೆಯುವುದಕ್ಕೆ 500 ರೂಗಳು ಖರ್ಚಾಗುತ್ತದೆ. ಆದರೆ ಅವನು ಮಾರಿದಾಗ 250 ರೂಪಾಯಿ ಬರುವುದಾದರೆ ಅವನು ಯಾವರೀತಿ ವ್ಯವಸಾಯ ಮಾಡುವುದಕ್ಕೆ ಮುಂದೆ ಬರುತ್ತಾನೆ. ಆದುದರಿಂದ ಅವನ ಖರ್ಚಿಗೆ ತಕ್ಕಂತೆ ರೇಟನ್ನು ಫಿಕ್ಸ್‌ಮಾಡಿ ಬೆಳೆದ ಬೆಳೆಯಿಂದ ಲಾಭ ಬರುವಂತಾದಾಗ ಮಾತ್ರ ಅವನು ವ್ಯವಸಾಯವನ್ನು ಹೆಚ್ಚು ಮಾಡುತ್ತಾನೆ. ಆದುದರಿಂದ ಆಹಾರಾಭಾವ ತಾನಾಗೇ ಕಡಿಮೆಯಾಗುತ್ತದೆ.

ಆದುದರಿಂದ ನಾನು ಮೊಟ್ಟಮೊದಲನೇಯದಾಗಿ ಹೇಳುವುದೇನೆಂದರೆ ನಮ್ಮ ಆಹಾರ ಸರಬರಾಜು ಸುಧಾರಣೆಯಾಗಿ ನಾವು ನಮ್ಮ ಕಾಲಮೇಲೆ ನಿಲ್ಲುವಂತಾಗಬೇಕಾಗಿದ್ದರೆ ರೈತರು ಬೆಳೆಯತಕ್ಕ ದವಸ ಧಾನ್ಯಗಳೇನಿವೆ ಅವುಗಳಿಗೆ ಒಂದು ಸರಿಯಾದ ನ್ಯಾಯವಾದ ಬೆಲೆಯನ್ನು ನಿಗದಿ ಮಾಡಿ ಅದರಿಂದ ಅವರಿಗೆ ಲಾಭ ಸಿಕ್ಕುವಂತೆ ಮಾಡಬೇಕು. ನಾನು ಕೇಳಿದ್ದೇನೆ. ಅಮೇರಿಕಾ ದೇಶದಲ್ಲೂ ಸಹಾ ರೈತರಿಗೆ ಅವರು ಬೆಳೆಯತಕ್ಕ ದವಸಕ್ಕೆ ಒಂದು ಸ್ಟಾಂಡರ್ಡ್ ರೇಟನ್ನು ನಿಗದಿಮಾಡಿದ್ದಾರಂತೆ. ಅವರು ಬೆಳೆದ ಬೆಳೆ ಜಾಸ್ತಿಯಾಗಿ ಬೆಲೆ ಕುಸಿಯುವಂತಾದಾಗ ಸರ್ಕಾರದವರು ರೈತನಿಗೆ ಸರಿಯಾದ ಬೆಲೆಯನ್ನು ಒದಗಿಸುವುದಕ್ಕಾಗಿ ಗೊತ್ತಾದದರದಲ್ಲಿಕೊಂಡು. ಅದು ಅವರಿಗೆ ಸಿಕ್ಕದಿದ್ದರೆ ಅವರು ಬೆಳೆದ ಧಾನ್ಯವನ್ನು ಸಮುದ್ರಕ್ಕೆಚೆಲ್ಲಿ ಅಲ್ಲಿರತಕ್ಕ ಮೀನುಗಳಿಗೆ ತಿನ್ನಿಸುತ್ತಾರೆಂದು ಕೇಳಿದ್ದೇನೆ. ಅಲ್ಲಿ ಹಾಗೆ ಮಾಡುವುದರಿಂದ ಒಂದು ನಿಗದಿಯಾದ ಧಾರಣೆ ಸಿಕ್ಕುವಂತೆ ಮಾಡುತ್ತಿದ್ದಾರಂತೆ.

5-00 P.M.

ಆದರೆ ನಮ್ಮಲ್ಲಿ ಇಲ್ಲಿಯತನಕ ನಡೆದಿರತಕ್ಕ ಸುಧಾರಣೆಗಳೆಲ್ಲಾ ಕೇವಲ ಕಾಗದದಮೇಲೆ ನಡೆದಿರತಕ್ಕವುಗಳಾಗಿವೆ. ನಾವು ಈ ದಿವಸ ಹೇಳುತ್ತಿರುವ ಆ 'ಗರೀಬೀಹಟಾವೋ' ಮತ್ತು

ಚುನಾವಣೆಗಳ ಕಾಲದಲ್ಲಿ ನಾವು ಜನರಿಗೆ ಕೊಡತಕ್ಕ ಭಾಷೆ ಪ್ರಮಾಣಗಳೆಲ್ಲಾ ನಾವಿಲ್ಲಿಗೆ ಬಂದ ಮೇಲೆ ಮರೆತು ಹೋಗುತ್ತವೆ. ನಾವು ನಮ್ಮಲ್ಲಿ ವ್ಯವಸಾಯಾಭಿವೃದ್ಧಿಗೆ ಸೌಲಭ್ಯಗಳನ್ನು ಒದಗಿಸುವುದರಲ್ಲಿ ರೈತನ ಧಾನ್ಯಗಳಿಗೆ ಒಂದು ಸ್ಟಾಂಡರ್ಡ್ ರೇಟು ಸಿಕ್ಕುವಂತೆ ಮಾಡಬೇಕಾದದ್ದು ಅತಿ ಮುಖ್ಯವಾದದ್ದು. ರೈತನ ಸುಧಾರಣೆಯಲ್ಲಿ ಇದು ಬಹಳ ಪ್ರಾಮುಖ್ಯವಾದದ್ದು. ಈ ಕಾರಣದಿಂದ ಸರ್ಕಾರದವರು ಈ ವಿಷಯಕ್ಕೆ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಹರಿಜನ ಗಿರಿಜನರ ವಿಚಾರಕ್ಕೆ ಬಂದರೆ ಅವರ ವಿಚಾರದಲ್ಲಿ ಎಲ್ಲರೂ ಹೇಳಿದ್ದೇ ಹೇಳಿದ್ದು. ಅವರಿಗೆ ಮೊಟ್ಟಮೊದಲು ವಸತಿ ಸೌಕರ್ಯಗಳನ್ನು ನಿರ್ಮಾಣ ಮಾಡಿಕೊಳ್ಳಲು ಪ್ರತಿಯೊಂದು ಮನೆಗೂ 400-500 ರೂಪಾಯಿಗಳನ್ನು ಕೊಡಲಾಗುತ್ತಿತ್ತು, ಆದರೆ ಆ ಹಣ ಏತಕ್ಕೂ ಸಾಲದೆಂದು ಆ ಪದ್ಧತಿಯನ್ನು ಬದಲಾವಣೆ ಮಾಡಲಾಯಿತು. ಅವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು ಮನೆಯೊಂದಕ್ಕೆ 3 ಸಾವಿರದಿಂದ 5 ಸಾವಿರದವರೆಗೆ ಸಾಲ ದೊರೆಯುವಂತೆ ಮಾಡಲು ಅವರದೇ ಆದ ಒಂದು ಗೃಹನಿರ್ಮಾಣ ಸಹಕಾರ ಸಂಘವನ್ನು ಸ್ಥಾಪಿಸಲು ಅವರಿಂದ ತಲಾ 50 ರೂಪಾಯಿಗಳಂತೆ ಷೇರ್ ಹಣವನ್ನು ವಸೂಲ್ಮಾಡಲಾಯಿತು. ಮೊದಲು ಮೊದಲು ಯಾರಿಗೆ ಸಾಲವನ್ನು ಕೊಡಲಾಯಿತೋ ಅವರಿಂದ ಸಾಲದ ಹಣವನ್ನು ಮರುಪಾವತಿ ಮಾಡುವುದಕ್ಕೆ ಕಷ್ಟವಾಯಿತು. ಕಾರಣ ಎನೆಂದರೆ ರಾಜ್ಯದಲ್ಲಿ 1964-65 ರಿಂದ ಪ್ರಕೃತಿ ವಿಕೋಪದಿಂದ ಮಳೆ ಬೆಳೆಗಳಾಗದೆ ಇದ್ದ ಕಾರಣ ಅವರಿಗೆ ಸಾಲವನ್ನು ತೀರಿಸುವುದಕ್ಕಾಗಲಿಲ್ಲ ಯಾವಾಗ ಅವರು ಆ ಸಾಲಗಳನ್ನು ತೀರಿಸಲಿಲ್ಲವೋ ಆಗ ಸಾಲಕ್ಕೆ ಹೊಸದಾಗಿ ಅರ್ಜಿಗಳನ್ನು ಹಾಕಿಕೊಂಡವರಿಗೆ ಸೊಸೈಟಿಗೆ ಬಾರೋಯಿಂಗ್ ಕ್ಯಾಪಾಸಿಟಿ ಇರುವುದಿಲ್ಲ ಎಂದು ಅವರಿಗೆ ಸಾಲ ಕೊಡಲು ಹಣವಿಲ್ಲ ಎಂದು ಹೇಳುತ್ತಿದ್ದಾರೆ. ಈಗ ಅವರಿಗೆ ಈ ಬಾಬಿಗೆ ಸಾಲಗಳನ್ನು ಕೊಡುವುದನ್ನೇ ನಿಲ್ಲಿಸಿದ್ದಾರೆ. ಆ ಜನರು ಸಹಕಾರ ಸಂಘಕ್ಕೆ ಷೇರ್ ಹಣವನ್ನು ಕಟ್ಟಲು ತಮ್ಮ ಮನೆಗಳಲ್ಲಿದ್ದ ಹೆಂಗಸರು ಮಕ್ಕಳ ಕಿವಿಗಳಲ್ಲಿದ್ದ ವಾಲೆ—ತಾಳಿಗಳನ್ನು ಅಡವಿಟ್ಟು ಷೇರು ಹಣವನ್ನು ಭರ್ತಿಮಾಡಿದ್ದಾರೆ. ಆದರೆ ಅಂಥವರಿಗೆ ಈ ದಿವಸ ಸಾಲ ಸಿಗುತ್ತಿಲ್ಲ. ಇದರಿಂದ ಮುಂದೆ ರಾಜ್ಯದಲ್ಲಿ ಅಹಾಕಾರ ಏಳಬಹುದು. ಸರ್ಕಾರದವರು ಇದಕ್ಕೆ ಅವಕಾಶ ಕೊಡಬಾರದು. ನಾವು ವಸೂಲ್ಮಾಡುವುದನ್ನು ಮಾಡೋಣ. ಆ ಕಾರಣಕ್ಕೆ ಹೊಸದಾಗಿ ಸಾಲ ಕೇಳತಕ್ಕವರಿಗೆ ಹಣವಿಲ್ಲ ಎಂದು ಹೇಳದೆ ಅವರಿಗೂ ಸಾಲಗಳನ್ನು ಕೊಡೋಣ ಎಂದು ನಾನು ಹೇಳುತ್ತೇನೆ. ಹೀಗೆ ಒಂದು ಸರಿಯಾದ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಂಡು, ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಅಧ್ಯಕ್ಷಮಹಾಶಯರೇ ಮತ್ತು ಸಭಿಕರೇ: ಈಗ ನಮ್ಮ ಮುಂದೆ ಬಜೆಟ್ಟನ್ನು ಮಂಡಿಸಿರತಕ್ಕ ಮಾನ್ಯ ಅರ್ಥಸಚಿವರು ರಾಜಮನೆತನದಿಂದ ಬಂದವರಾಗಿದ್ದಾರೆ. ಆದುದರಿಂದ ಅವರಿಗೆ ರೈತರ, ಕಾರ್ಮಿಕರ ಹಾಗೂ ದೀನದಲಿತರ ವಿಚಾರದಲ್ಲಿ ಒಂದು ಅನುಕಂಪವನ್ನು ಇಟ್ಟುಕೊಂಡು ರಾಜ್ಯದ ಬಜೆಟ್ಟನ್ನು ತಯಾರಿಸುತ್ತಾರೆಯೇ ಎಂಬ ಸಂಶಯ ಹುಟ್ಟುವುದು ಸಾಮಾನ್ಯವಾಗಿ ಎಲ್ಲರಿಗೂ ಸಹಜವಾದದ್ದು. ಆದರೆ ಅವರು ಹಾಗೆ ರಾಜಮನೆತನದಿಂದ ಬಂದವರಾಗಿದ್ದರೂ ಅವರಿಗೆ ರೈತರ, ಕಾರ್ಮಿಕರ ಹಾಗೂ ದೀನದಲಿತರ ಬಗ್ಗೆ ಬಹಳ ಅನುಕಂಪವಿದೆ. ಅವರು ಕಟ್ಟಾ ಸಮಾಜವಾದಿಗಳು. ದೇಶದಲ್ಲಿರತಕ್ಕ ಬಡಜನತೆಯ ಬಗ್ಗೆ ದುಡಿಯಲು ಅವರು ಕಂಕಣ ಬದ್ಧರಾಗಿರುತ್ತಾರೆ.

ನಾವಿಂದು ನಮ್ಮ ರಾಜ್ಯದಲ್ಲಿ ಬಡತನವನ್ನು ನೀಗತಕ್ಕ ವಿಚಾರದಲ್ಲಿ ಮಾಡಬೇಕಾದ ಕಾರ್ಯಗಳು ಬಹಳ ಇವೆ. ದೇಶಕ್ಕೆ ಸ್ವಾತಂತ್ರ್ಯ ಬಂದು 23-24 ವರ್ಷಗಳಾದವು. ಆದರೆ ಆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನತೆ ಜೀವನ ಹಿಂದೆ ಯಾವರೀತಿ ಇದ್ದಿತೋ ಇಂದೂ ಹಾಗೇ ಇದೆ. ಆ ಜನರಿಗೆ ಇಲ್ಲಿ ನಗರವಾಸಿಗಳಿಗೆ ದೊರೆಯುತ್ತಿರುವಂಥ ಯಾವ ಸೌಲಭ್ಯಗಳೂ ದೊರೆಯುತ್ತಿಲ್ಲ. ಯಾವ ಸೌಲಭ್ಯಗಳೂ ದೊರೆಯಲು ಬಹಳ ದುರ್ಲಭವಾಗಿ ಅವರ ಜೀವನ ಬಹಳ ಕಷ್ಟ ಕಾರ್ಪಣ್ಯಗಳಿಗೆ ಸಿಕ್ಕಿಕೊಂಡಿದೆ. ಅವರ ನಿತ್ಯ ಜೀವನಕ್ಕೆ ಅತ್ಯವಶ್ಯಕ ಆದಂಥ ಒಂದು ರಸ್ತೆ ಸೌಕರ್ಯ ಅವರಿಗಿದೆಯೇ ? ಒಂದು ಆಸ್ಪತ್ರೆ ಸೌಕರ್ಯ ಅವರಿಗುಂಟೇ ! ಹೀಗೆ ಅವರಿಗೆ ಆ ವಿದ್ಯೆ ವೈದ್ಯಕೀಯ ಸೌಲಭ್ಯಗಳೊಂದೂ ಇಲ್ಲ. ನಮ್ಮ ನಾಡಾದರೋ ನೂರಕ್ಕೆ 80ರಷ್ಟು ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ನಮ್ಮಲ್ಲಿ ಎಂದಿನವರೆಗೆ ಆ ಗ್ರಾಮಾಂತರವಾಸಿಗಳ ಜೀವನ ಉತ್ತಮಗೊಳ್ಳುವುದಿಲ್ಲವೋ ಮತ್ತು ಅವರ ಜೀವನಮಟ್ಟವನ್ನು ಎಲ್ಲಿಯವರಿಗೆ ಏರಿಸುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೂ ನಮ್ಮ ರಾಷ್ಟ್ರದ ಜನತೆ ಜೀವನ ಉತ್ತಮವಾಗುವುದಿಲ್ಲ ಮತ್ತು ಅಲ್ಲಿಯವರೆಗೂ ನಮ್ಮ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ ಎಂದು ಹೇಳುವುದಕ್ಕೂ ಆಗುವುದಿಲ್ಲ, ಒಟ್ಟಿನಲ್ಲಿ ನಾನು ನಮ್ಮ ಅರ್ಥ ಸಚಿವರಿಗೆ ಹೇಳಬೇಕು ಎಂದಿರುವುದಿಷ್ಟೆ. ನೂರಕ್ಕೆ 80 ಜನ

(ಶ್ರೀ ಎಚ್. ಬಿ. ಕೆಂಚೇಗೌಡ)

ವಾಸಮಾಡತಕ್ಕ ಗ್ರಾಮಾಂತರ ಪ್ರದೇಶವೇನಿದೆ ಆ ಪ್ರದೇಶದ ಏಳಿಗೆಗೆ ಅನುಕೂಲವಾಗತಕ್ಕಂಥ ಒಂದು ಬಡ್ಜೆಟ್ಟನ್ನು ತಯಾರಿಸಬೇಕೆಂದು ಹೇಳುತ್ತೇನೆ. ಮತ್ತು ಯಾರು ನೂರಕ್ಕೆ 80ರಷ್ಟು ವ್ಯವಸಾಯದ ಕಸುಬಿನಲ್ಲಿ ತೊಡಗಿದ್ದಾರೋ ಅವರಿಗೆ ಒಂದು ಹೆಚ್ಚಿನ ಪ್ರೋತ್ಸಾಹ ಸಿಕ್ಕತಕ್ಕಂಥ ಬಡ್ಜೆಟ್ಟನ್ನು ತಯಾರಿಸಬೇಕೆಂದು ಹೇಳುತ್ತೇನೆ. ಎಲ್ಲಿಯವರಿಗೆ ಆ ಕಸುಬಿನಲ್ಲಿರತಕ್ಕವರಿಗೆ ಅಂಥ ಒಂದು ವಿಶೇಷ ಪ್ರೋತ್ಸಾಹವನ್ನು ಕೊಡಲು ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೂ ಅವರೇತಕ್ಕೆ ಆ ಕಸುಬಿಗೆ ಜನರನ್ನು ಬೇರೆ ಕಸುಬಿನಿಂದ ತಂದು ತುಂಬುತ್ತಿದ್ದಾರೋ ಅರ್ಥವಾಗುವುದಿಲ್ಲ. ದೇಶದಲ್ಲಿ ಈ ದಿವಸ ವಿದ್ಯಾವಂತ ತರುಣರಲ್ಲಿ ನಿರುದ್ಯೋಗದ ಸಮಸ್ಯೆ ಪ್ರಬಲವಾಗಿ ಪೀಡಿಸುತ್ತಿದೆ. ಅಂಥವರಿಗೆ ಉದ್ಯೋಗ ಒದಗಿಸಲು ಸರ್ಕಾರದವರು ಭೂಮಿಗಳನ್ನು ಕೊಡುತ್ತಿದ್ದಾರೆ. ಅದರಿಂದೇನು ಉಪಯೋಗ? ಹಾಗೇ ಸೈನ್ಯದಿಂದ ನಿವೃತ್ತಿ ಬಂದ ಶಿಪಾಯಿಗಳಿಗೂ ಭೂಮಿಯನ್ನು ಮಂಜೂರು ಮಾಡುತ್ತಾರೆ ಅದರಿಂದ ಅವರಿಗೇನು ಪ್ರಯೋಜನ? ನೂರಾರು ವರ್ಷಗಳಿಂದ ಆ ಕಸುಬಿನಲ್ಲಿ ತೊಡಗಿರತಕ್ಕ ಜನರಿಗೇ ಅನುಕೂಲಗಳನ್ನು ಒದಗಿಸಲು ಸರ್ಕಾರಕ್ಕೆ ಸಾಧ್ಯವಿಲ್ಲದಿದ್ದಾಗ ಅದೇ ಕಸುಬಿಗೆ ಹೊಸಬರನ್ನು ಏಕೆ ತರುತ್ತಾರೆ? ಹೀಗೆ ಮಾಡುವುದು ಸಾಧುವಾದ್ದಲ್ಲ.

ಈ ಹಿಂದೆ ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕುಗಳಿದ್ದಾಗ ರಾಜ್ಯದಲ್ಲಿ ಅಷ್ಟಿಷ್ಟು ಅಭಿವೃದ್ಧಿ ಕೆಲಸಕಾರ್ಯಗಳು ನಡೆಯುತ್ತಿದ್ದುವು. ಇತ್ತೀಚೆಗೆ ತಾಲ್ಲೂಕ್ ಬೋರ್ಡುಗಳು ಬಂದ ಮೇಲೆ ಆ ಅಭಿವೃದ್ಧಿ ಕೆಲಸಗಳೆಲ್ಲವೂ ಸ್ಥಗಿತಗೊಂಡವು. ಆ ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕುಗಳು ಇದ್ದಾಗ ಅಲ್ಲಲ್ಲಿ ದೊಡ್ಡ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ನಡೆಸರಾಗುತ್ತಿತ್ತು. ಇತ್ತೀಚೆಗೆ ಅವುಗಳನ್ನು ಕೈಬಿಟ್ಟು ಸಣ್ಣ ಪ್ರಮಾಣದ ನೀರಾವರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂದು ಹೇಳಿ ಅಲ್ಲಲ್ಲಿ ಕೆಲವು ಸಣ್ಣ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ನಡೆಸಿದ್ದಾರೆ. ಆದರೆ ಆ ಪ್ರದೇಶದಲ್ಲಿ ನಾಲ್ಕಾರು ವರ್ಷಗಳಿಂದ ಮಳೆಯೇ ಇಲ್ಲದೆ ಆ ಕೆರೆಗಳಿಗೆ ನೀರು ಬರಲಿಲ್ಲ. ಅಂಥ ಸಣ್ಣ ಪ್ರಮಾಣದ ಕೆರೆಗಳನ್ನು ಕಟ್ಟಿಸಿದ್ದರಿಂದ ಬಂದ ಪ್ರಯೋಜನವೇನು? ಆ ದೊಡ್ಡ ಪ್ರಮಾಣದ ನೀರಾವರಿಗಳಿಗಾದರೋ ನೀರು ವರಮಾನದ ಗ್ಯಾರಂಟಿ ಇರುತ್ತದೆ. ನಾವು ವ್ಯವಸಾಯಗಾರರಿಗೆ ಅನುಕೂಲಗಳನ್ನು ಕಲ್ಪಿಸಬೇಕಾಗಿದ್ದರೆ ಅವರ ಕಸುಬಿಗೆ ಅತ್ಯವಶ್ಯಕವಾದ ಆ ಪಶು ಸಂಪತ್ತೇನಿದೆ ಅದರ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ನಿಗಾ ಕೊಡಬೇಕು. ಪಶುಪಾಲನೆಗೆ ಹೆಚ್ಚು ಹಣವನ್ನು ಸರ್ಕಾರ ಒದಗಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನತೆಗೆ ವರ್ಷವೆಲ್ಲಾ ವ್ಯವಸಾಯದ ಕೆಲಸಕಾರ್ಯಗಳಿರುವುದಿಲ್ಲ. ಅದಕ್ಕಾಗಿ ಅವರಿಗೆ ಒಂದು ಉಪಕಸುಬನ್ನು ಒದಗಿಸತಕ್ಕ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಕೋಳಿ, ಹಂದಿ ಮತ್ತು ಹಸುಗಳನ್ನು ಸಾಕಲು ಸರ್ಕಾರದವರು ಉದಾರವಾಗಿ ಹಣವನ್ನು ಒದಗಿಸಬೇಕು. ನಮ್ಮ ರಾಜ್ಯಕ್ಕೆ ಬರತಕ್ಕ ವರಮಾನದಲ್ಲಿ ನೂರಕ್ಕೆ 80 ರಷ್ಟು ಗ್ರಾಮಾಂತರ ಪ್ರದೇಶಗಳಿಂದ ಬರುತ್ತಿರುವುದರಿಂದ ರಾಜ್ಯದ ವರಮಾನದಲ್ಲಿ ಶೇಕಡ 80ರಷ್ಟನ್ನು ಗ್ರಾಮಾಂತರ ಜನರ ಉದ್ಧಾರಕ್ಕಾಗಿ ವಿನಿಯೋಗಿಸಬೇಕು ಎಂದು ಹೇಳಿ ನಾನು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್ಲು).—ಮಾನ್ಯ ಅಧ್ಯಕ್ಷರೇ, ಈ ಹೊತ್ತಿನ ದಿವಸ ಈ ಸಭೆಯ ಮುಂದೆ ಇಟ್ಟಿರತಕ್ಕ ಸಪ್ಲಿಮೆಂಟರಿ ಬಡ್ಜೆಟ್ಟನ್ನು ಕುರಿತು ಮಾತನಾಡುವುದಕ್ಕೆ ಮೊದಲು ಕಳೆದ ಒಂದು ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಸ್ಥೂಲವಾಗಿ ಹಾಗೂ ಸೂಕ್ಷ್ಮವಾಗಿ ಏನೇನು ಕೆಲಸ ಕಾರ್ಯಗಳು ಆಗಿರುತ್ತವೆ ಎಂಬುದನ್ನು ಪರಿಶೀಲಿಸುವುದು ಅವಶ್ಯಕ.

ಇಲ್ಲಿಗೆ ಸುಮಾರು ಒಂದು ವರ್ಷದ ಹಿಂದೆ ಆ ಲೋಕ ಸಭೆಗೆ ಚುನಾವಣೆಗಳು ನಡೆದವು ಅದೇ ರೀತಿಯಲ್ಲಿ ಇದೇ ತಿಂಗಳು ಮೈಸೂರು ರಾಜ್ಯದ ವಿಧಾನಸಭೆಗೂ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ಇಡೀ ದೇಶದ ಜನತೆ ಒಂದು ಕೂಗಿಗೆ ಮಾನ್ಯತೆ ಕೊಟ್ಟರು. ಆ ಕೂಗು ಯಾವುದು ಎಂದರೆ ಬಡತನವೇ ತೊಲಗು ಅಥವಾ ಗರೀಬೀ ಹಟಾವೋ ಎಂಬುದು. ಆ ಸ್ಲೋಗನ್‌ಗೆ ಜನತೆ ಮಾರು ಹೋಗಿ ಈವೊತ್ತಿನ ದಿವಸ ಆ ಪಕ್ಷಕ್ಕೆ ಬಹುಮತ ಬಂದಿದೆ. ಈ ಸಂದರ್ಭದಲ್ಲಿ ಹೇಳುವುದಾದರೆ ಒಂದು ವರ್ಷದಿಂದ ನಮ್ಮ ರಾಜ್ಯದಲ್ಲಿ ಕೇಂದ್ರ ಆಡಳಿತ ಅಂದರೆ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿ ಇತ್ತು. ಅದರ ಪ್ರತಿಫಲವಾಗಿ ಈವೊತ್ತಿನ ದಿವಸ ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ನಾವು ಕಾಣುತ್ತಾ ಇದ್ದೇವೆ. ಕೆಲವು ಸದಸ್ಯರು ಈ ಸಪ್ಲಿಮೆಂಟರಿ ಡಿಮ್ಯಾಂಡ್‌ಗೆ ಈ ಮಂತ್ರಿಮಂಡಲ ಕಾರಣವಲ್ಲ ಎಂದು ಹೇಳಿದರು. ಈ ಸಪ್ಲಿಮೆಂಟರಿ ಡಿಮ್ಯಾಂಡ್‌ಗೆ ಈ ಮಂತ್ರಿಮಂಡಲ ಕಾರಣವಲ್ಲದಿದ್ದರೂ ಇಲ್ಲಿಯ ಆಡಳಿತ ಕೇಂದ್ರದ ಒಂದು ಮೇಲ್ವಿಚಾರಣೆಯಲ್ಲಿ

ನಡೆಯುತ್ತಾ ಇದ್ದುದರಿಂದ ಅದರ ಪ್ರತಿಫಲವಾಗಿ ಈ ಸಪ್ಲಿಮೆಂಟರಿ ಡಿಮ್ಯಾಂಡ್ ನಮ್ಮ ಮುಂದೆ ಬಂದಿದೆ. ಇದರಲ್ಲಿ ಮೊದಲನೆಯದಾಗಿ ಲ್ಯಾಂಡ್ ರೆವಿನ್ಯೂ—ಅಡ್ಮಿನಿಸ್ಟ್ರೇಷನ್ ವಿವರ ನೋಡುವುದಾದರೆ ಬಂಜರು ಭೂಮಿಯನ್ನು ಹಂಚುವುದಕ್ಕೆ ಸರ್ಕಾರದವರು ಒಂದು ಸಮಿತಿಯನ್ನು ಮಾಡಿದ್ದರು. ರಾಷ್ಟ್ರಪತಿಗಳ ಆಡಳಿತ ಬಂದಮೇಲೆ ಆ ಸಮಿತಿಗಳನ್ನೆಲ್ಲಾ ನಿರ್ಮೂಲನಾ ಮಾಡಿ ಅದಕ್ಕೆ ಬದಲಾಗಿ ಅಧಿಕಾರಿಗಳನ್ನು ನೇಮಿಸಿದರು. ಭೂಮಿ ಯಾವರೀತಿಯಾಗಿ ಹಂಚಿಕೆಯಾಗಬೇಕಾಗಿತ್ತು ಎಂದರೆ ಪ್ರಜಾಪ್ರಭುತ್ವದ ಆಧಾರದ ಮೇಲೆ ಸ್ಥಾಪಿತವಾದ ಸಮಿತಿಗಳಲ್ಲಿ ಸಮಿತಿಯವರು ಪ್ರತಿಗ್ರಾಮಕ್ಕೂ ಹೋಗಿ ಭೂಹೀನರ ಪಟ್ಟಿಯನ್ನು ಏನು ತಯಾರು ಮಾಡಿದ್ದರೋ ಪಟ್ಟಿಯಮೇಲೆ ಆಧಾರದಮೇಲೆ ಜನರಿಗೆ ಭೂಮಿಯನ್ನು ಹಂಚಬೇಕು ಎಂದು ಮಾಡಿದ್ದರು. ಆದರೆ ಅಧಿಕಾರಿಗಳು ಬಂದಮೇಲೆ ಹಿಂದೆ ತಯಾರು ಮಾಡಿದ ಪಟ್ಟಿಗಳೆಲ್ಲಾ ಗಾಳಿಗೆ ಹೋಯಿತೋ ಎಲ್ಲಿಗೆ ಹೋಯಿತೋ ಗೊತ್ತಿಲ್ಲ. ಇವಾದಮೇಲೆ ಈಗ ಯಾರಿಗೆ ಜಮೀನು ದೊರೆಯುತ್ತಾ ಇದೆ ಎಂದರೆ ಯಾರು ಅಧಿಕಾರಿಗಳಿಗೆ ಸಂಭಾವನೆ ಕೊಡುತ್ತಾರೋ ಅಂತಹವರಿಗೆ ಭೂಮಿ ಸಿಕ್ಕುತ್ತದೆ. ಹರಿಜನರಿಗೆ, ಹಿಂದುಳಿದವರಿಗೆ ಸಿಕ್ಕುತ್ತಾ ಇಲ್ಲ. ಇದಕ್ಕೆ 9 ಸಾವಿರ ರೂಪಾಯಿಗಳನ್ನು ಕೇಳುತ್ತಾ ಇದ್ದಾರೆ. ಇಲ್ಲಿಯವರೆಗೂ ಅದು ನ್ಯಾಯವಾದ ರೀತಿಯಲ್ಲಿ ಖರ್ಚಾಗುತ್ತಾ ಇಲ್ಲ. ಇದರಿಂದ ಸ್ವಲ್ಪವೂ ಅನುಕೂಲವಾಗಿಲ್ಲ. ನಮ್ಮ ರಾಜ್ಯದ ಜನತೆಗೆ ಅನುಕೂಲವಾಗುವ ಹಾಗೆ ಇದ್ದಿದ್ದರೆ ಈ ಖರ್ಚನ್ನು ಖಂಡಿತ ಒಪ್ಪಿಕೊಳ್ಳಬಹುದಾಗಿತ್ತು.

ಇನ್ನು ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಅವರು ಸಮತಾವಾದ ಸಮಾಜದ ತತ್ವವನ್ನು ಒಪ್ಪಿಕೊಂಡಿದ್ದಾರೆ. ಈ ಸಮತಾವಾದವನ್ನು ಜಾರಿಗೆ ತರುವ ದಿಶೆಯಲ್ಲಿ ಕೆಲವು ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಿದರು. ಅದೇ ರೀತಿಯಲ್ಲಿ ಮೈಸೂರು ರಾಜ್ಯದಲ್ಲಿ ಮೈಸೂರು ರೋಡ್ ಟ್ರಾನ್ಸ್‌ಪೋರ್ಟ್‌ನ್ನು ರಾಷ್ಟ್ರೀಕರಣಮಾಡಿದರು. ಮೈಸೂರು ರಾಜ್ಯದಲ್ಲಿ ನೇರವಾಗಿ ಒಂದು ವರ್ಷದಿಂದ ಕೇಂದ್ರದ ಆಡಳಿತ ಇದ್ದರೂ ಇದರ ಬಗ್ಗೆ ಏನೂ ಪ್ರಯೋಜನವಾಗಲಿಲ್ಲ. ಈವೊತ್ತು ಸರ್ಕಾರಿ ಬಸ್ಸು ಓಡುತ್ತಾ ಇರುವ ರೂಟಿನಲ್ಲೇ ಅನೇಕ ಬಸ್ಸುಗಳು ಆನ್ ಕಾಂಟ್ರಾಕ್ಟ್ ಎಂದು ಬೋರ್ಡು ಹಾಕಿಕೊಂಡು ಖಾಸಗಿಯವರು ಬಸ್ಸು ಓಡಿಸುತ್ತಾ ಇದ್ದಾರೆ. ಸರ್ಕಾರಿ ಬಸ್ಸು ನಡೆಸುವವರು ಸರ್ಕಾರದವರೇ ಮತ್ತು ಆನ್ ಕಂಟ್ರಾಕ್ಟ್ ಬಸ್‌ಗೆ ಲೈಸನ್ಸ್‌ಗೆ ಪರ್ಮಿಟ್ ಕೊಡುವವರು ಸರ್ಕಾರದವರೇ. ಇದು ಎಂತಹ ವಿಪರ್ಯಾಸವಾಗಿದೆ ಎಂದರೆ ಸರ್ಕಾರಿ ಬಸ್ಸು ಓಡಿಸುವ ವೇಳೆಗೆ ಸ್ವಲ್ಪ ಮುಂಚಿತವಾಗಿ ಹಿಂದೆ ಒಂದು ಆನ್ ಕಾಂಟ್ರಾಕ್ಟ್ ಬಸ್ ಮತ್ತು ಮುಂದೆ ಒಂದು ಆನ್ ಕಾಂಟ್ರಾಕ್ಟ್ ಬಸ್ ಓಡಾಡುತ್ತಾ ಇರುತ್ತೆ. ಅವರೆ ಸರ್ಕಾರಿ ಬಸ್ಸಿನಲ್ಲಿ ಸೀಟುಗಳೆಲ್ಲಾ ಖಾಲಿ ಇರುತ್ತದೆ. ಆನ್ ಕಾಂಟ್ರಾಕ್ಟ್ ಬಸ್ಸು ದಿನಕ್ಕೆ 5–6 ಟ್ರಿಪ್ ಓಡಾಡಿದರೂ ಲಾಭಗಳಿಸುತ್ತದೆ. ಆದರೆ ಸರ್ಕಾರ ಓಡಾಡಿಸುವ ಬಸ್ಸಿನಲ್ಲಿ ನಷ್ಟ ಉಂಟಾಗುತ್ತದೆ. ಮತ್ತು ರಾಷ್ಟ್ರೀಕರಣ ಎನ್ನುವ ತತ್ವಕ್ಕೆ ತದ್ವಿರುದ್ಧವಾಗಿ ನಮ್ಮ ಸರ್ಕಾರ ನಡೆಯುತ್ತಾ ಇದೆ. ಇದು ಬಹಳ ದುರಾದೃಷ್ಟಕರ. ಇದನ್ನು ಆಲೋಚನೆ ಮಾಡುವುದಾದರೆ ಸರ್ಕಾರಕ್ಕೆ ಸಮತಾವಾದ ಸಮಾಜದಲ್ಲಿ ನಂಬಿಕೆ ಇದೆಯೆ, ಸಮತಾವಾದ ಸಮಾಜವನ್ನು ನಮ್ಮ ದೇಶದಲ್ಲಿ ತರಬೇಕು ಎನ್ನುವ ಮನಸ್ಸು ಮಾಡಿದ್ದೀರಾ? ಇದನ್ನು ಯೋಚನೆ ಮಾಡಿದರೆ ಪ್ರತಿಯೊಬ್ಬನಿಗೂ ಅನುಮಾನಾಸ್ಪದವಾಗಿ ಕಂಡು ಬರುತ್ತದೆ.

ಇನ್ನು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಈ ಬಾಬಿಗೆ 9500 ರೂಪಾಯಿಗಳನ್ನು ಇಟ್ಟಿದ್ದಾರೆ. ಚುನಾವಣಾ ಕಾಲದಲ್ಲಿ ಆಳುವ ಪಕ್ಷ ಪಶ್ಚಿಮ ಬಂಗಾಳದಲ್ಲಿ ಏನು ಮಾಡಿದರು ಎಂದರೆ ಅಲ್ಲಿ 5 ತರಹ ಪೋಲೀಸಿನವರನ್ನು ಇಟ್ಟು ಜೊತೆಗೆ ಮಿಲಿಟರಿ ಇಟ್ಟು ಒಂದೊಂದು ಕ್ಷೇತ್ರದಲ್ಲಿ 20–30 ಜನರನ್ನು ಓಡಿಸಿ ತಮ್ಮ ಪಕ್ಷದ ಹುರಿಯಾಳುಗಳನ್ನು ಗೆದ್ದು ಬರುವಂತೆ ಮಾಡಿದರು ನಮ್ಮ ರಾಜ್ಯದಲ್ಲೂ ಕೂಡ ಆರೀತಿ ಮಾಡುವ ಉದ್ದೇಶ ಆಡಳಿತ ಪಕ್ಷಕ್ಕೆ ಇತ್ತೆ? ನಮ್ಮ ರಾಷ್ಟ್ರದಲ್ಲಿ ಆ ರೀತಿ ನಡೆಸುವುದಕ್ಕೆ ಆಲೋಚನೆ ಮಾಡಿದಿರಾ? ಖಂಡಿತವಾಗಿಯೂ ಕೂಡ ನನಗೆ ಸಂಶಯ ಉಂಟಾಗಿದೆ.

ಇನ್ನು ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಅಂಡ್ ಫಿಷರೀಸ್ ಈ ಬಾಬುಗಳಿಗೆ 86,59,800 ರೂಪಾಯಿಗಳ ಖರ್ಚು ಕೇಳುತ್ತಾ ಇದ್ದಾರೆ. ಅನೇಕ ಸದಸ್ಯರಿಗೂ ಗೊತ್ತಿದೆ. ಹಿಂದೆ ವ್ಯವಸಾಯದ ಇಲಾಖೆಯಿಂದ ಔಷಧಿಗಳು, ಸ್ಪೇರ್ ಪಾರ್ಟ್ಸ್‌ಗಳು ಮತ್ತು ಸಬ್ಸಿಡಿ ಇವುಗಳನ್ನು ರೈತರಿಗೆ ಕೊಡುತ್ತಾ ಇದ್ದರು. ಈ ನೀತಿಯನ್ನು ಈವೊತ್ತು ನಿಲ್ಲಿಸಿಬಿಟ್ಟಿದ್ದಾರೆ. ಸಬ್ಸಿಡಿ ಇಲ್ಲದೆ ಪೂರ್ತಾ ಬೆಲೆ ಕೊಟ್ಟು ಔಷಧಿಗಳು, ಸ್ಪೇರ್‌ಪಾರ್ಟ್ಸ್‌ಗಳು ಇವುಗಳನ್ನು ಕೊಂಡುಕೊಳ್ಳಬೇಕು ಎಂದು ನಿಗದಿ ಮಾಡಿದ್ದಾರೆ. ಆದರೆ ವ್ಯವಸಾಯ ಏನಾದರೂ ನಮ್ಮ ರಾಜ್ಯದಲ್ಲಿ ಮುಂದುವರೆದಿದ್ದರೆ ಸಬ್ಸಿಡಿಯಿಂದಲೇ ಮುಂದುವರೆದಿದೆ. ಆದುದರಿಂದ ಈ ಸಬ್ಸಿಡಿಯನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಬೇಕೆಂದು ನಾನು ಸೂಚನೆ ಮಾಡುತ್ತೇನೆ.

(ಶ್ರೀ ಪಿ. ಬೈರೇಗೌಡ)

ಇನ್ನು ಸಿರಿಕಲ್ಚರ್ ಬಗ್ಗೆ ಹೇಳುವುದಾದರೆ ಸ್ವಲ್ಪಮಟ್ಟಿಗೆ ಕೋಲಾರ ಜಿಲ್ಲೆಯಲ್ಲೂ ಮತ್ತು ಮೈಸೂರು ಮತ್ತು ಬೆಂಗಳೂರು ಜಿಲ್ಲೆಯಲ್ಲೂ ಹೆಚ್ಚುರೀತಿಯಲ್ಲಿ ನಡೆಯುತ್ತಾ ಇದೆ. ಕಳೆದ ಒಂದು ವರ್ಷದಿಂದ ಸಿರಿಕಲ್ಚರ್‌ನವರ ಸ್ಥಿತಿ ಬಹಳ ಶೋಚನೀಯವಾಗಿದೆ. ಶ್ರೇಷ್ಠ ಮೊಟ್ಟೆಯನ್ನು ಒದಗಿಸುವ ಜವಾಬ್ದಾರಿ ಮತ್ತು ಉತ್ತಮವಾದ ರೋಗರಹಿತವಾದ ಬೀಜವನ್ನು ಒದಗಿಸುವಂಥ ಜವಾಬ್ದಾರಿ ಸರ್ಕಾರಕ್ಕೆ ಇದೆ. ಹಾಗಿದ್ದರೂ ಕೂಡ ಇಲ್ಲಿಯವರೆಗೂ ರೋಗದಿಂದ ಕೂಡಿದ ಬೀಜ ಸರಬರಾಜು ಆಗಿದ್ದುದರಿಂದ ಕೋಲಾರ ಜಿಲ್ಲೆಯಲ್ಲಿ 100ಕ್ಕೆ 90ರಷ್ಟು ಬೆಳೆಗಳು ನಷ್ಟವಾಗಿ ಈವೊತ್ತಿನ ದಿವಸ ಒಬ್ಬೊಬ್ಬ ರೈತನೂ ಹತ್ತಾರು ಸಾವಿರ ರೂಪಾಯಿ ಸಾಲಕ್ಕೆ ಸಿಕ್ಕಿಕೊಂಡಿದ್ದಾನೆ. ರೋಗದಿಂದ ಕೂಡಿದ ಬೀಜವನ್ನು ಸರಬರಾಜು ಮಾಡಿದ್ದುದರಿಂದ ಬೆಳೆಗಾರರಿಗೆ ನಷ್ಟ ಉಂಟಾಗಿದೆ ಆದುದರಿಂದ ಈ ಖರ್ಚನ್ನು ಖಂಡಿತವಾಗಿಯೂ ಒಪ್ಪತಕ್ಕಂಥಾದ್ದಲ್ಲ.

ಇನ್ನು ಪಬ್ಲಿಕ್ ವರ್ಕ್ಸ್‌ನ ಡಿಪಾರ್ಟ್‌ಮೆಂಟಿಗೆ ಕೆಲವು ಹಣವನ್ನು ಕೇಳಿದ್ದಾರೆ. ಇದರ ವಿಷಯದಲ್ಲಿ ಹೇಳುವುದಾದರೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಅನೇಕ ರಸ್ತೆಗಳಲ್ಲಿ ರಸ್ತೆಗಳನ್ನು ಮೆಟಲ್ ಮಾಡುವುದಕ್ಕೆ ಅಪಾರವಾಗಿ ಜಲ್ಲಿ, ಕರೆಕ್ಟ್ ಮಾಡಿದ್ದಾರೆ. ಇದಕ್ಕೆ ಯಾವ ಯೋಜನೆ ಇಟ್ಟುಕೊಂಡು ಮಾಡಿದ್ದಾರೋ ಗೊತ್ತಿಲ್ಲ. ಮೊದಲು ಯಾವ ಪ್ರಮಾಣದಲ್ಲಿ ಮಾಡುತ್ತಿದ್ದರೋ ಗೊತ್ತಿಲ್ಲ. ಈಗ ಒಂದು ಮೀಟರ್ ರಸ್ತೆ ಇದ್ದರೂ ಅದನ್ನು ಹೈರೋಡ್ ಮಾಡುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ಇದನ್ನು ತಡೆಗಟ್ಟಿದ್ದರೆ ಈವೊತ್ತಿನ ದಿವಸ ಈ ಸಪ್ಲಿಮೆಂಟರಿ ಹಣ ಬೇಕಾಗಿರಲಿಲ್ಲ. ಇದನ್ನೆಲ್ಲಾ ನೋಡುವುದಾದರೆ ಪ್ರಾಮುಖ್ಯವಾಗಿ ಆಳುವ ಪಕ್ಷಕ್ಕೆ ಯಾರೋ ಒಬ್ಬರು ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೋ ಅಥವಾ ಮಾನ್ಯ ಪಾಟೀಲರು ಹೇಳಿದ ಹಾಗೆ ನಮ್ಮ ದೇಶದಲ್ಲಿ ಇರತಕ್ಕಂಥ ಗುತ್ತೇದಾರರು ಅಗಲಿ ಬಂಡವಾಳಶಾಹಿಗಳಾಗಲಿ ಕೆಲಸ ಮಾಡುತ್ತಿದ್ದಾರೋ ಗೊತ್ತಿಲ್ಲ. ನಮ್ಮ ಮುಂದೆ ಇಟ್ಟಿರುವ ಈ ಒಂದು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ನೋಡಿದರೆ ಆ ಬಡ್ಜೆಟ್ಟಿನಲ್ಲೂ ಕೂಡ ಶ್ರಮಜೀವಿ ವರ್ಗದ, ದುರ್ಬಲವರ್ಗದವರ ಬಗ್ಗೆ ಏನೊಂದು ಕಾರ್ಯಕ್ರಮವನ್ನೂ ಹಾಕಿಕೊಂಡಿರುವ ಒಂದು ಅಂಶವೂ ಕೂಡ ಕಾಣುತ್ತಾ ಇಲ್ಲ. ಗರೀಬಿ ಹಟಾವೋ, ಬಡತನ ನಿರ್ಮೂಲವಾಗಲಿ ಎನ್ನುವುದು ಕೇವಲ ಸ್ಲೋಗನ್ಸ್ ಆಗಿ ಉಳಿದಿದೆಯೇ ಹೊರತು ನಿಜವಾಗಿಯೂ ಒಂದು ರಚನಾತ್ಮಕವಾಗಿ, ಯೋಜನಾ ಬದ್ಧವಾಗಿ ಶ್ರಮಜೀವಿ ವರ್ಗದ, ದುರ್ಬಲ ವರ್ಗದ ಜನರಿಗೆ ಅನುಕೂಲವಾಗತಕ್ಕಂಥ ಯೋಜನೆಗಳು ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಇಲ್ಲ ಎಂದು ಹೇಳಿ ಇದನ್ನು ವಿರೋಧಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಳಿಗೆರೆ) :—ಅಧ್ಯಕ್ಷರೇ, ಮಾನ್ಯ ಸಚಿವರು ಸಭೆಯ ಮುಂದಿಟ್ಟಿರುವ ಬೇಡಿಕೆಯನ್ನು ಸಂತೋಷದಿಂದ ಒಪ್ಪುತ್ತೇನೆ. ಆದರೆ ಕೊಡುವ ಹಣವನ್ನು ಸದ್ವಿನಿಯೋಗಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾವ ಕೆಲಸವನ್ನೇ ಆಗಲಿ ಕಾರ್ಯಗತಮಾಡುವುದಕ್ಕೆ ಮುಂಚೆ ಅದು ಎಷ್ಟುಮಟ್ಟಿಗೆ ಯಶಸ್ವಿಯಾಗುವುದೆಂಬುದನ್ನು ಯೋಚನೆ ಮಾಡಬೇಕು. ಉದಾಹರಣೆಗೆ ಮೈಸೂರು ತಾಲ್ಲೂಕಿನಲ್ಲಿ ಒಂದೂಕಾಲು ಲಕ್ಷ ರೂಪಾಯಿ ಖರ್ಚುಮಾಡಿರುವ ಯೋಜನೆಯಿಂದ ನಾಲ್ಕು ಎಕರೆ ಕೂಡ ನೀರಾವರಿಯಾಗುತ್ತಿಲ್ಲ. ಮೂರು ಲಕ್ಷ ಖರ್ಚುಮಾಡಿ ಒಂದು ಅಣೆ ಕಟ್ಟಿರುವ ಕಡೆ ಅಡಿಯಿಂದ ನೀರು ನುಗ್ಗುವುದು. ಹೀಗೆ ಹಣ ವ್ಯರ್ಥಮಾಡುವುದಕ್ಕೆ ಬದಲಾಗಿ ಮುಂಚೆ ಚೆನ್ನಾಗಿ ಯೋಚನೆ ಮಾಡಿ ಕಾರ್ಯಗತ ಮಾಡಿದರೆ ಜನರಿಗೆ ಉಪಯೋಗವಾಗುವುದು.

ತೆರಿಗೆ ವಿಧಿಸುವಾಗ ಮಧ್ಯಮ ವರ್ಗವನ್ನು ಕಡೆಗಣಿಸಬಾರದು. ಶ್ರೀಮಂತರು ಕಡಮೆ. ಮಧ್ಯಮವರ್ಗದವರೇ ಜಾಸ್ತಿ. ಅವರ ಹಿತ ನೋಡಿ ತೆರಿಗೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರ ವಿಧಿಸುವ ಯಾವ ತೆರಿಗೆ ಬೀಳುವುದು ಮಧ್ಯಮವರ್ಗದ ಎರಡನೆದರ್ಜೆ ಗೆಜೆಟೆಡ್ ಆಫೀಸರುಗಳು ಮತ್ತು ರೈತರಿಗೆ. ವಿದ್ಯಾಭ್ಯಾಸದ ವಿಚಾರ ನೋಡಿದರೆ ಒಳ್ಳೆಯ ಕಟ್ಟಡ ಮತ್ತು ಫರ್ನಿಚರ್ ಇದ್ದರೂ ಉಪಾಧ್ಯಾಯರಿರುವುದಿಲ್ಲ. ಕೆಲವು ಕಡೆ ಪ್ರೈಮರಿ ಶಾಲೆಗಳಲ್ಲಿ ಒಂದೂವರೆ ವರ್ಷದಿಂದ ಉಪಾಧ್ಯಾಯರೇ ಇಲ್ಲ. ಈ ರೀತಿಯಾಗಲು ಅವಕಾಶ ಕೊಡಬಾರದು. ವ್ಯವಸಾಯದ ವಿಷಯ ಹೇಳುವುದಾದರೆ ತಮಿಳುನಾಡಿನಲ್ಲಿ 10 ಎಕರೆ ಇರುವ ರೈತನ ಬಳಿ ಕಾರಿರುವುದು. ಅಲ್ಲಿ ಸರಕಾರಿ ಅಧಿಕಾರಿಗಳು ರೈತನ ಮನೆಬಾಗಿಲಿಗೆ ಹೋಗಿ ಅವನಿಗೆ ಅವಶ್ಯಕವಾದ ಗೊಬ್ಬರ, ಬೀಜ, ಪಂಪುಸೆಟ್ಟು ಮುಂತಾದುವನ್ನು ಒದಗಿಸುವರು. ಇದರಿಂದ ಅವನ ಆರ್ಥಿಕಸ್ಥಿತಿ ಉತ್ತಮವಾಗಲು ಅವಕಾಶವಾಗಿದೆ. ರೈತರೂ ಕೂಡ ಸರಕಾರಕ್ಕೆ

ಸಾಕಾದಷ್ಟು ತೆರಿಗೆ ಕೊಡುವರು ಮತ್ತು ಕೂಲಿಗಾರರಿಗೂ ಅನುಕೂಲವಾಗಿವೆ. ಹಾಗೆ ನಮ್ಮಲ್ಲೂ ಕೂಡ ರೈತರಿಗಿರುವ ಕಷ್ಟವನ್ನರಿತು ಅಧಿಕಾರಿಗಳು ಸಹಾಯನೀಡಿದರೆ ಅನುಕೂಲ ವಾಗುವುದು.

†ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಅರ್ಥ ಸಚಿವರು ನಮ್ಮ ಮುಂದಿಟ್ಟಿರುವ ಬೇಡಿಕೆಗಳನ್ನು ನೊಂದಮನಸ್ಸಿನಿಂದ ವಿರೋಧ ಮಾಡುತ್ತೇನೆ. ಯಾವ ರಾಜ್ಯವೇ ಆಗಲಿ ಸುಭಿಕ್ಷವಾಗಿರಬೇಕಾದರೆ ಹಾಗೂ ಸಂಪದ್ಭರಿತ ವಾಗಿರಬೇಕಾದರೆ ಸಂಪನ್ಮೂಲಗಳಿರಬೇಕು ಮತ್ತು ಅವುಗಳ ಸದುಪಯೋಗವಾಗಬೇಕು. ಮತ್ತು ಸಕಾಲದಲ್ಲಿ ಸಾಕಾದಷ್ಟು ಮಳೆಬೆಳೆಯಾಗಬೇಕು. ಮಾನ್ಯ ಮಂತ್ರಿಗಳು ತಾತ್ಕಾಲಿಕವಾದ ಆಯುವ್ಯಯವನ್ನು ಮಂಡಿಸಿದ್ದಾರೆ. ಗಂಧದನಾಡು, ಚಿನ್ನದನಾಡು ಎಂದು ಮೈಸೂರು ಎಲ್ಲರ ಹೊಗಳಿಕೆಗೆ ಪಾತ್ರವಾಗಿತ್ತು. ಈ ಮೈಸೂರಿನ ಭವಿಷ್ಯ ಆಶಾದಾಯಕವಾಗಲು ಉತ್ತಮ ವಾಗಲು ಇಂದು ರಚಿತವಾಗಿರುವ ಸರಕಾರದಿಂದ ಖಂಡಿತ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. ಈ ರಾಜ್ಯದಲ್ಲಿ ಗುರುತರವಾದ ಜವಾಬ್ದಾರಿಯನ್ನು ಹೊತ್ತಿರುವ ಸರಕಾರದವರು ಕರ್ಣಾಟಕದ ಜನತೆಯ ಕಣ್ಣೊರೆಸುವ ಬಜೆಟ್ಟನ್ನು ಜೂನ್‌ನಲ್ಲಿ ಇಡಬಾರದೆಂದು ಅಧ್ಯಕ್ಷರ ಮೂಲಕ ಧೈರ್ಯವಾಗಿ ಪ್ರಾರ್ಥನೆಮಾಡುತ್ತೇನೆ. ಕಾಂಗ್ರೆಸ್ ತತ್ವದಲ್ಲಿ ನಂಬಿಕೆಯುಲ್ಲದಿರುವ ಜನ ಸೇಕಡ ತೊಂಬತ್ತ ರಷ್ಟಿರುವ ಕಾಂಗ್ರೆಸ್ ಪಕ್ಷದಿಂದ ರಚಿತವಾಗಿರುವ ಸರಕಾರ ಇದು. ಇಂಥ ಸರಕಾರದಿಂದ ಜನತೆಗೆ ಒಳ್ಳೆಯದಾಗುವುದೆಂಬ ನಂಬಿಕೆ ಇಲ್ಲ. ಕಾಂಗ್ರೆಸ್ ತತ್ವದಲ್ಲಿ ಶ್ರದ್ಧೆ ಮತ್ತು ನಂಬಿಕೆ ಇಟ್ಟಿರುವ ಎಷ್ಟು ಜನರು ಆಡಳಿತ ಪಕ್ಷದಲ್ಲಿದ್ದಾರೆ ? ಅಂಥವರ ಸಂಖ್ಯೆ ಕಡಿಮೆಯಿರುವಾಗ ಸತ್ಯ, ನ್ಯಾಯ ಮತ್ತು ಧರ್ಮಗಳ ಬಗ್ಗೆ ವಿಶ್ವಾಸವಿಲ್ಲದಿರುವವರಿಂದ ಎಷ್ಟುಮಟ್ಟಿಗೆ ಪ್ರಜಾಹಿತ ಕಾರ್ಯ ನಡೆಯುಬಲ್ಲದು ? ಇಂಥವರು ಈ ರಾಜ್ಯದಲ್ಲಿ ತುಂಬಿತುಳುಕಾಡುತ್ತಿರುವ ಲಂಚಗುಳಿತನವನ್ನು ನಿರ್ಮೂಲವಾಡಲು ಶಕ್ತರೇ ಎಂದು ಪ್ರಶ್ನೆಮಾಡುತ್ತೇನೆ. ಮೊದಲು ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದನ್ನು ಬಿಡಬೇಕು. ಮಂತ್ರಿಗಳು ಲಂಚಕ್ಕೆ ಕೈ ಒಡ್ಡದಿದ್ದರೆ ಅಧಿಕಾರಿಗಳೂ ಹೆದರುವರು. ಇಲ್ಲವಿದ್ದರೆ ರಾಜ್ಯದಲ್ಲಿ ದೊಡ್ಡ ಅಲ್ಲಕಲ್ಲೋಲವಾಗುವುದು. ಮುಖ್ಯವಾಗಿ ದಕ್ಷವಾದ ಆಡಳಿತದ ಆವಶ್ಯಕತೆ ಇದೆ. ಯಾರು ಬೇಕಾದರೂ ರಾಜ್ಯಭಾರ ಮಾಡಲಿ, ದ್ವೇಷ ವಿಲ್ಲ. ದಕ್ಷತೆ, ಒಳ್ಳೆಯ ಸಂಸ್ಕೃತಿ ಇರುವ ಯಾವ ಪಕ್ಷವಾದರೂ ಅಧಿಕಾರದಲ್ಲಿರಲಿ ಅದನ್ನು ಗೌರವಿಸಬಹುದು. ದಾರಿದ್ರ್ಯವನ್ನು ಹೋಗಲಾಡಿಸುವುದಾಗಿ ಸ್ಲೋಗನ್ ಇದೆ. ಆದರೆ ಅದಕ್ಕೆ ತಕ್ಕಂತೆ ಬಜೆಟ್ ತಯಾರಾಗುತ್ತಿದೆಯೇ ? ಅದರಲ್ಲಿ ಸ್ಲೋಗನ್‌ಗೆ ತಕ್ಕ ಅಂಶ ಒಂದೂ ಕಾಣುವುದಿಲ್ಲ. ದೇಶದಲ್ಲಿ ಸುಭಿಕ್ಷವುಂಟಾಗಬೇಕಾದರೆ ದಕ್ಷತೆ ಮತ್ತು ಪ್ರಾಮಾಣಿಕತೆ ಇವೆರಡು ವಿಷಯಗಳಿಗೆ ಹೆಚ್ಚು ಗಮನಕೊಡಬೇಕು. ಮುಖ್ಯಮಂತ್ರಿಗಳು ಇದಕ್ಕೆ ಸಾಕಷ್ಟು ಗಮನ ಕೊಡಬೇಕು.

5-30 P.M.

[MADAM SPEAKER in the Chair]

ನಾನು ನಿಮ್ಮ ಸರ್ಕಾರವನ್ನು ಟೀಕೆ ಮಾಡುವ ದೃಷ್ಟಿಯಿಂದ ಹೇಳುತ್ತಿಲ್ಲ. ನೀವು ಬೇಕಾದಷ್ಟು ಘೋಷಣೆ ಮಾಡಿದ್ದೀರಿ, ನಿಮ್ಮ ನಾಯಕರು ಘೋಷಣೆ ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಘೋಷಣೆ ಮಾಡಿದ್ದೀರಿ. ಅದನ್ನು ನಾವೂ, ನೀವೂ ಮರೆಯುವಹಾಗಿಲ್ಲ. ಅನೇಕ ಮಾತುಗಳನ್ನು ಜನತೆಗೆ ಬೇಕಾದಷ್ಟು ರೂಪದಲ್ಲಿ ಹೇಳಿದ್ದೀರಿ. ನೀವು ಹೇಳಿರುವುದನ್ನು ಕಾರ್ಯರೂಪದಲ್ಲಿ ತರದೆ ಹೋದರೆ ನಿಮಗೆ ಬಡಜನರ ಶಾಪ ತಪ್ಪದಿರಲಾರದು. ಆಡಳಿತವನ್ನು ನಡೆಸಲು ಇರತಕ್ಕ ಸಿಬ್ಬಂದಿಯನ್ನು ಕಡಮೆ ಮಾಡಿ ನಿಮ್ಮ ಆಯವ್ಯಯವನ್ನು ಸರಿತೂಗಿಸಿಕೊಳ್ಳಿ ಎಂದು ಪ್ರಾರ್ಥನೆ ಮಾಡುತ್ತೇನೆ.

ನಿಮ್ಮ ಕಡೆಯಿರುವ ಜನರಲ್ಲಿ 50 ಜನರನ್ನು ಬಿಟ್ಟರೆ ಉಳಿದವರು ಕಾಂಗ್ರೆಸ್ಸಿನವರೇ ಅಲ್ಲ. ಮಹಾತ್ಮಗಾಂಧಿಯವರ ಹೆಸರಿಗೆ, ಕಾಂಗ್ರೆಸ್ ಸಂಸ್ಥೆಯ ಹೆಸರಿಗೆ ಕೆಟ್ಟ ಹೆಸರು ಬರುವಂಥ ಜನ ರನ್ನು ಸೇರಿಸಿಕೊಂಡಿದ್ದೀರಿ. ನಾನು ಈ ಸಂದರ್ಭದಲ್ಲಿ ತಮಗೆ ಗೌರವಯುತವಾಗಿ ಕೆಲವು ವಿಷಯಗಳನ್ನು ಸೂಚನೆ ಮಾಡಲು ಬಯಸುತ್ತೇನೆ.

ರೇಷ್ಮೆ ಬೆಳೆಯಿಂದ ಮೈಸೂರು ರಾಜ್ಯಕ್ಕೆ ಚಿನ್ನದ ಹೊದಿಕೆ ಹಾಕಬಹುದಾಗಿದೆ ಪ್ರಾಮುಖ್ಯವಾದ ಕೈಗಾರಿಕೆಗಳಲ್ಲಿ ರೇಷ್ಮೆ ಕೈಗಾರಿಕೆ ಉತ್ತಮ ರೀತಿಯಲ್ಲಿ ಬೆಳೆಯಬೇಕಾದ್ದು

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಅತ್ಯಾವಶ್ಯಕ. ನಮ್ಮದು ಚಿನ್ನದ ನಾಡು ಎಂದು ಸಮರ್ಥಿಸಿಕೊಳ್ಳಬೇಕಾದರೆ, ಈ ಉದ್ಯಮಕ್ಕೆ ರೋಗರಹಿತವಾದ ಮೊಟ್ಟೆಗಳನ್ನು ತಾವು ಕೊಡಬೇಕು. ಈಗ ಕೊಡದೆ ತಪ್ಪು ಮಾಡಿದರೆ ದೇವರ ಮುಂದೆ ಹೋಗಬೇಕಾಗುತ್ತದೆ.

ರಾಜ್ಯದಲ್ಲಿ ಅರಣ್ಯದ ಬೆಳೆಸುವಿಕೆ ಅತ್ಯಾವಶ್ಯಕ. ಹಣ ಖರ್ಚುಮಾಡಿ, ಗುಂಡಿತೋಡಿ, ಸಸಿಗಳನ್ನು ನೆಟ್ಟಿದ್ದೇವೆ ಎಂದು ವರದಿಗಳಲ್ಲಿ ಬರೆಯುವುವರಿಂದ ಏನೂ ಉಪಯೋಗವಿಲ್ಲ. ಅರಣ್ಯ ಸಂಪತ್ತು ಹೆಚ್ಚದೆ ರಾಜ್ಯದಲ್ಲಿ ಮಳೆಹೋಯಿತು. ನಾವಾಗಲೀ, ನೀವಾಗಲೀ ಅನ್ಯಾಯ ಮಾಡಿದರೂ ಭಗವಂತ ರಾಜ್ಯದ ಜನತೆಗೆ ಅನ್ಯಾಯಮಾಡುವುದಿಲ್ಲ. ಆದ್ದರಿಂದ ಅರಣ್ಯವನ್ನು ಬೆಳೆಸುವುದರ ಕಡೆಗೆ ಹೆಚ್ಚು ಗಮನ ಹರಿಸಬೇಕೆಂದು ಹೇಳುತ್ತೇನೆ.

ನಿಮ್ಮದು ಬಹುಮತದಿಂದ ಗೆದ್ದಿರುವ ಪಕ್ಷವಾದರೂ, ನಿಮಗೆ ಪ್ರತಿಯೊಂದಕ್ಕೂ ಮೇಲಿನಿಂದ ಘೋಷಣೆ ಬರಬೇಕು, ನೀವು ಸ್ವತಂತ್ರವಾಗಿ ಸರ್ಕಾರ ರಚಿಸಿದ್ದೀರಿ, ಸ್ವತಂತ್ರವಾಗಿ ಏನಾದರೂ ಮಾಡಿದ್ದೀರಿ ಎಂದು ಹೇಳುವುದಕ್ಕೆ ನನಗೆ ನಂಬಿಕೆ ಇಲ್ಲ. ಯಾರನ್ನೋ ಕೇಳಿ ಕೇಳಿ ಮಾಡತಕ್ಕದ್ದನ್ನು ಎಷ್ಟು ದಿವಸ ಮಾಡುತ್ತೀರಿ ?

ಶ್ರೀ ಅರಸು ಅವರಲ್ಲಿ ವೈಯಕ್ತಿಕವಾಗಿ ಗೌರವವಿಟ್ಟಿರುವವರಲ್ಲಿ ನಾನು ಒಬ್ಬ. ಆದರೆ ಅವರ ಆಡಳಿತದಲ್ಲಿ ದಕ್ಷತೆ ಕಡಿಮೆಯಾದಾಗಲಾಗಲೀ, ಆಶಿಸ್ತು ತಾಂಡವವಾಡಿದಾಗಲಾಗಲೀ, ಲಂಚಕೋರತನ ನಡೆದಾಗಲಾಗಲೀ ನಿರ್ದಾಕ್ಷಿಣ್ಯವಾಗಿ ಹೇಳುವುದಕ್ಕೆ ಮರೆಯುವುದಿಲ್ಲ. ಈ ಮಂತ್ರಿಮಂಡಲಕ್ಕೆ ಜನತೆಯ ಒಬ್ಬ ಪ್ರತಿನಿಧಿಯಾಗಿ ಹೇಳುತ್ತಿದ್ದೇನೆ ಎಂದು ತಿಳಿಯಬೇಕಾಗಿದೆ. ನಿಮ್ಮ ಹೆಸರು ಚರಿತ್ರೆಯಲ್ಲಿ ಬರೆಸಿಕೊಳ್ಳಬೇಕು ಎನ್ನುವ ಅಭಿಮಾನ ನಿಮಗೆ ಇದ್ದರೆ ವಿಧಾನಸೌಧವನ್ನು ಕಟ್ಟಿಸಿದಂತ ಒಬ್ಬ ವ್ಯಕ್ತಿ ನಿಮ್ಮ ಪಕ್ಷದ ನಾಯಕರಾಗಿ ಹೇಗೆ ಹೆಸರನ್ನು ಗಳಿಸಿದ್ದಾರೆಯೋ ಹಾಗೆ ಮೈಸೂರುರಾಜ್ಯದಲ್ಲಿ ನೀವು ಉಳಿಯಬೇಕಾಗಿದ್ದರೆ, ಈ ದಿವಸ ನಾನು ಹೇಳಿರತಕ್ಕ ಮಾತುಗಳನ್ನು ನೀವು ಮರೆಯಬಾರದು. ನಾವೂ, ನೀವೂ, ಈ ಮೈಸೂರು ದೇಶದ ಎರಡೂವರೆ ಕೋಟಿ ಜನತೆಯ ಮಧ್ಯೆ ಒಡಾಡಬೇಕಾಗಿದೆ. ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ ಆರ್ಥಿಕ ಸ್ಥಿತಿ ಮತ್ತು ವಿದ್ಯಾಭ್ಯಾಸದ ಸ್ಥಿತಿ ಉತ್ತಮವಾಗಬೇಕಾಗಿದೆ. ಅದಕ್ಕೆ ನೀವು ಏನು ಮಾಡಿದ್ದೀರಿ ? ಗ್ರಾಮಾಂತರದ ಹೆಣ್ಣು ಮಕ್ಕಳನ್ನು ಬೆಂಗಳೂರಿಗೆ ಕಾಲೇಜಿಗೆ ಸೇರಲು ಕರೆಸುತ್ತೀರಿ. ಎಷ್ಟು ದಿವಸ ಈ ರೀತಿಯಾಗಿ ಮಾಡುತ್ತೀರಿ ? ಗ್ರಾಮಾಂತರ ರೈತರ ದುಡ್ಡಿನಲ್ಲಿ ನಡೆಸತಕ್ಕ ಇಂಥ ವಹಿವಾಟು ಎಷ್ಟುದಿನ ನಡೆದೀತು ? ಸರ್ಕಾರದ ತಪ್ಪುಗಳನ್ನು ಎತ್ತಿ ತೋರಿಸುವುದಕ್ಕೆ ಜನ ಸಂಘಟಿತರಾಗಿದ್ದಾರೆ. ಬಡವನಾದರೈತ ದೇಶದ ಬೆನ್ನು ಮೂಳೆಯಾದ ರೈತನನ್ನ ಮರೆಯಬೇಡಿ. ಗ್ರಾಮಾಂತರದ ದಟ್ಟ ದರಿದ್ರ ರೈತರ ವಿಷಯದಲ್ಲಿ ನೀವು ಕರುಣೆಯಿಂದ ನೋಡಿ ಅವನನ್ನು ಉತ್ತಮಪಡಿಸದೆ ಹೋದರೆ ಪ್ರಾಯಶಃ ಸರ್ಕಾರ ಬಹಳ ದಿವಸ ಉಳಿಯುವುದಿಲ್ಲ.

ಒಂದು ಬಂಗಲೆ, ಒಂದು ಕಾರು ಇಟ್ಟುಕೊಳ್ಳುವುದಕ್ಕೇನಾದರೂ ನೀವು ಮಂತ್ರಿಗಳಾಗಿದ್ದರೆ ದೇಶದ ಎರಡೂವರೆ ಕೋಟಿ ಜನ, ಯಾವ ಪಕ್ಷದವರೇ ಆಗಿರಿಲಿ ನಿಮ್ಮನ್ನು ಕ್ಷಮಿಸುವುದಿಲ್ಲ. ನಿಮ್ಮನ್ನು ಉಳಿಸುವುದಕ್ಕೆ ನಿಮಗೆ ಚೈತನ್ಯವನ್ನು ತುಂಬುವುದಕ್ಕೆ ಹೇಳಿದ್ದೇನೆ. ನನ್ನ ಅನೇಕ ಜನ ಮಿತ್ರರು ಮಂತ್ರಿಗಳಾಗಿದ್ದಾರೆ ; ಅದರಲ್ಲಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ರೆವೆನ್ಯೂ ಖಾತೆಯನ್ನು ಒಪ್ಪಿಕೊಂಡಿದ್ದಾರೆ. ಯಾರಿಗೂ ಹೆಚ್ಚು ಬಯ್ಯುವುದಿಲ್ಲ. ರೆವೆನ್ಯೂ ಖಾತೆಯ ಮಂತ್ರಿಗಳಿಗೆ ಇರುವಷ್ಟು ಬೈಗುಳ ಇನ್ನು ಯಾರಿಗೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರು ರೈತರಮಕ್ಕಳು, ಒಳ್ಳೆಯ ವ್ಯವಸಾಯಗಾರರ ಮಕ್ಕಳು, ಒಳ್ಳೆಯ ಇಲಾಖೆ ತೆಗೆದುಕೊಂಡಿದ್ದಾರೆ ಅವರು ದಕ್ಷವಾಗಿ ಆಡಳಿತ ನಡೆಸಿ, ತಾಲ್ಲೂಕು ಕಚೇರಿಗಳನ್ನು ತನಿಖೆ ಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಹಿಂದೆ ಅನೇಕ ಮಂತ್ರಿಗಳು ಟಿ. ಎ. ತೆಗೆದುಕೊಳ್ಳುವುದಕ್ಕಾಗಿಯೇ ಪ್ರಯಾಣಮಾಡುತ್ತಿದ್ದರು. ಪತ್ರಿಕೆಗಳಲ್ಲಿ ಮೊದಲನೆಯ ಪುಟದಲ್ಲಿಯೇ ಮಂತ್ರಿಗಳ ಹೆಸರುಗಳು ಬರುತ್ತಿದ್ದವು. ನಾನು ಮುಖ್ಯಮಂತ್ರಿಯವರಲ್ಲಿ ಮತ್ತು ಅವರ ಸಹೋದ್ಯೋಗಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ, ಪ್ರವಾಸಮಾಡಬೇಕಾದರೆ ಏನು ಕೆಲಸವಿದೆ ಎನ್ನುವುದನ್ನು ವಿಮರ್ಶೆ ಮಾಡಿಕೊಂಡು ಕಾರು ಹತ್ತಿ. ಇಲ್ಲದೆ ಇದ್ದರೆ ರಾಜ್ಯದ ಎರಡೂವರೆ ಕೋಟಿ ಜನತೆ ನಿಮ್ಮನ್ನು ಶಪಿಸುತ್ತಾರೆ. ನಿಮ್ಮ ಆಡಳಿತದಲ್ಲಿರತಕ್ಕ ಎಲ್ಲ ಕಚೇರಿಗಳನ್ನೂ ಶುದ್ಧೀಕರಣ ಮಾಡಿ. ನಿಮ್ಮ ಪ ದವರೇ ಹೇಳಿದಂತೆ ನಿಮ್ಮ ಆಡಳಿತ ಚೆನ್ನಾಗಿಲ್ಲ. ನಮ್ಮ ಕಣ್ಣುಮುಂದೆಯೇ ಈಗ ನೀವು ಮಂತ್ರಿಗಳಿಗೆ ಮನೆಗಳನ್ನು ಕೊಟ್ಟಿದ್ದೀರಿ ಕುರ್ಚಿ ಇಲ್ಲ, ಬೆಲ್ ಇಲ್ಲ, ಕೆಲವು ಸೌಕರ್ಯಗಳಿಲ್ಲ

ವೆಂದರೆ ಕೆಲಸಮಾಡುವುದು ಕಷ್ಟವೆಂದು ನನಗೆ ಗೊತ್ತಿದೆ. ಎಷ್ಟು ಜನ ಪಕ್ಷದ ಸದಸ್ಯರನ್ನು ಸೂಪರ್‌ವಿಷನ್‌ಗೆ ಇಟ್ಟುಕೊಂಡಿದ್ದೀರಿ. ಶಾಸಕರಿಗೆ ಇರುವುದಕ್ಕೆ ವಸತಿ ಸೌಕರ್ಯವಿಲ್ಲದೆ ಇರುವಾಗ ನೀವು ಬಂಗಲೆಯಲ್ಲಿ ವಾಸ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೀರಿ. ಶಾಸಕರಾದವರಿಗೆ ಹೀಗೆ ಮಾಡುವಾಗ ಇನ್ನು ಜನತೆಗೆ ಎಷ್ಟು ಮಾತ್ರ ಸವಲತ್ತು ಕೊಡುತ್ತೀರಿ ?

ಹೆಣ್ಣುಮಕ್ಕಳಿಗೆ ಅಧಿಕಾರಬೇಕು ಎಂದು ಹೇಳತಕ್ಕವನು ನಾನು. ಹೆಣ್ಣುಮಕ್ಕಳಾದಭ್ಯ ನಮಗೆ ತಾಯಿ, ನೀವು ನಮ್ಮನ್ನು ಹಡೆದಿದ್ದೀರಿ, ಎತ್ತಿ ಹಾಲು ಕೊಟ್ಟಿದ್ದೀರಿ. ಒಳ್ಳೆಯಬುದ್ಧಿ ಕಲಿಸಿದ್ದೀರಿ, ತಾಯಿ ಆಗಿದ್ದೀರಿ ಸರಿಯೇ. ಮಂತ್ರಿಮಂಡಲ ಕಲುಷಿತವಾದರೆ ಅದನ್ನು ಟೀಕೆ ಮಾಡತಕ್ಕ ಸಂದರ್ಭಗಳು ಬರುತ್ತವೆ. ನಿಮ್ಮ ತಲೆಯಮೇಲೆ ಧರ್ಮದತಕ್ಕಡಿ ಇದೆ. ಸ್ವಲ್ಪ ಜನವಿರತಕ್ಕ ವಿರೋಧಪಕ್ಷದವರನ್ನು ಒಂದು ಕಡೆ ಹಾಕಿ ಸದಾಕಾಲ ಮಹಾಸರಸ್ವತಿ, ಮಹಾಲಕ್ಷ್ಮಿಯರು ಹೇಗೆ ಧರ್ಮವನ್ನು ತೂಗಿ ಬಡವರ ರಕ್ಷಿತರಾಗಿದ್ದಾರೋ ಅದೇ ರೀತಿಯಲ್ಲಿ ತಾವು ಅನ್ಯಾಯಕ್ಕೆ ಎಡಗೊಡದೆ ಈ ಮೈಸೂರು ರಾಜ್ಯದ ಮಂತ್ರಿ ಮಂಡಲ ಹೋಗದ ಹಾಗೆ ರಕ್ಷಣೆಮಾಡಿ ನಮ್ಮ ಟೀಕೆಗಳನ್ನು ಸದಾಕಾಲ ಗೌರವಿಸುವಂಥ ಸದ್ಬುದ್ಧಿ ತಮಗೆ ಉಂಟಾಗಲಿ. ತಾವು ಅಧಿಕಾರದಲ್ಲಿರುವಾಗ ಈ ದೇಶದ ಹೆಣ್ಣು ಮತ್ತು ಗಂಡು, ದೀನದಲಿತ ವರ್ಗಕ್ಕೆ ನ್ಯಾಯ ದೊರೆತು ಧರ್ಮ ಸ್ಥಾಪನೆಯಾಗುವಂತಹ ವ್ಯವಸ್ಥೆಯಾಗಲಿ. ಆ ರೀತಿ ಮೊದಲು ಸರ್ಕಾರಕ್ಕೆ ಭಗವಂತನು ಸದ್ಬುದ್ಧಿಯನ್ನು ಕೊಡಲಿ ಎಂದು ಎರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†**Smt. VIJAYA DESAI** (Chitapur).—Madam Speaker, at the outset I support the Supplementary as well as the interim Budget that are before the House today. I congratulate the Finance Minister for having presented the tax-free as well as interim budget after taking over as Finance Minister within a few hours. The budget actually is a clear-cut, open and straight forward budget. He has brought the budget from a camouflage to reality. The Finance Minister is justified in asking for some more time because he wants to have a fresh look at the financial position of our State as well as major problems which are facing our State. He wants more time to present a more purposeful budget somewhere in the month of June. Not only this. We are all aware of the fact that we are all facing an overall deficit of 30·5 crores and it is the duty of one and all of us to see that somehow this overall gap should be bridged up and we must think of some valuable, constructive and broad suggestions to bridge this overall gap. I have two suggestions to make. One is to tap the rural rich and the second is by means of levies and taxes.

The Hon. Minister has made a short reference in his speech that Budget Estimate for 1971–72 had estimated and overall deficit of Rs. 15.72 crores and very surprisingly it has shot up to Rs. 42.60 crores. When we look to the revised estimates we have got considerable increase in these estimates and the main reasons given for this increase are that there is a short fall of Rs. 10.27 crores in revenue receipts which has not been realised and Rs. 11 crores on irrigation projects, including the Cauvery projects. Cauvery projects are given due and considerablo attention. I do not understand why special reference is made te Cauvery. This means that our Krishna project has not come into the mind of the Finance Minister and it has not got its due share in the project programme. I request the Hon. Finance Ministr to drive hio attention towards this and provide adequate and considerable share te the Upper Krishna Project so that it can be completed. I feel it is the only major project in the North Mysore and I belong to that area. I

(SMT. VIJAYA DESAI)

urge upon the minister to probe into the shortfall in anticipated receipts. With all the paraphernalia that the Gorvernment has, I cannot understand why this amount of Rs. 10.27 crores have not been realised. I feel there is lethargy on the part of the Government departments and I request the Hon. Minister to gear up the Government machinery as well as plug every loophole.

Then out of 105 crores central assistance for the Centrally sponsored schemes we have received Rs. 45.25 crores. What happened to the remaining amount ? It is high time we ask the Central Government to disburse that grant as well.

As regards the assistance to Bangala Desh Refugees, Rs. 184 lakhs are supposed to be rised from the levy introduced and since this problem has been put an end to, I do not think we must stop this thing at this level but I feel some more levies should be introduced because this is a levy imposed on Entertainments Act, Stamp Act as well as the Sales Tax Act and on luxury articles some more levy can be imposed. By doing this we can have some more revenue which can improve the financial position of our State.

Then the biggest commitment of our Government that haunts every Hon. Member is Rs. 10 crores. This is due to the revision of emolument of Government employees and Dearness Allowance. I feel that the Government must have already thought of some solution before having these orders in mind. If they do not find out a solution it will hit the State Exchequer. So, not only the Government of India, Planning Commission and the Finance Commission should look into this matter but even the State Government must have equal interest to look into this matter and somehow it must be met with.

It is appealling and deploring to realise that an amount of Rs. 76 crores had been utilised by us in the form of overdraft and the Hon. Finance Minister is already thinking of putting an end to this and adopting more systematic efforts. It is highly commendable and I feel this should be done.

To improve the financial position of our State I would like to give you a suggestion. An expert study should be made to tap the rural rich. This involves some legal and constitution changes. That is why I say that an expert study should be made first to tap the rural rich. Measures should be taken to realise the amount of Rs- 10.27 crores from revenue receipts- More vigilant measures should be taken to check diversion of black monthy from the agricultural income, by the Industrial houses, big business houses. Efforts should be made to see that black money is not converted into white money through agricultural income. The Hon. Minister for Finance comes from an industrial family of industrialists and it is needless for me to mention this. He can plug evrey loophole.

Lastly I would like to say about the rural water supply, approach roads and development of weaker sections of the society. They should be given first priority in the budget.

With these few words I support the budget and thank the Chair for having given me time to speak.

Thank you.

† **Sri CHOWDA REDDY** (Chintamani) :

[*Spoke in Telugu*]

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).--ಅಧ್ಯಕ್ಷರೇ, ಈ ದಿವಸ ನಮ್ಮ ಅರ್ಥಸಚಿವರು ನಮ್ಮ ಮುಂದೆ ಮಂಡಿಸಿರತಕ್ಕಂಥ ಸಪ್ಲಿಮೆಂಟರಿ ಡಿಮ್ಯಾಂಡ್ ಮತ್ತು ನಾಲ್ಕು ತಿಂಗಳವರೆಗೆ ಮಂಡಿಸಿರುವ ತಾತ್ಕಾಲಿಕ ಆಯವ್ಯಯ ಪತ್ರ ಏನಿದೆ ಅವುಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಎರಡು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಅನೇಕ ಸ್ನೇಹಿತರು ಈ ಬಗ್ಗೆ ಕೆಲವು ಟೀಕೆಗಳನ್ನು ಕೂಡ ಮಾಡಿದರು. ಅರ್ಥಸಚಿವರು ಪ್ರಾರಂಭದಲ್ಲೇ ಹೇಳಿದ್ದಾರೆ, ಏನೆಂದರೆ, ನಾವು ಅಧಿಕಾರಕ್ಕೆ ಬಂದು ಎರಡು ದಿವಸಗಳು ಮಾತ್ರ ಆಗಿದೆ, ಆದ್ದರಿಂದ ಮುಂದೆ ಎಲ್ಲವನ್ನು ಪರಿಶೀಲನೆಮಾಡಿ ಜೂನ್ ತಿಂಗಳಲ್ಲಿ ನೇರವಾದಂಥ ಬಡ್ಜೆಟ್‌ನ್ನು ತರುತ್ತೇನೆ ಎಂಬುದಾಗಿ ಅವರು ಕೊಟ್ಟಿರತಕ್ಕಂಥ ಈ ಒಂದು ಆಶ್ವಾಸನೆಯ ಮೇಲೆ ನಾವು ಈಗಿನ ತಾತ್ಕಾಲಿಕ ಆಯವ್ಯಯ ಪತ್ರದ ಬಗ್ಗೆ ಟೀಕೆ ಮಾಡುವುದು ಅಷ್ಟು ಉಪಯುಕ್ತವಾಗುವುದಿಲ್ಲವೆಂದು ನಾನಾದರೂ ಕೂಡ ಭಾವಿಸುತ್ತೇನೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನಮ್ಮ ಜಿಲ್ಲೆ ಬಹಳ ಬಡತನದ ಜಿಲ್ಲೆ ಯಾಗಿದೆ. ನಮ್ಮ ಜಿಲ್ಲೆಯಲ್ಲಿ ಬರೀ ಬರಡು ಭೂಮಿ ಹೊಂದಿರುವ ರೈತಾಪಿ ಜನ ಜಾಸ್ತಿ ಇದ್ದಾರೆ, ಮತ್ತು ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಿದ್ದಾರೆ. ಈ ವಿಚಾರವನ್ನು ಈಗಾಗಲೇ ಸರ್ಕಾರ ದವರು ಮನಗಂಡಿದ್ದಾರೆ. ಹೇಮಾವತಿ ನೀರನ್ನು ತುಮಕೂರು ಜಿಲ್ಲೆಗೆ ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲಕ್ಕೆ ಕೊಡಬೇಕೆಂದು ನಾವು ಹಿಂದೆ ಈ ಸಭೆಯಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೆವು. ಅದಕ್ಕೆಸರಕಾರದವರು ಎರಡನೇ ಹಂತದಲ್ಲಿ ನೀರನ್ನು ಕೊಡುತ್ತೇವೆಂಬ ಆಶ್ವಾಸನೆಯನ್ನು ಸಹ ಕೊಟ್ಟಿದ್ದರು. ಈ ವಿಚಾರವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ ಮತ್ತು ಸಾಕಷ್ಟು ಕೆಲಸವನ್ನು ಸಹ ಮಾಡಿದ್ದಾರೆ. ಉಳಿದ ಕೆಲಸವನ್ನು ಜಾಗ್ರತೆ ಮಾಡುವಂತಾ ಗಲು ಸರ್ಕಾರದವರು ಈ ಬಗ್ಗೆ ಹೆಚ್ಚು ಹಣವನ್ನು ಒದಗಿಸಬೇಕು. ರೆಫ್ಟ್ ಬ್ಯಾಂಕ್ ಚಾನಲ್‌ನಿಂದ ನೀರನ್ನು ಕೊಡಬೇಕೆಂದು ಸರ್ಕಾರದವರನ್ನು ಅಲ್ಲಿಯವರು ಕೇಳಿಕೊಂಡಿದ್ದಾರೆ. ಈ ಚಾನಲ್ ಕೆಲಸ ನಡೆಯುತ್ತಿದೆ. ಅದನ್ನು ಆಳಪಡಿಸುವುದಾಗಲೀ, ಅಗಲಪಡಿಸುವುದಾಗಲೀ ಇದ್ದರೆ ಅದನ್ನು ತಕ್ಷಣ ಮಾಡಿಸಬೇಕು. ಈ ಕೆಲಸವನ್ನು ಜಾಗ್ರತೆ ಮಾಡದೆ ಹೋದರೆ ಮುಂದೆ ತುಮಕೂರು ಜಿಲ್ಲೆಯ ಗುಬ್ಬಿ, ತುರುವೇಕೆರೆ, ಕುಣಿಗಲ್ ಮುಂತಾದ ತಾಲ್ಲೂಕ್‌ಗಳಿಗೆ ತೊಂದರೆಯಾಗುತ್ತದೆಂದು ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಭಾರೀ ನೀರಾವರಿ ಯೋಜನೆಗಳ ಖಾತೆಯನ್ನು ಇಟ್ಟುಕೊಂಡಿರತಕ್ಕ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಹೆಚ್ಚು ನಿಗಾವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಯೋಜನೆಗಳ ಕೆಲಸಗಳಿಗೆ 11 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. 1973ನೇ ಜೂನ್‌ತಿಂಗಳೊಳಗೆ ಹೇಮಾವತಿ ಯೋಜನೆ ಕೆಲಸ ಮುಗಿಯಬೇಕಾಗಿದೆ, ಮುಗಿಸುತ್ತೇವೆಂದು ಈಗಾಗಲೇ ಸರ್ಕಾರದವರು ತೀರ್ಮಾನ ಮಾಡಿಕೊಂಡಿದ್ದಾರೆ. ಅಷ್ಟರಲ್ಲಿಯೇ ಲೆಫ್ಟ್ ಬ್ಯಾಂಕ್ ಚಾನ್‌ಲನ್ನು ಅಗಲಪಡಿಸಿ ತುಮಕೂರು ಜಿಲ್ಲೆಗೆ ನೀರನ್ನು ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ದುರದೃಷ್ಟ ವೆಂದು ಕಾಣುತ್ತದೆ, ತುಮಕೂರು ಜಿಲ್ಲೆ ನೀರಾವರಿಯಲ್ಲಿ ಎಲ್ಲ ಜಿಲ್ಲೆಗಳಿಗಿಂತಲೂ ನಿಕೃಷ್ಟವಾದಂಥ ಸ್ಥಿತಿಯಲ್ಲಿದೆ ಇರಿಗೇಷನ್‌ನಲ್ಲಿ 9 ಪರ್‌ಸೆಂಟ್‌ಗಿಂತ ಮುಂದೆ ಹೋಗಿಲ್ಲ. ಬೇರೆ ಜಿಲ್ಲೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಕೆಲವು ಜಿಲ್ಲೆಗಳು ಇರಿಗೇಷನ್‌ನಲ್ಲಿ 30 ರಿಂದ 40 ಪರ್‌ಸೆಂಟ್‌ವರೆಗೆ ಮುಂದೆ ಹೋಗಿದೆ ಆದರೆ ತುಮಕೂರು ಜಿಲ್ಲೆ ಮಾತ್ರ 8 ಅಥವಾ 9 ಪರ್‌ಸೆಂಟ್‌ಗಿಂತ ಮುಂದೆ ಹೋಗಿಲ್ಲ. ಈ ಕಾರಣದಿಂದ ಸರ್ಕಾರದವರು ದಯಮಾಡಿ ನಮ್ಮ ಜಿಲ್ಲೆಗೆ ಹೇಮಾವತಿ ಮತ್ತು ಭದ್ರಾ ಯೋಜನೆ ಗಳಿಂದ ನೀರನ್ನು ಒದಗಿಸುತ್ತಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಶಿರಾ, ಮಧುಗಿರಿ, ಪಾವಗಡ, ಚಿಕ್ಕನಾಯಕನಹಳ್ಳಿ, ನಾಗಮಂಗಲ ತಾಲ್ಲೂಕಿನ ಜನರು ನೀರಾವರಿ ಅನುಕೂಲ ಇಲ್ಲದೆ ಬಡತನದಿಂದ ಬೇಸತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಮಳೆಯಾಗುವುದು ಕೂಡ ವರ್ಷಕ್ಕೆ 20

(ಶ್ರೀ ಟಿ. ಬೈರಪ್ಪಾಜಿ)

ರಿಂದ 24 ಅಂಗುಲಗಳು ಮಾತ್ರ. ಕೆಲವು ವರ್ಷಗಳಲ್ಲಿ ಕೇವಲ 15 ರಿಂದ 20 ಅಂಗುಲದೊಳಗೇ ಇರುತ್ತದೆ. ಈ ಎಲ್ಲ ದೃಷ್ಟಿಯಿಂದ ನಮ್ಮ ಜಿಲ್ಲೆಯಲ್ಲಿ ಯಾವ ಕೈಗಾರಿಕೆಯೂ ಕೂಡ ಪ್ರಾಮುಖ್ಯತೆ ಪಡೆದಿಲ್ಲ. ರಾ ಮೆಟೀರಿಯಲ್ಸ್ ನಮ್ಮಲ್ಲಿ ಸಿಕ್ಕುವುದಿಲ್ಲ. ಈಗ ಇರತಕ್ಕಂಥ ಒಂದೇ ಮಾರ್ಗವೆಂದರೆ ಸರ್ಕಾರದವರು ನಮ್ಮ ಜಿಲ್ಲೆಗೆ ಹೇಮಾವತಿ ಮತ್ತು ಭದ್ರಾ ಯೋಜನೆಗಳಿಂದ ನೀರನ್ನು ಒದಗಿಸಿ ಕೊಡುವುದು. ಈ ಮೂಲಕ ನಮ್ಮ ಜಿಲ್ಲೆಯಲ್ಲಿ ವ್ಯವಸಾಯಿಕ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವುದು ಸರ್ಕಾರದ ಕರ್ತವ್ಯವಾಗಿದೆಯೆಂದು ನಾನಾದರೂ ಕೂಡ ಭಾವಿಸಿದ್ದೇನೆ. ಈ ಎರಡು ಯೋಜನೆಗಳನ್ನು 1973ನೇ ಇಸವಿಯೊಳಗೇ ಮುಗಿಸಬೇಕಾಗಿದೆ. ಏಕೆಂದರೆ ನಮ್ಮ ಅಗ್ರಿಮೆಂಟ್ ಪ್ರಕಾರ 1974ರೊಳಗೆ ನಾವು ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ನಮ್ಮ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವ ಹಕ್ಕು ನಮಗೆ ಹೋಗಬಹುದು. ಆದ್ದರಿಂದ ಹೇಮಾವತಿ ಮತ್ತು ಭದ್ರಾ ಯೋಜನೆಗಳನ್ನು ಜಾಗ್ರತೆ ಮುಗಿಸಿ ನಮ್ಮ ಜಿಲ್ಲೆಗೆ ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕ್‌ಗೆ ಜಾಗ್ರತೆ ನೀರನ್ನು ಒದಗಿಸಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯದ ಬಾಬಿಗೆ ಈಗ ಏನು ಹಣ ಕೇಳಿದ್ದಾರೆ, ಅದು ಸಾಲದೆಂದು ನಾನು ಭಾವಿಸುತ್ತೇನೆ. ಕೆಲವು ಜನ ರೈತರು ಬಾವಿ ತೋಡಿಸಲು ಸರ್ಕಾರದಿಂದ 3 ರಿಂದ 5 ಸಾವಿರ ರೂಪಾಯಿಗಳವರೆಗೆ ಸಾಲ ಪಡೆದು ಬಾವಿ ತೋಡಿಸಿದರು. ಈ ಹಣದಿಂದ ಕೆಲವು ಬಾವಿಗಳ ಕೆಲಸ ಪೂರ್ತಿಯಾಗಲಿಲ್ಲ, ಮತ್ತೆ ಕೆಲವು ಬಾವಿಗಳಲ್ಲಿ ನೀರು ಬರಲಿಲ್ಲ. ಇದರಿಂದ ಅನೇಕ ಜನ ರೈತರು ತೊಂದರೆಪಡುತ್ತಿದ್ದಾರೆ. ಇದರ ಕಷ್ಟ ವನ್ನು ತಪ್ಪಿಸಲು ಸರ್ಕಾರದವರೇ ತಾಲ್ಲೂಕ್‌ಗಳಿಗೆ ಎರಡು ಮೂರು ಅಥವಾ ನಾಲ್ಕು ಡ್ರಿಲಿಂಗ್ ಮಿಷನ್‌ಗಳನ್ನು ಒದಗಿಸಿ, ಎಲ್ಲಿ ನೀರು ಸಿಗುತ್ತದೆ, ಅಂತಹ ಕಡೆಗಳಲ್ಲಿ ಬಾವಿಗಳನ್ನು ತೋಡಿಸಿ ರೈತರಿಗೆ ನೀರಿನ ಅನುಕೂಲಗಳನ್ನು ಮಾಡಿಕೊಡಬೇಕು. ಇದಕ್ಕೆ ಆಗುವ ಖರ್ಚನ್ನು ಸಂಬಂಧಪಟ್ಟ ರೈತರಿಂದ ಸರ್ಕಾರದವರು ಕಂತುಗಳ ಮೂಲಕ ವಾಪಸ್ ತೆಗೆದುಕೊಳ್ಳುವ ಏರ್ಪಾಡನ್ನು ಮಾಡಬೇಕು. ಇದು ಬಹು ಮುಖ್ಯವಾದ ಅಂಶ. ಹೇಮಾವತಿಯ ನೀರನ್ನು ನಮ್ಮ ಜಿಲ್ಲೆಗೆ ಒದಗಿಸಿದ್ದರೆ ನಮ್ಮ ಜಿಲ್ಲೆಯ ರೈತರಿಗೆ ಅನೇಕ ರೀತಿಯಿಂದ ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಯ ಅನೇಕ ಭಾಗಗಳಲ್ಲಿ ತೆಂಗಿನ ತೋಟಗಳು ಇವೆ. ಹೇಮಾವತಿ ನದಿ ನೀರನ್ನು ಒದಗಿಸುವುದರಿಂದ, ಸೀಪೇಜ್ ವಾಟರ್ ಜಾಸ್ತಿಯಾಗಿ ನೀರಿನ ಅಂಶ ಜಾಸ್ತಿಯಾಗುತ್ತದೆ. ಇದರಿಂದ ತೆಂಗಿನ ಫಸಲು ಜಾಸ್ತಿಯಾಗುತ್ತದೆಂದು ಹೇಳುತ್ತೇನೆ. ಇದರ ಜೊತೆಗೆ ದನದ ಒಂದು ಸಂಪತ್ತನ್ನು ಹೆಚ್ಚು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಈ ಮೂಲಕ ನಮ್ಮ ಜಿಲ್ಲೆಯಲ್ಲಿ ಹಸಿರು ಕ್ರಾಂತಿಯಾಗುತ್ತದೆಂದು ನಾನಾದರೂ ಭಾವಿಸಿದ್ದೇನೆ. ಹೇಮಾವತಿ ನದಿ ನೀರನ್ನು ನಮ್ಮ ಜಿಲ್ಲೆಗೆ ಒದಗಿಸಿಕೊಡುವುದರಿಂದ, ಈಗ ನಮ್ಮ ಜಿಲ್ಲೆಯಲ್ಲಿ 9 ಪರ್‌ಸೆಂಟ್ ನೀರಾವರಿ ಏನು ಆಗುತ್ತಿದೆ, ಅದು ಹತ್ತೂವರೆ ಪರ್‌ಸೆಂಟ್ ಅಥವಾ 11 ಪರ್‌ಸೆಂಟ್‌ಗೆ ಬರಬಹುದು ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದರಿಂದ ಬಡತನವನ್ನು ಸಾಕಷ್ಟು ಪ್ರಮಾಣದಲ್ಲಿ ತಪ್ಪಿಸುವುದಕ್ಕೆ ಸಾಧ್ಯವಾಗದಿದ್ದರೂ ಕೂಡ ಕೊಂಚಮಟ್ಟಿಗಾದರೂ ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಯ ಶಾಸಕರೊಬ್ಬರು ಈಗ ರೆವಿನ್ಯೂ ಮಂತ್ರಿಗಳಾಗಿದ್ದಾರೆ. ಅವರಿಗೂ ಕೂಡ ಈ ಬಗ್ಗೆ ಹೆಚ್ಚಿನ ಅರಿವು ಇದೆ. ಏಕೆಂದರೆ ಅವರ ತಾಲ್ಲೂಕಿನ ಜನರು ಕೂಡ ಕಷ್ಟದಿಂದ ನರಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಹೇಮಾವತಿಯೋಜನೆಯ ನೀರನ್ನು 1973ನೇ ಜೂನ್ ಒಳಗೆ ಹಾಸನ ಜಿಲ್ಲೆಗೆ ಕೊಡಬೇಕೆಂದು ಏನು ನಿರ್ಧಾರ ಮಾಡಿಕೊಂಡಿದ್ದಾರೆ, ಅದೇ ಕಾಲಕ್ಕೆ ನಮ್ಮ ತುಮಕೂರು ಜಿಲ್ಲೆಗೂ ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

6-00 P.M.

ಇನ್ನು ತುಮಕೂರು ಜಿಲ್ಲೆಯಲ್ಲಿ ತುರುವೇಕೆರೆ, ತಿಪಟೂರು ಮುಂತಾದ ತಾಲ್ಲೂಕುಗಳಲ್ಲಿ ತೆಂಗಿನ ತೋಟಗಳಿಗೆ ಅಣೆಗಳನ್ನು ಹಾಕಿಸಿಕೊಡಬೇಕೆಂದು ನಾವು ಸರ್ಕಾರದವರನ್ನು ಸುಮಾರು 8-10 ವರ್ಷಗಳಿಂದ ಕೇಳುತ್ತಿದ್ದೇವೆ. ಆದ್ದರಿಂದ ತೆಂಗಿನ ಅಣೆಗಳನ್ನು ಸರ್ಕಾರದವರು ಮಾಡಿಸಿ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಯೋಜನೆಯನ್ನು ಸರ್ಕಾರದವರು ಕಾರ್ಯಗತ ಮಾಡುವುದಾದರೆ ತೆಂಗಿನ ಗಿಡದಲ್ಲಿ 50 ತೆಂಗಿನಕಾಯಿ ಬಿಡುವ ಮರದಲ್ಲಿ 100 ತೆಂಗಿನಕಾಯಿ ಬಿಡತಕ್ಕಂಥ ಅವಕಾಶ ಇದೆ. ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿ, ಮತ್ತು ತಿಪಟೂರು ತಾಲ್ಲೂಕಿನಲ್ಲಿ ಈ ತೆಂಗಿನ ಅಣೆಯನ್ನು ಹಾಕತಕ್ಕಂಥಾ ಯೋಜನೆಯನ್ನು ದುರಾದೃಷ್ಟ

ವಶಾತ್ ಯಾವುದೋ ಕಾರಣದಿಂದ ಹಿಂದಿನ ಸರ್ಕಾರ ನಿಲ್ಲಿಸಿತ್ತು. ತೆಂಗಿನ ತೋಟಗಳಿಗೆ ತೆಂಗಿನ ಅಣೆಗಳನ್ನು ಹಾಕಿಸಿಕೊಡುವುದಕ್ಕೆ ಸರ್ಕಾರದವರು ಏನು ಹಣವನ್ನು ನಿಗದಿ ಮಾಡುತ್ತಾರೆಯೋ ಅದನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ ಆ ಕೆಲಸವನ್ನು ಮಾಡಿಕೊಡಿ ಎಂದು ನಾವು ಅನೇಕಸಾರಿ ಮನವಿ ಮಾಡಿಕೊಂಡಿದ್ದೇವೆ. ಆದರೆ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈಗ ಸರ್ಕಾರದವರು ಬದು ಅಥವಾ ಕಾಂಟೂರ್ ಬಂಡಿಂಗ್ ಎಂದು ಏನು ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದಾರೆ ಅದಕ್ಕೆ ಖರ್ಚು ಮಾಡತಕ್ಕಂಥಾ ಅರ್ಧ ಹಣವನ್ನು ಈ ತೆಂಗಿನ ತೋಟಗಳಿಗೆ ಅಣೆಗಳನ್ನು ಹಾಕಿಸುವುದಕ್ಕೆ ಉಪಯೋಗಿಸಬೇಕು. ಉಳಿದ ಅರ್ಧ ಹಣವನ್ನು ಬದು ಅಥವಾ ಕಾಂಟೂರ್ ಬಂಡಿಂಗ್ ಹಾಕಿಸುವುದಕ್ಕೆ ಬೇಕಾದರೆ ಉಪಯೋಗಿಸಿಕೊಳ್ಳಲಿ. ಈ ವಿಚಾರವನ್ನು ನಾವು ಸರ್ಕಾರಕ್ಕೂ ಮನವಿ ಮಾಡಿಕೊಂಡಿದ್ದೇವೆ, ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ನಾನು ಮಾನ್ಯ ಅರ್ಥ ಸಚಿವರಲ್ಲಿಯೂ ಮತ್ತು ಮುಖ್ಯ ಮಂತ್ರಿಗಳಲ್ಲಿಯೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಬಹಳ ಮುಖ್ಯವಾದ ವಿಚಾರ. ಇದನ್ನು ಸರ್ಕಾರದವರು ಕಾರ್ಯರೂಪಕ್ಕೆ ತರುವುದಾದರೆ ಇದು ನಮ್ಮ ತುಮಕೂರು ಜಿಲ್ಲೆಯಲ್ಲಿ ನಾಲ್ಕೈದು ತಾಲ್ಲೂಕುಗಳಲ್ಲಿ ಇದು ವರಪ್ರಸಾದವಾಗುತ್ತದೆ. ಆದ್ದರಿಂದ ಸರ್ಕಾರದವರು ತೆಂಗಿನ ತೋಟಗಳಿಗೆ ಅಣೆಗಳನ್ನು ಹಾಕಿಸಿಕೊಡಬೇಕು. ಈ ಅಣೆಗಳನ್ನು ಹಾಕಿಸಿಕೊಡುವುದಕ್ಕೆ ಸರ್ಕಾರದವರು ಏನು ಒಂದು ದರವನ್ನು ಸರ್ಕಾರದವರು ನಿಗದಿ ಮಾಡುತ್ತಾರೆಯೋ ಅದನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಈಗ ಕಾಂಟೂರ್ ಬಂಡಿಂಗ್ ಹಾಕಿಸತಕ್ಕಂಥಾ ಯೋಜನೆ ಏನಿದೆ ಅದನ್ನು ನಿಲ್ಲಿಸಿದರೂ ಚಿಂತೆಯಿಲ್ಲ. ಅಥವಾ ಅದಕ್ಕೆ ಅರ್ಧ ಹಣವನ್ನು ಖರ್ಚು ಮಾಡಿ ಈ ತೆಂಗಿನ ಅಣೆಗಳನ್ನು ಹಾಕಿಸುವುದಕ್ಕೆ ಅರ್ಧ ಹಣವನ್ನು ಖರ್ಚು ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗಾಗಲೇ ಹೆಚ್ಚು ಸಮಯ ಆಗಿರುವುದರಿಂದ ನಾನು ಇನ್ನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈಗ ನಮ್ಮ ಮಾನ್ಯ ಅರ್ಥ ಸಚಿವರು ಜನತೆಗೆ ಯಾವ ಒಂದು ಹೆಚ್ಚಿನ ಹೊರೆಯೂ ಇಲ್ಲದೆ ಇರುವಂತಹ ತಾತ್ಕಾಲಿಕವಾದ ಬಜೆಟ್ಟನ್ನು ಬಹಳ ಚಾಕಚಕ್ಯತೆಯಿಂದ ಅವರ ಒಂದು ಅನುಭವದ ಮೇಲೆ ಈ ಬಜೆಟ್ಟನ್ನು ತಯಾರು ಮಾಡಿದ್ದಾರೆ. ಜನತೆಗೆ ಅನುಕೂಲತೆಯನ್ನು ಒದಗಿಸಬೇಕಾದರೆ ಜನತೆ ತೆರಿಗೆಯನ್ನು ಕೊಡಲೇ ಬೇಕಾಗುತ್ತದೆ. ಈಗ ಯಾವ ಒಂದು ಹೊಸ ತೆರಿಗೆಯನ್ನು ಜನತೆಯ ಮೇಲೆ ಹಾಕದೆ ಈ ಬಜೆಟ್ಟನ್ನು ತಯಾರು ಮಾಡಿರುವುದರಿಂದ ಮಾನ್ಯ ಹಣಕಾಸಿನ ಮಂತ್ರಿಗಳನ್ನು ನಾವು ವಂದಿಸಬೇಕಾಗಿದೆ. ಹೆಚ್ಚು ತೆರಿಗೆ ಇಲ್ಲದೆ ಈ ದೇಶದಲ್ಲ ಸಮಾಜವಾದವನ್ನು ಜಾರಿಗೆ ತರಬೇಕು ಎನ್ನುವ ಆಶೆಯನ್ನು ಇಟ್ಟುಕೊಂಡು ಬಜೆಟ್ಟನ್ನು ತಯಾರು ಮಾಡಿ ಮಾನ್ಯ ಹಣಕಾಸಿನ ಮಂತ್ರಿಗಳು ಅದನ್ನು ಈ ದಿವಸ ನಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಹಣಕಾಸಿನ ಮಂತ್ರಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ದೇಶದಲ್ಲಿ ಇನ್ನೂ ಅನೇಕ ಕೆಲಸಕಾರ್ಯಗಳು ಆಗಬೇಕಾದರೆ ಅದಕ್ಕೆಲ್ಲಾ ಹಣಬೇಕಾಗುತ್ತದೆ. ಬಡತನವನ್ನು ಮಂತ್ರಿಗಳಿಂದ ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರಾದರೂ ಆ ರೀತಿ ಹೇಳಿದರೆ ಅದನ್ನು ತಪ್ಪು ಎಂದು ಹೇಳಬೇಕಾಗುತ್ತದೆ. ಯಾರಿಗೂ ಹೊರೆಯಾಗದ ರೀತಿಯಲ್ಲಿ ಈ ದೇಶದ ಜನತೆಗೆ ಅನುಕೂಲ ಮಾಡುವ ದೃಷ್ಟಿಯಿಂದ ಮಾನ್ಯ ಅರ್ಥ ಸಚಿವರು ಮುಂದೆ ಬಜೆಟ್ಟನ್ನು ತಯಾರು ಮಾಡಿ ಈ ಸಭೆಯ ಮುಂದೆ ಮಂಡಿಸುತ್ತಾರೆ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸಿ ಈಗ ಸಭೆಯ ಮುಂದಿಟ್ಟಿರುವ ತಾತ್ಕಾಲಿಕ ಬಜೆಟ್ಟನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

MADAM SPEAKER.—The House will now rise to meet tomorrow at 1 P.M.

———

The House adjourned at Five Minutes past Six of the Clock to meet again at one of the Clock on Tuesday the 28th March 1972.

———